
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

08 ಏಪ್ರಿಲ್ 2015 ಪುಟ 20 ರೂ. 15/-




ಕಾಫ್ಕಾಲ್ಯಾಂಡ್ ಭಾರತ



ಸಾವಿನಲ್ಲೂ ಜಾತಿ


ರವಿಯ ರಿಯಲ್ ಎಸ್ಟೇಟ್ ದಂಧೆ



ಅರ್ಥವಿಲ್ಲದ ಚಿಮೂ ತಕರಾರು

ಮೈಸೂರು

ಡ್ಡಿ ದೊರೆಗೆ ಗನೇ ಬಲಿ





ಮದ್ದೂರು

ತಮ್ಮಣ ಪಟಾಲಂನ ಅಂಧಾದರ್ಭಾರ್

ಉತ್ತರಕನ್ನಡ

ಎಡಬಿಡಂಗಿ ಶಾಸಕಿ ಶೆಟ್ಟಿಯಮ್ಮ





ಹಾವೇರಿ

ಜನಪದ ವಿವಿ ಗೋಲ್‌ಮಾಲ್

ಮಾತೃಭಾಷೆಯಲ್ಲಿ ಶಿಕ್ಷಣ: ಕನ್ನಡ ಬಂಧುಗಳಲ್ಲಿ ಮನವಿ

ಮಾತೃಭಾಷೆಯಲ್ಲಿ ಶಿಕ್ಷಣ ಮಾಧ್ಯಮ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ಪ್ರತಿಕೂಲ ತೀರ್ಪು ದೊಡ್ಡ ಆಘಾತವನ್ನೇ ನೀಡಿದೆ. ಮಾತೃಭಾಷೆಯು ಶಿಕ್ಷಣದ ಮಾಧ್ಯಮವಾಗಿರಬೇಕು ಎಂದು ನಂಬಿದ್ದ ಮತ್ತು ಪ್ರತಿಪಾದಿಸುತ್ತಿದ್ದ ಎಲ್ಲರಲ್ಲಿಯೂ ನಿರಾಸೆ, ವಿಷಾದ ಹಾಗೂ ನೈತಿಕ ಪ್ರತಿರೋಧಗಳು ಕುದಿಯತೊಡಗಿವೆ. ಸರ್ವೋಚ್ಚ ನ್ಯಾಯಾಲಯದ ಪ್ರತಿಕೂಲ ತೀರ್ಪಿನ ನಂತರ ಕರ್ನಾಟಕದಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮಾತೃಭಾಷಾ ಮಾಧ್ಯಮದ ವಿಷಯದಲ್ಲಿ ರಾಷ್ಟ್ರೀಯ ವಿಚಾರಸಂಕಿರಣವನ್ನು ಏರ್ಪಡಿಸಿದ್ದು, ಸಮಾನ ಶಿಕ್ಷಣಕ್ಕಾಗಿ ಜನಾಂದೋಲನದ ಗೆಳೆಯರು ಕ್ರಿಯಾತ್ಮಕವಾಗಿ ತೊಡಗಿಕೊಂಡಿರುವುದು ಈ ಹಾದಿಯಲ್ಲಿ ನಡೆದ ಮಹತ್ವದ ಪ್ರಯತ್ನಗಳಾಗಿವೆ. ಕರ್ನಾಟಕದ ಸಾಕ್ಷಿಪ್ರಜ್ಞೆಯಂತಿರುವ ದೇವನೂರ ಮಹಾದೇವ ಅವರು ಕನ್ನಡವು ಪ್ರಾಥಮಿಕ ಹಂತದಲ್ಲಿ ಕಲಿಕೆಯ ಮಾಧ್ಯಮವಾಗುವತನಕ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸುವ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಸ್ವೀಕರಿಸುವುದಿಲ್ಲ ಎಂದು ಪರಿಷತ್ತಿನ ಮನವಿಯನ್ನು ನಿರಾಕರಿಸುವ ಮೂಲಕ ಹೊಸಸಂಚಲನ ಸೃಷ್ಟಿಯಾಗಿದೆ. ಇದರಿಂದ ಸರಕಾರ ಮಟ್ಟದಲ್ಲೂ, ಸಾಂಸ್ಕೃತಿಕ ಲೋಕದಲ್ಲೂ, ಶೈಕ್ಷಣಿಕ ಬದುಕಿನ ವಿಭಿನ್ನ ಸ್ತರಗಳಲ್ಲಿಯೂ ಈ ಕುರಿತಂತೆ ತಾತ್ವಿಕ ಜಿಜ್ಞಾಸೆ ಹಾಗೂ ಹೋರಾಟದ ದಾರಿಗಳ ಹುಡುಕಾಟಕ್ಕೆ ಚಾಲನೆ ದೊರೆತಿದೆ. ಈ ನಿಟ್ಟಿನಲ್ಲಿ ಮತ್ತಷ್ಟು ತಾತ್ವಿಕ ಸ್ಪಷ್ಟತೆ ಹಾಗೂ ಚಳವಳಿಯ ಮಾರ್ಗಗಳನ್ನು ಕಂಡುಕೊಳ್ಳುವುದಕ್ಕೆ ಕರ್ನಾಟಕ ಜನಸಾಹಿತ್ಯ ಸಂಘಟನೆಯು ಧಾರವಾಡದಲ್ಲಿ ಎರಡು ದಿನಗಳ ರಾಷ್ಟ್ರಮಟ್ಟದ ಚಿಂತನಾ ಸಮಾವೇಶ ಸಂಘಟಿಸುತ್ತಿದೆ. ಬಹುತೇಕ ಕನ್ನಡಪರ ಹೋರಾಟಗಳ ಹುಟ್ಟಿಗೆ ನೆಲೆಯಾದ ಧಾರವಾಡದಲ್ಲಿ ಮಾತೃಭಾಷಾ ಮಾಧ್ಯಮ ಪರವಾದ ಹೋರಾಟಕ್ಕೂ ಚಾಲನೆ ಸಿಗಬಹುದೆಂಬ ಆಶಾವಾದದಿಂದ ಈ ಸಮಾವೇಶವನ್ನು ಸಂಘಟಿಸಲಾಗಿದೆ.

ಈ ಸಮಾವೇಶಕ್ಕೆ ಮಾತೃಭಾಷಾ ಮಾಧ್ಯಮದ ವಿಷಯದಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿರುವ ನಾಡಿನ ಚಿಂತಕರು, ಚಳವಳಿಗಾರರು ಹಾಗೂ ಸಂಘಟನಾ ಪ್ರತಿನಿಧಿಗಳನ್ನು ಆಹ್ವಾನಿಸಲಾಗುತ್ತಿದೆ. ಈ ಚಳವಳಿಯು ಕರ್ನಾಟಕದಾಚೆಯೂ ವಿಸ್ತರಣೆಯನ್ನು ಪಡೆಯುವ ಅಗತ್ಯವಿರುವುದರಿಂದ, ಭಾರತದ ಬೇರೆಬೇರೆ ರಾಜ್ಯಗಳ ಚಿಂತಕರು ಹಾಗೂ ಚಳವಳಿಗಾರರನ್ನು ಆಹ್ವಾನಿಸಲಾಗಿದೆ. ಒಟ್ಟಿನಲ್ಲಿ ಮಾತೃಭಾಷಾ ಮಾಧ್ಯಮದ ಪರವಾಗಿ ಚಿಂತನೆ ಹಾಗೂ ಕ್ರಿಯೆಯಲ್ಲಿ ತೊಡಗಿರುವ ಚಿಂತಕರು, ಸಾಹಿತಿಗಳು, ಕಾನೂನು ತಜ್ಞರು, ಪತ್ರಕರ್ತರು, ಕಲಾವಿದರು, ಶಿಕ್ಷಕರು, ಸಂಘಟನೆಗಳ ಪ್ರತಿನಿಧಿಗಳು, ವಿವಿಧ ಅಕಾಡೆಮಿ-ಪ್ರಾಧಿಕಾರಗಳ ಅಧ್ಯಕ್ಷರು, ಮಾತೃಭಾಷಾ ಮಾಧ್ಯಮದಲ್ಲಿ ಶಾಲೆಗಳನ್ನು ನಡೆಸುತ್ತಿರುವವರು-ಹೀಗೆ ಬಹುಮುಖಿ ವಲಯಗಳ ಪ್ರತಿನಿಧಿಗಳನ್ನು ಈ ಸಮಾವೇಶವು ಒಳಗೊಳ್ಳುತ್ತಿದೆ. ನೀವೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಮನವಿ.

ಇಂಥ ಒಂದು ಚಾರಿತ್ರಿಕ ಸಮಾವೇಶವನ್ನು ತಮ್ಮಂಥ ಪ್ರಗತಿಪರ ಹಾಗೂ ಕನ್ನಡ ಪರ ಗೆಳೆಯರು ಹಾಗೂ ಸಂಘಟನೆಗಳ ಸಂಗಾತಿಗಳ ಸಹಕಾರವನ್ನು ನೆಚ್ಚಿ ಸಂಘಟಿಸಲಾಗುತ್ತಿದೆ. ಅತ್ಯಂತ ಸರಳವಾಗಿ ನಡೆಯಲಿರುವ ಈ ಸಮಾವೇಶದ ಅಂದಾಜು ಖರ್ಚು-ವೆಚ್ಚ ಸುಮಾರು 4,00,000-00 (ನಾಲ್ಕು ಲಕ್ಷ) ರೂಪಾಯಿಗಳು. ದಯವಿಟ್ಟು ಈ ಕೆಳಗಿನ ಬ್ಯಾಂಕ್ ಖಾತೆಗೆ ತಮಗೆ ಸಾಧ್ಯವಾದಷ್ಟು ಹಣಕಾಸಿನ ನೆರವನ್ನು ನೀಡಿ ಕೈಜೋಡಿಸಲು ವಿನಂತಿಸಲಾಗಿದೆ.

ಭಾರತೀಯ ಸ್ಟೇಟ್ ಬ್ಯಾಂಕ್ ಖಾತೆ ಸಂ. 32879231849, ಕರ್ನಾಟಕ ವಿಶ್ವವಿದ್ಯಾಲಯ ಆವರಣ, ಐ.ಎಫ್.ಎಸ್. ಕೋಡ್. SBIN 0001728 ಚೆಕ್ ಅಥವಾ ಡಿ.ಡಿ.ಗಳನ್ನು ಅಂಚೆ ಮೂಲಕ ಹಣ ಕಳಿಸುವವರು, ಈ ಕೆಳಗಿನ ವಿಳಾಸಕ್ಕೆ ಕಳಿಸಬಹುದಾಗಿದೆ. ಚೆಕ್ ಅಥವಾ ಡಿ.ಡಿ.ಗಳನ್ನು ಡಾ. ಸಂಜೀವ ಕುಲಕರ್ಣಿ ಹಾಗೂ ಶ್ರೀಶಂಕರ ಹಲಗತ್ತಿಯವರ ಹೆಸರಿನಲ್ಲಿ ಕಳಿಸಲು ವಿನಂತಿಸಿದೆ.

■ ಎಂ.ಡಿ.ಒಕ್ಕುಂದ

ಕರ್ನಾಟಕ ಜನಸಾಹಿತ್ಯ ಸಂಘಟನೆ ಧಾರವಾಡ
ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು

ಸಮಾನ ಶಿಕ್ಷಣಕ್ಕಾಗಿ ಜನಾಂದೋಲನ

ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮ: ರಾಷ್ಟ್ರೀಯ ಚಿಂತನಾ ಶಿಬಿರ

4-4-2015 ಹಾಗೂ 5-4-2015

ಸ್ಥಳ : ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ

ತಮ್ಮ ಬರುವಿಕೆಯನ್ನು ಬಯಸುವವರು
ಕರ್ನಾಟಕ ಜನಸಾಹಿತ್ಯ ಸಂಘಟನೆ, ಧಾರವಾಡ
ಶಿಬಿರದ ಸಂಘಟನಾ ಸಮಿತಿ

4-4-2015

ಉದ್ಘಾಟನಾ ಸಮಾರಂಭ
10.30 ರಿಂದ 12.00

ಪ್ರಾಸ್ತಾವಿಕ : ಕೆ.ಆರ್.ದುರ್ಗಾದಾಸ್, ಧಾರವಾಡ
ಆಶಯ ನುಡಿ : ದೇವನೂರ ಮಹಾದೇವ, ಮೈಸೂರು
ಉದ್ಘಾಟನೆ : ಅನಿಲ್ ಸದ್ಗೋಪಾಲ್, ಭೂಪಾಲ್
ಉಪಸ್ಥಿತಿ : ಗುರುಲಿಂಗ ಕಾಪಸೆ, ಧಾರವಾಡ
ಅಧ್ಯಕ್ಷತೆ : ಪ್ರಸನ್ನ, ಹೆಗ್ಗೋಡು

ಗೋಷ್ಠಿ-1
ಮಾತೃಭಾಷಾ ಮಾಧ್ಯಮ: ತಾತ್ವಿಕ ಚಿಂತನೆ

ಚಿಂತನೆ -1
ಮಾತೃಭಾಷಾ ಮಾಧ್ಯಮ ಮಿಥ್ಯೆ ಮತ್ತು ವಾಸ್ತವ
12.00 ರಿಂದ 2.00
ವಿಷಯ ಮಂಡನೆ : ಅನಿಲ್ ಸದ್ಗೋಪಾಲ್, ಭೂಪಾಲ್
ವಿಸ್ತರಣೆ : ಜೋಗಾಸಿಂಗ್, ಪಟಿಯಾಲಾ
ವಿ. ಎಸ್. ಶ್ರೀಧರ, ಬೆಂಗಳೂರು
ಎಂ.ಎಸ್. ಆಶಾದೇವಿ, ಬೆಂಗಳೂರು

ಚರ್ಚೆ
ಅಧ್ಯಕ್ಷತೆ : ಕೆ.ವಿ.ನಾರಾಯಣ, ಬೆಂಗಳೂರು
2.00 ರಿಂದ 3.00 ಊಟ

ಚಿಂತನೆ- 2
ಮಾತೃಭಾಷಾ ಮಾಧ್ಯಮ: ಪ್ರಭುತ್ವಗಳ ನೀತಿಗಳು
3-00 ರಿಂದ 5-00
ವಿಷಯ ಮಂಡನೆ : ಪ್ರಿನ್ಸ್ ಗಜೇಂದ್ರಬಾಬು, ಮದ್ರಾಸ್
ವಿಸ್ತರಣೆ : ಎಚ್.ವಿ. ವಾಸು, ಬೆಂಗಳೂರು
ಮಲ್ಲಿಕಾರ್ಜುನ ಮೇಟಿ, ಶಿವಮೊಗ್ಗ
ಬಿ.ಕೆ.ಎಸ್.ವರ್ಧನ್, ಧಾರವಾಡ

ಚರ್ಚೆ
ಅಧ್ಯಕ್ಷತೆ : ವಿ. ಪಿ. ನಿರಂಜನಾರಾಧ್ಯ, ಬೆಂಗಳೂರು

ಚಿಂತನೆ- 3
ಮಾತೃಭಾಷಾ ಮಾಧ್ಯಮ: ಮಾರುಕಟ್ಟೆ ನೀತಿ ಹಾಗೂ ಭಾಷಾ ಸಾಮ್ರಾಜ್ಯಶಾಹಿ
5.00 ರಿಂದ 7.00
ವಿಷಯ ಮಂಡನೆ: ಹರಗೋಪಾಲ್, ಹೈದರಾಬಾದ್
ವಿಸ್ತರಣೆ : ಅಗ್ರಹಾರ ಕೃಷ್ಣಮೂರ್ತಿ, ಬೆಂಗಳೂರು
ಕೆ. ಪಿ. ಸುರೇಶ, ಬೆಂಗಳೂರು
ಕೆ.ಫಣಿರಾಜ್, ಮಂಗಳೂರು

ಚರ್ಚೆ
ಅಧ್ಯಕ್ಷತೆ : ರಾಜೇಂದ್ರ ಚೆನ್ನಿ, ಶಿವಮೊಗ್ಗ

5-4-2015

ಗೋಷ್ಠಿ-2
ಮಾತೃಭಾಷಾ ಮಾಧ್ಯಮ: ಹೋರಾಟದ ರೂಪರೇಷೆಗಳು

ಚಿಂತನೆ- 4
ಮಾತೃಭಾಷಾ ಮಾಧ್ಯಮ: ಕಾನೂನು ಹೋರಾಟ
9.00 ರಿಂದ 10.30
ವಿಷಯ ಮಂಡನೆ : ರವಿವರ್ಮ ಕುಮಾರ್, ಬೆಂಗಳೂರು
ಜೆ. ಎಂ. ಗಂಗಾಧರಯ್ಯ, ಧಾರವಾಡ
ಜಿನದತ್ತ ದೇಸಾಯಿ, ಬೆಳಗಾವಿ
ಬಸವಪ್ರಭು ಹೊಸಕೇರಿ, ಧಾರವಾಡ

ಚರ್ಚೆ
ಅಧ್ಯಕ್ಷತೆ : ಕೋ. ಚೆನ್ನಬಸಪ್ಪ, ಬೆಂಗಳೂರು

ಚಿಂತನೆ- 5
ಮಾತೃಭಾಷಾ ಮಾಧ್ಯಮ: ರಾಜಕೀಯ ಹೋರಾಟ
10.30 ರಿಂದ 12.00
ವಿಷಯ ಮಂಡನೆ : ವೈ.ಎಸ್.ವಿ. ದತ್ತ, ಕಡೂರು
ಜಿ.ವಿ ಶ್ರೀರಾಮ ರೆಡ್ಡಿ, ಕೋಲಾರ
ರವಿಕೃಷ್ಣಾ ರೆಡ್ಡಿ, ಬೆಂಗಳೂರು
ದಿನೇಶ ಅಮಿನ್‌ಮಟ್ಟು, ಬೆಂಗಳೂರು

ಚರ್ಚೆ
ಅಧ್ಯಕ್ಷತೆ : ಎಲ್. ಹನುಮಂತಯ್ಯ, ಬೆಂಗಳೂರು

ಚಿಂತನೆ- 6
ಮಾತೃಭಾಷಾ ಮಾಧ್ಯಮ : ಜನಾಂದೋಲನ
12.00 ರಿಂದ 2.00
ವಿಷಯ ಮಂಡನೆ : ಮಾವಳ್ಳಿ ಶಂಕರ್, ಬೆಂಗಳೂರು
ಸಿದ್ದನಗೌಡ ಪಾಟೀಲ, ಧಾರವಾಡ
ಮಲ್ಲಿಗೆ, ಮಂಡ್ಯ
ಗುರುಪ್ರಸಾದ ಕೆರಗೋಡು, ಮಂಡ್ಯ
ಕೆ.ಎಸ್.ವಿಮಲಾ, ಬೆಂಗಳೂರು
ಎಚ್ ಸಿ.ಚೇಗರೆಡ್ಡಿ, ಗದಗ
ಗುರುರಾಜ್ ದೇಸಾಯಿ, ಬೆಂಗಳೂರು

ಚರ್ಚೆ
ಅಧ್ಯಕ್ಷತೆ : ಬಂಜಗೆರೆ ಜಯಪ್ರಕಾಶ, ಬೆಂಗಳೂರು
ಊಟ 2.00 ರಿಂದ 3.00

ಫಲಿತಗಳ ಮಂಡನೆ ಚರ್ಚೆ ಹಾಗೂ ಧಾರವಾಡದ ಘೋಷಣೆಯ ಕರಡುಸಿದ್ಧತೆ ಹೋರಾಟದ ರೂಪರೇಷೆಗಳ ಕ್ರೋಡೀಕರಣ
3.00 ರಿಂದ 4.00

ಜಾಥಾ : ಮಾತೃಭಾಷೆಗಾಗಿ ನಡೆ
4.00 ರಿಂದ 5.00

ಬಹಿರಂಗ ಅಧಿವೇಶನ
5-00 ರಿಂದ 8-30
ವಿಷಯ ಮಂಡನೆ : ರಹಮತ್ ತರೀಕೆರೆ, ಹಂಪಿ
ಅತಿಥಿಗಳು : ನಾ. ಡಿಸೋಜ, ಶಿವಮೊಗ್ಗ
ಸಿದ್ದಲಿಂಗಯ್ಯ, ಬೆಂಗಳೂರು
ಬರಗೂರು ರಾಮಚಂದ್ರಪ್ಪ, ಬೆಂಗಳೂರು
ಜಿ. ರಾಮಕೃಷ್ಣ, ಬೆಂಗಳೂರು
ಕಡಿದಾಳು ಶಾಮಣ್ಣ, ಶಿವಮೊಗ್ಗ
ಮಾಲತಿ ಪಟ್ಟಣಶೆಟ್ಟಿ, ಧಾರವಾಡ
ಕೆ.ರಾಮಯ್ಯ, ಕೋಲಾರ
ಎಸ್. ಆರ್. ಹಿರೇಮಠ, ಧಾರವಾಡ
ಬಸವರಾಜ ಗುರಿಕಾರ, ಧಾರವಾಡ
ಎಸ್.ಜಿ. ಸಿದ್ದರಾಮಯ್ಯ, ತುಮಕೂರು
ಗೌರಿ ಲಂಕೇಶ್, ಬೆಂಗಳೂರು
ವಸುಂಧರಾ ಭೂಪತಿ, ಬೆಂಗಳೂರು
ಚನ್ನಬಸವಣ್ಣ, ಬಳ್ಳಾರಿ
ಪಿಚ್ಚಳ್ಳಿ ಶ್ರೀನಿವಾಸ, ಬೆಂಗಳೂರು
ಅಧ್ಯಕ್ಷತೆ : ಪಾಟೀಲ ಪುಟ್ಟಪ್ಪ, ಹುಬ್ಬಳ್ಳಿ

ರವಿಯ ರಿಯಲ್ ಎಸ್ಟೇಟ್ ದಂಧೆ ಮತ್ತು ವಿಲಕ್ಷಣ ಮನಸ್ಥಿತಿ

ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com





ಕಳೆದ ವಾರ ಇದೇ ಅಂಕಣದಲ್ಲಿ ಐಎಎಸ್ ಅಧಿಕಾರಿ ಕೆ.ರವಿ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಓರ್ವ ಐಎಎಸ್ ಅಧಿಕಾರಿಣಿಗೆ "ನಾನು ಡ್ರಾಸ್ಟಿಕ್ ಸ್ಟೆಪ್ ತೆಗೆದುಕೊಳ್ಳುತ್ತಿದ್ದೇನೆ" ಎಂದೂ "ಮುಂದಿನ ಜನ್ಮದಲ್ಲಿ ನಿನ್ನನ್ನು ಭೇಟಿ ಆಗುತ್ತೇನೆ" ಎಂದೂ ಮೆಸೇಜ್ ಮಾಡಿದ್ದರು ಎಂದು ಬರೆದಿದ್ದೆ. ಆಗ ನನಗೆ ಆ ಅಧಿಕಾರಿಣಿ ಯಾರು ಎಂದು ಗೊತ್ತಿದ್ದರೂ ಅವರ ಹೆಸರನ್ನು ಬರೆದರೆ ಅದರಿಂದ ಆಕೆಯ ಖಾಸಗಿ ಬದುಕು ಮತ್ತು ವೃತ್ತಿಜೀವನಕ್ಕೆ ತೊಂದರೆ ಆಗಬಹುದು ಎಂಬ ಕಾಳಜಿಯಿಂದ ಅವರ ಹೆಸರನ್ನು ನಮ್ಮ ಪತ್ರಿಕೆಯಲ್ಲಿ ಎಲ್ಲೂ ದಾಖಲಿಸಿರಲಿಲ್ಲ.

ಆದರೆ ಈಗ ಅವರ ಹೆಸರು ಬಹಿರಂಗಗೊಂಡಿರುವುದರಿಂದ ಮತ್ತು ಅವರ ಪತಿ ಸುಧೀರ್ ಅವರೇ ನ್ಯಾಯಾಲಯದ ಮುಂದೆ ರವಿ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊರೆ ಹೋಗಿರುವುದರಿಂದ ಆಕೆಯ ಹೆಸರನ್ನು ದಾಖಲಿಸಿದರೆ ಸಮಸ್ಯೆ ಇಲ್ಲ ಎಂದೆನಿಸುತ್ತಿದೆ.

ಅದಕ್ಕೂ ಮೊದಲೇ ಹಲವು ವಿಷಯಗಳನ್ನು ಸ್ಪಷ್ಟಪಡಿಸಬೇಕಿದೆ. ಅದೇನೆಂದರೆ ನನಗೆ ಗೊತ್ತಾಗಿರುವ ಮಾಹಿತಿಯ ಪ್ರಕಾರ ರವಿ ಸಾವಿನಲ್ಲಿ ಈಕೆಯ ಪಾತ್ರ, ಕಿಂಚಿತ್ತೂ ಇಲ್ಲವೇ ಇಲ್ಲ. ಬದಲಾಗಿ ಆಕೆ ಓರ್ವ ಸಾಮಾನ್ಯ ಗೆಳತಿಯಂತೆಯೇ ವರ್ತಿಸಿದ್ದಾರೆ. ರವಿ ಆರ್ಥಿಕ ನೆರವು ಕೇಳಿದಾಗ ಅದನ್ನೂ ಕೊಟ್ಟು ಸಹಕರಿಸಿದ್ದಾರೆ. ಒಂದು







ವರ್ಷ ವಯಸ್ಸಿನ ಮಗನ ತಾಯಿಯಾಗಿ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಗಂಡ ತನ್ನ ಟೆಕ್ಕಿ ಕೆಲಸ ತೊರೆದು ಬ್ಯುಸಿನೆಸ್‌ನಲ್ಲಿ ತೊಡಗಿದಾಗ ಅವರಿಗೆ ಹೆಗಲು ಕೊಟ್ಟು ನಿಂತಿದ್ದಾರೆ. ಇದೆಲ್ಲದರ ಮಧ್ಯೆ ಐಎಎಸ್ ಅಧಿಕಾರಿಯಾಗಿ ಆಕೆ ತನ್ನ ಕೆಲಸದಲ್ಲಿ ಅಪಾರ ಶಿಸ್ತನ್ನು ಪಾಲಿಸಿ, ಯಶಸ್ಸನ್ನು ಗಳಿಸಿ ಜನರಿಂದ ಮತ್ತು ಸರ್ಕಾರದಿಂದ ಸೈ ಎನಿಸಿಕೊಂಡಿದ್ದಾರೆ.

ಆಕೆ ಬೇರೆ ಯಾರೂ ಅಲ್ಲ, ಮಂಡ್ಯ ಜಿಲ್ಲಾ ಪಂಚಾಯತ್ ಸಿಇಓ ಆಗಿರುವ ದಿಟ್ಟ ಮಹಿಳಾ ಐಎಎಸ್ ಅಧಿಕಾರಿಣಿ ರೋಹಿಣಿ ಸಿಂಧೂರಿ.

ರೋಹಿಣಿ ಮೂಲತಃ ಆಂಧ್ರದವರು. ಶ್ರೀಮಂತ ಕುಟುಂಬದ ಆಕೆ ಬೆಳೆದದ್ದು ಹೈದರಾಬಾದಿನಲ್ಲಿ. ಹೈದರಾಬಾದಿನ ಇಂಜಿನಿಯರಿಂಗ್ ಕಾಲೇಜಿನ ಕೆಮಿಕಲ್ ವಿಭಾಗದಲ್ಲಿ ಫಸ್ಟ್‌ಕ್ಲಾಸ್‌ನಲ್ಲಿ ಪಾಸಾದ ನಂತರ ಯುಪಿಎಸ್‌ಸಿ ಪರೀಕ್ಷೆಯನ್ನೂ ಎದುರಿಸಿ ಐಎಎಸ್ ಅಧಿಕಾರಿಯಾದರು. ಆಗ ಆಕೆಗೆ ಕೇವಲ 25 ವರ್ಷ ವಯಸ್ಸು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಎಲ್ಲರಿಗೂ ಮೊದಲು ಮುಸ್ಸೂರಿಯಲ್ಲಿರುವ ಸಂಸ್ಥೆಯಲ್ಲಿ ತರಬೇತಿ ಕೊಡಲಾಗುತ್ತದೆ. ಆ ತರಬೇತಿಯ ಸಮಯದಲ್ಲೇ ರೋಹಿಣಿಗೆ ಪರಿಚಯವಾಗಿದ್ದು ಕರ್ನಾಟಕದಿಂದ ಪಾಸ್ ಆಗಿದ್ದ ಡಿ.ಕೆ.ರವಿ. ಆಗ ರವಿ ವಯಸ್ಸು 30.

ತರಬೇತಿ ಮುಗಿದನಂತರ ರೋಹಿಣಿಯನ್ನು ಮೊದಲು ಕರ್ನಾಟಕ ಸರ್ಕಾರ ನೇಮಿಸಿದ್ದು ತುಮಕೂರಿನ ರೆವಿನ್ಯೂ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿ. ಹೇಳಿಕೇಳಿ ತುಮಕೂರು ರವಿಯ ಜಿಲ್ಲೆ. ಅಲ್ಲಿ ರೋಹಿಣಿ ಕೆಲಸ ಮಾಡುತ್ತಿದ್ದಾಗ ರವಿಯ ಕೋರಿಕೆಯ ಮೇಲೆ ಆಕೆ ಒಂದೆರಡು ಬಾರಿ ರವಿಯ ತಂದೆ, ತಾಯಿ ಮತ್ತು ಸೋದರರನ್ನು ಭೇಟಿ ಆಗಿದ್ದರು. ಆಗ ರವಿ ಕೆಲಸ ಮಾಡುತ್ತಿದ್ದದ್ದು ಗುಲ್ಬರ್ಗಾ ಜಿಲ್ಲೆಯಲ್ಲಿ.

ಆನಂತರ ರವಿ ಕನ್ನಡತಿ ಕುಸುಮಾಳನ್ನು ಮದುವೆಯಾದರೆ, ರೋಹಿಣಿ ಆಂಧ್ರ ಮೂಲದ ಸುಧೀರ್ ಅವರನ್ನು ಕೈಹಿಡಿದರು. ಇತರ ಐಎಎಸ್ ಸ್ನೇಹಿತರ ನಡುವೆ ಇರುವಂತಹ ಗೆಳೆತನ ಇವರಿಬ್ಬರ ಮಧ್ಯೆಯೂ ಇತ್ತು. ರವಿ ಬೆಂಗಳೂರಿಗೆ ಹತ್ತಿರವಿರುವ ಕೋಲಾರಕ್ಕೆ ಡಿಸಿ ಆಗಿ ಬಂದದ್ದು 2013ರ ಆಗಸ್ಟ್‌ನಲ್ಲಿ. ಅದೇ ಹೊತ್ತಿಗೆ ರೋಹಿಣಿಯನ್ನೂ ಬೆಂಗಳೂರಿನಲ್ಲಿರುವ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾ ಮಾಡಲಾಗಿತ್ತು. ಆಗ ಒಂದೆರಡು ಬಾರಿ ರೋಹಿಣಿ ತಮ್ಮ ಗಂಡನ ಜೊತೆಗೇ ರವಿ ಮತ್ತು ಕುಸುಮಾಳನ್ನು ಭೇಟಿ ಆಗಿದ್ದೂ ಇದೆ.

ಇತ್ತೀಚೆಗೆ ರವಿಯ ವರ್ತನೆಯಲ್ಲಿ ಸಣ್ಣಪುಟ್ಟ ಬದಲಾವಣೆಗಳು ಕಾಣಿಸಿಕೊಳ್ಳಲಾರಂಭಿಸಿದವು. ಆತ ಇನ್ನೂ ಯುವಕ, ದಿಟ್ಟ, ಜನಪರ ಕಾಳಜಿ ಹೊಂದಿರುವ ಅಧಿಕಾರಿ ಎಂಬ ಕಾರಣಕ್ಕೆ ರವಿಗೆ ಮಾಧ್ಯಮಗಳಲ್ಲಿ ಪ್ರಚಾರ ಸಿಗಲಾರಂಭಿಸಿತು. ಅದೆಲ್ಲ ಆತನ ನೆತ್ತಿಗೇರಿತೋ ಅಥವಾ ಅಧಿಕಾರದ ಅಮಲು ಹತ್ತಿಕೊಂಡಿತೋ ಗೊತ್ತಿಲ್ಲ. ಆತ ರಿಯಲ್ ಎಸ್ಟೇಟ್ ದಂಧೆಗೆ ಕೈಹಾಕಿ 'ಆರ್ ಎಂಡ್ ಎಚ್ ಪ್ರಾಪರ್ಟೀಸ್' ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ('ಆರ್' ಅಂದರೆ ರವಿ ಎಂದೂ, 'ಎಚ್' ಆತನ ಬ್ಯುಸಿನೆಸ್ ಪಾರ್ಟನರ್ ಹೆಸರಿನ ಸೂಚಕವೆಂದೂ ಈಗ ತರ್ಕಿಸಲಾಗುತ್ತಿದೆ). ಮಾತ್ರವಲ್ಲ ತನ್ನ ಈ ಬ್ಯುಸಿನೆಸ್‌ನಲ್ಲಿ ಬಂಡವಾಳವನ್ನು ಹೂಡುವಂತೆ ತನ್ನ ಸ್ನೇಹಿತರನ್ನು ಮತ್ತು ಪರಿಚಯಸ್ಥರನ್ನೂ ಕೇಳಿಕೊಂಡರು.

ಕಳೆದ ಮಾರ್ಚ್ 18 ರಂದು ರೋಹಿಣಿ ಸ್ವಯಂಪ್ರೇರಣೆಯಿಂದ ಸಿಐಡಿ ಅಧಿಕಾರಿಗಳ ಮುಂದೆ ಕೊಟ್ಟಿರುವ ಹೇಳಿಕೆಯ ಪ್ರಕಾರ ರವಿ ಆಕೆಯನ್ನು ಮತ್ತು ಆಕೆಯ ಪತಿ ಸುಧೀರ್ ಅವರನ್ನೂ ಬಂಡವಾಳ ಹೂಡಲು ಕೇಳಿದ್ದರು. ಅವರಿಬ್ಬರು ಸಾಲ ಕೊಟ್ಟರೋ ಅಥವಾ ಬಂಡವಾಳ ಹೂಡಿದರೋ ಗೊತ್ತಿಲ್ಲ, ಆದರೂ ಅವರಿಬ್ಬರು ಹತ್ತು ಲಕ್ಷ ರೂಪಾಯಿಗಳನ್ನು ಆರ್ ಎಂಡ್ ಎಚ್ ಪ್ರಾಪರ್ಟೀಸ್‌ನಲ್ಲಿ ಹೂಡಿದರು.

ಇದಾದ ಸ್ವಲ್ಪ ದಿನಗಳ ನಂತರ ರವಿ "ಇನ್ನೂ 60 ಲಕ್ಷ ಕೊಡಿ" ಎಂದರಂತೆ. ಅಷ್ಟು ದೊಡ್ಡ ಮೊತ್ತ ಕೇಳಿಯೇ ರೋಹಿಣಿಗೆ ಅಚ್ಚರಿಯಾಗಿದೆ. ಆಗ "ನಿನಗೆ ಯಾಕೆ ಅಷ್ಟೊಂದು ದುಡ್ಡು ಬೇಕು" ಎಂದು ಆಕೆ ಪ್ರಶ್ನಿಸಿದಾಗ ರವಿ ಕೋಲಾರದಲ್ಲಿ ನೂರು ಎಕರೆಗಳನ್ನು ಖರೀದಿಸುವ ಯೋಜನೆಯ ಬಗ್ಗೆ ಹೇಳಿದ್ದಾರೆ. ಆಗ ರೋಹಿಣಿಗೆ ಶಾಕ್ ಆಗಿ, "ನೀನು ಓರ್ವ ಐಎಎಸ್ ಅಧಿಕಾರಿಯಾಗಿ ಇಂತಹದ್ದಕ್ಕೆಲ್ಲ ಕೈಹಾಕುವುದು ಸರಿಯಲ್ಲ, ಇಷ್ಟು ದೊಡ್ಡ ಯೋಜನೆ ಸಮಸ್ಯೆಗಳಿಂದ ಕೂಡಿರುತ್ತದೆ. ಕೆಟ್ಟ ಹೆಸರು ಬರುತ್ತದೆ, ಈ ಹುಚ್ಚಾಟವನ್ನೆಲ್ಲ ಇಲ್ಲಿಗೇ ನಿಲ್ಲಿಸು" ಎಂದು ಎಚ್ಚರಿಸಿದ್ದಾರಲ್ಲದೆ ಹಣ ಕೊಡುವುದಿಲ್ಲ ಎಂದೂ ನಿರಾಕರಿಸಿದ್ದಾರೆ.

ಆದರೆ ರವಿ ಸುಮ್ಮನಾಗಲಿಲ್ಲ, ಆತ ಆರ್ ಎಂಡ್ ಎಚ್ ಸಂಸ್ಥೆಯಲ್ಲಿ ಹಣ ಹೂಡಿ ಎಂದು ಇತರರನ್ನು ಕೇಳುವುದನ್ನು ಮುಂದುವರೆಸಿದರು. ಒಂದು ಮೂಲದ ಪ್ರಕಾರ ಕಾನ್ಫಿಡೆಂಟ್ ಗ್ರೂಪ್ ಎಂಬ ಸಂಸ್ಥೆ ಆರ್ ಎಂಡ್ ಎಚ್ ಸಂಸ್ಥೆಯಲ್ಲಿ 60 ಲಕ್ಷ ರೂಪಾಯಿಗಳನ್ನು ಹೂಡಿದೆ. ಅದೆಲ್ಲ ಈಗ ಸಿಬಿಐ ತನಿಖೆಯಲ್ಲಿ ಹೊರಬರುತ್ತದೋ ಇಲ್ಲವೋ ಕಾದುನೋಡಬೇಕು.

ಆರ್ಥಿಕ ವಿಷಯದಲ್ಲಿ ಮಾತ್ರವಲ್ಲದೆ ಮಾನಸಿಕ ವಿಷಯದಲ್ಲೂ ರವಿಯಲ್ಲಿ ಬದಲಾವಣೆಗಳಾಗಿವೆ. ನಿಧಾನಕ್ಕೆ ಆತ ರೋಹಿಣಿ ಅವರೊಂದಿಗೆ ನಡೆದುಕೊಳ್ಳುತ್ತಿದ್ದ ರೀತಿ ಬದಲಾಗಿದೆ. ಪದೇಪದೇ ಆಕೆಗೆ ಫೋನ್ ಮಾಡುವುದು, ಆಕೆ ಫೋನ್ ಎತ್ತದಿದ್ದಾಗ "ಪ್ಲೀಸ್ ರೋಹಿಣಿ, ಫೋನ್ ಮಾಡು" ಎಂದು ಬೇಡಿಕೊಳ್ಳುವುದನ್ನು ರವಿ ಶುರು ಮಾಡಿದ್ದಾರೆ. ಇದೆಲ್ಲ ಆರಂಭದಲ್ಲಿ ರೋಹಿಣಿಗೆ ವಿಚಿತ್ರವಾಗಿ ಕಂಡಿದೆ. ಆದರೂ ಹಲವು ವರ್ಷಗಳ ಮಿತ್ರ ಎಂಬ ಕಾರಣಕ್ಕೆ ಮೊದಮೊದಲು ಸುಮ್ಮನಾಗಿದ್ದಾರೆ. ಆದರೆ ರವಿ ಸುಮ್ಮನಾಗುವ ಬದಲು ನಿಧಾನವಾಗಿ ಆಕೆಯ ಬಗ್ಗೆ ಒಂದು ರೀತಿಯ ವ್ಯಾಮೋಹ ಬೆಳೆಸಿಕೊಂಡಿದ್ದಾರೆ. ಆಗ ಒಮ್ಮೆ ರೋಹಿಣಿ ನೀನು ಹೀಗೆಲ್ಲ ವರ್ತಿಸಕೂಡದು, ನಾವಿಬ್ಬರೂ ಸ್ನೇಹಿತರಷ್ಟೆ ಎಂದು ಹೇಳುವ ಮೂಲಕ ರವಿಯನ್ನು ತಿದ್ದುವ ಯತ್ನ ಮಾಡಿದ್ದಾರೆ. ಆಗ ಕ್ಷಮೆ ಯಾಚಿಸಿದ ರವಿ ಇನ್ನು ಮುಂದೆ ಹಾಗೆಲ್ಲ ಮಾಡುವುದಿಲ್ಲ ಎಂದೂ ಮಾತು ಕೊಟ್ಟಿದ್ದಾರೆ.

ಆದರೆ ರವಿ ತಾನು ಕೊಟ್ಟಿದ್ದ ಮಾತಿನಂತೆ ನಡೆದುಕೊಂಡಿಲ್ಲ, ತನ್ನ ಎಂದಿನ ಪ್ರವರ ಮುಂದುವರೆಸಿದ್ದಾರೆ. ಮಾರ್ಚ್ ತಿಂಗಳ ಆರಂಭದ ದಿನಗಳಲ್ಲಿ ಒಂದು ದಿನ ರವಿ ರೋಹಿಣಿ ಅವರಿಗೆ ಮೇಲಿಂದ ಮೇಲೆ ಕರೆ ಮಾಡಿದ್ದಾರಲ್ಲದೆ, ಹತ್ತಾರು ಮೆಸೇಜ್‌ಗಳನ್ನೂ ಕಳುಹಿಸಿದ್ದಾರೆ. ಪ್ರಾಯಶಃ ರೋಹಿಣಿ ಕೆಲಸದ ಒತ್ತಡದಲ್ಲಿದ್ದರೋ ಏನೋ, ಅವರು ರವಿಯ ಕರೆಗಳಿಗೆ ಮತ್ತು ಮೆಸೇಜುಗಳಿಗೆ ಪ್ರತಿಕ್ರಿಯಿಸಿಲ್ಲ. ಕೊನೆಗೆ ಸಂಜೆ ಹೊತ್ತು "ರಾತ್ರಿ ಫೋನ್ ಮಾಡುತ್ತೇನೆ" ಎಂದಷ್ಟೇ ಪ್ರತಿಕ್ರಿಯಿಸಿದ್ದಾರೆ. ರಾತ್ರಿ ಹತ್ತು ಗಂಟೆಯಾದರೂ ರೋಹಿಣಿ ಫೋನ್ ಮಾಡದಿದ್ದಾಗ "ನಾನು ಊಟ ಕೂಡ ಮಾಡದೆ ನಿನ್ನ ಕರೆಗಾಗಿ ಕಾಯುತ್ತಿದ್ದೇನೆ, ಪ್ಲೀಸ್ ಕಾಲ್ ರೋಹಿಣಿ" ಎಂದು ರವಿ ಗೋಗರೆದಿದ್ದಾರೆ.

ತನ್ನ ಬಗೆಗಿನ ರವಿಯ ವ್ಯಾಮೋಹವನ್ನು ಹೆಚ್ಚಿಸುವಂತಹ ಯಾವುದೇ ಮೆಸೇಜನ್ನು ರೋಹಿಣಿ ಎಂದೂ ರವಿಗೆ ಕಳುಹಿಸಿಲ್ಲ. ಬದಲಾಗಿ ಆತನ ಬಾಲಿಶ ಹುಚ್ಚಾಟವನ್ನು ಸಾಧ್ಯವಾದಷ್ಟು ದಿನ ಸಹಿಸಿಕೊಂಡಿದ್ದಾರೆ. ಕೊನೆಗೆ ಅದು ಸಹಿಸದಾದಾಗ ರವಿ ತನಗೆ ಕೊಡುತ್ತಿರುವ ಕಾಟದ ಬಗ್ಗೆ ತಮ್ಮ ಪತಿಗೆ ಹೇಳಿದ್ದಾರೆ. ಯಾವ ಪತಿಗೆ ತಾನೇ ಇನ್ನೊಬ್ಬ ಪುರುಷ ತನ್ನ ಹೆಂಡತಿಗೆ ಮಾನಸಿಕ ಕಾಟ ಕೊಡುತ್ತಿರುವುದನ್ನು ಸಹಿಸುವುದಕ್ಕಾಗುತ್ತದೆ? ಅದಕ್ಕೇ ಇಬ್ಬರೂ ರವಿಯನ್ನು ತರಾಟೆಗೆ ತೆಗೆದುಕೊಳ್ಳಲು, ಆ ಮೂಲಕ ಆತನನ್ನು ತಿದ್ದಲು ನಿರ್ಧರಿಸಿದ್ದಾರೆ.

ಮಾರ್ಚ್ 15, ಭಾನುವಾರ ರೋಹಿಣಿ ಮತ್ತು ಸುಧೀರ್ ಜೊತೆಗೆ ಇದ್ದರು. ಅವತ್ತು ರೋಹಿಣಿ ಮತ್ತು ರವಿಯ ಫೋನ್‌ಗಳ ನಡುವೆ ಏಳು ಕರೆಗಳು ವಿನಿಮಯಗೊಂಡಿದ್ದವು. ಮೊದಲು ರೋಹಿಣಿಯೇ ರವಿಯೊಂದಿಗೆ ಮಾತನಾಡಿ "ನೋಡು ನೀನು ಹೀಗೆಲ್ಲ ಮಾಡಕೂಡದು, ಇದು ಸರಿಯಲ್ಲ. ನಿನಗೂ ಹೆಂಡತಿ ಇದ್ದಾಳೆ, ನನಗೆ ಗಂಡ ಮತ್ತು ಮಗ ಇದ್ದಾರೆ. ಇದೆಂತಹ ಹುಚ್ಚಾಟ ನಿನ್ನದು" ಎಂದು ಬೈದಿದ್ದಾರೆ. ಆದರೆ ರವಿ ಇಲ್ಲಾ, ನಾನು ನಿನ್ನನ್ನು ಪ್ರೀತಿಸುತ್ತೇನೆ, ನೀನು ನನ್ನವಳಾಗಬೇಕು ಎಂದೆಲ್ಲ ಹಟ ಹಿಡಿದಿದ್ದಾರೆ. ಅವತ್ತು ಸಂಜೆ ರೋಹಿಣಿ ಕಡೆಯಿಂದಲೇ ರವಿಗೆ ಕೊನೆಯ ಬಾರಿ ಕರೆ ಬಂದಿದೆ. ಅರ್ಧ ಗಂಟೆಯ ಆ ಕರೆಯಲ್ಲಿ ರೋಹಿಣಿ ನಾನೆಂದೂ ನಿನ್ನವಳಾಗುವುದಿಲ್ಲ ಎಂದೋ ಅಥವಾ ಆಕೆಯ ಗಂಡ ನೀನು ಹೀಗೆ ವರ್ತಿಸಿದರೆ ನಿನ್ನ ವಿರುದ್ಧ ದೂರು ಕೊಡುತ್ತೇವೆ ಎಂದೋ ಖಡಾಖಂಡಿತವಾಗಿ ಹೇಳಿರಬೇಕು. ಅಷ್ಟು ಹೊತ್ತಿಗೆ ಓರ್ವ ಐಎಎಸ್ ಅಧಿಕಾರಿಯಾಗಿದ್ದೂ ಯಾವುದೋ ಹರೆಯದ ರೋಡ್ ರೋಮಿಯೋನ ಮನಸ್ಥಿತಿಗೆ ಇಳಿದಿದ್ದ ರವಿಗೆ 'ಲವ್ ಡಿಸಪಾಯಿಂಟ್' ಆಗಿದೆ. ತಾನು ಪ್ರೀತಿಸುತ್ತಿರುವೆ ಎಂದು ಭ್ರಮಿಸಿರುವವಳು ಎಂದೂ ತನ್ನವಳಾಗುವುದಿಲ್ಲ ಎಂಬುದು ಅರ್ಥವಾಗಿದೆ. ಆಗಲೇ ಆತ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿರಲಿಕ್ಕೂ ಸಾಕು.

ಮಾರ್ಚ್ 16ರಂದು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ರೋಹಿಣಿಗೆ ರವಿ ಕಳುಹಿಸಿರುವ ಸುದೀರ್ಘ ಮೆಸೇಜು ಆತನ ವಿಲಕ್ಷಣ ಮನಸ್ಥಿತಿಗೆ ಕನ್ನಡಿ ಹಿಡಿಧಿದೆ. (ಅದನ್ನು ಪ್ರಜಾವಾಣಿ ಇವತ್ತು ಗುರುವಾರ ಪ್ರಕಟಿಸಿದೆ).


ಆ ಮೆಸೇಜನ್ನು ಓದಿದ ಯಾರಿಗಾದರೂ ಅದರಲ್ಲಿ ಅರ್ಥ, ತರ್ಕ ಯಾವುದೂ ಇಲ್ಲದಿರುವುದು ಗೊತ್ತಾಗುತ್ತದೆ. ಒಂದೆಡೆ ನೀನೇ ನನ್ನನ್ನು ರೂಪಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ, ಆದರೆ ಇನ್ನೊಂದೆಡೆ ರೋಹಿಣಿಯನ್ನು ದೈಹಿಕವಾಗಿ ಮಾತ್ರ ನೋಡುವ ದೃಷ್ಟಿಕೋನವೂ ಇದೆ. ಒಂದು ಕಡೆ ಗುರಿ ಮತ್ತು ಸಾಧನೆಗಾಗಿಯೇ ದಂತಕತೆಯಂತೆ ಬಾಳಿದ್ದೇನೆ ಎಂದು ಕೊಚ್ಚಿಕೊಳ್ಳುವ ರವಿ ಇನ್ನೊಂದು ಕಡೆ ಬದುಕಿರುವುದಕ್ಕೆ ಈಗ ಸ್ಫೂರ್ತಿಯೇ ಇಲ್ಲ ಎನ್ನುತ್ತಾರೆ. ನನ್ನ ಆತ್ಯುತ್ತಮ ಗೆಳತಿ ಆಗಿದ್ದಕ್ಕೆ ವಂದನೆಗಳು ಎನ್ನುವ ರವಿ ನೀನು ನನ್ನವಳಾಗುವುದಿಲ್ಲ ಎಂದು ಗೊತ್ತಾದ ಮೇಲೂ ನಾನು ಬದುಕಿರಲು ಇಷ್ಟಪಡುವುದಿಲ್ಲ ಎನ್ನುತ್ತಾರೆ. ಬುದ್ಧಿ ಮತ್ತು ಮನಸ್ಥಿತಿ ನೆಟ್ಟಗಿರುವ ಯಾರಾದರೂ ಹೀಗೆಲ್ಲ ಅಸಂಬದ್ಧವಾಗಿ ಬರೆಯುತ್ತಾರೆಯೇ? ಸ್ನೇಹ ಎಂದರೇನು, ಪ್ರೇಮ ಎಂದರೇನು, ಸಾವು ತಂದು ಕೊಡುವ ದುಃಖ ಎಂತಹದ್ದು ಎಂದು ಗೊತ್ತಿಲ್ಲದವರು ಮಾತ್ರ ಹೀಗೆಲ್ಲ ಪ್ರಲಾಪಿಸಲು ಸಾಧ್ಯ.

ರವಿಯ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದಾಗಿ ಅವರಿಗೆ ಪ್ರಚಾರ ಮತ್ತು ಜನಪ್ರಿಯತೆ ಎರಡೂ ಸಿಕ್ಕಿದ್ದವು. ಕೈ ಮತ್ತು ಬಾಯಿ ಸ್ವಚ್ಛವಾಗಿದ್ದವು. ಆದರೇನಂತೆ, ತಾನೇ ಸೃಷ್ಟಿಸಿಕೊಂಡ ಮಾನಸಿಕ ತಳಮಳಕ್ಕೆ ತುತ್ತಾಗಿ, ವಯಸ್ಸು 35 ಆಗಿದ್ದರೂ 20 ವಯಸ್ಸಿನ ಬಾಲಿಶ ರೋಮಿಯೋ ತರಹ ವರ್ತಿಸಿದ, ಚಿಂತಿಸಿದ ರವಿ ಕೊನೆಗೆ ತಮ್ಮ ಪ್ರಾಣವನ್ನೇ ತೆಗೆದುಕೊಂಡರು.

ಆ ಮೂಲಕ ಮೂವರು ಮಹಿಳೆಯರಿಗೆ ರವಿ ಅಪಾರವಾದ ದ್ರೋಹ ಬಗೆದಿದ್ದಾರೆ. ಒಂದೆಡೆ ಹೆತ್ತ ತಾಯಿ ಗೌರಮ್ಮನನ್ನು ಜೀವನಪರ್ಯಂತ ಪುತ್ರಶೋಕಕ್ಕೆ ದೂಡಿದ್ದಾರೆ. ನಂಬಿ ಕೈಹಿಡಿದಿದ್ದ ಪತ್ನಿ ಕುಸುಮಾಳಿಗೆ ಕನಸುಮನಸ್ಸಿನಲ್ಲೂ ಊಹಿಸದಿದ್ದಂತಹ ಶಾಕ್ ನೀಡಿದ್ದಾರೆ. ಯಾವ ತಪ್ಪು ಮಾಡದಿದ್ದ ಗೆಳತಿ ರೋಹಿಣಿಯ ವ್ಯಕ್ತಿತ್ವಕ್ಕೆ ಮಸಿ ಬಳಿದಿದ್ದಾರೆ.

ಈ ಮೂವರು ಹೆಣ್ಣು ಮಕ್ಕಳಿಗೆ ಸ್ವಾಂ... ಎನಾರು ಯಾರು? ಬೀದಿಗಿಳಿದು ಪ್ರತಿಭಟಿಸುವವರು ಯಾರು? •

ಉತ್ತರ ಕನ್ನಡ: ಎಡಬಿಡಂಗಿ ಶಾಸಕಿ ಶೆಟ್ಟಿಯಮ್ಮ!


ಶಾರದಾ ಶೆಟ್ಟಿ

ಕುಮಟಾ ಅಸೆಂಬ್ಲಿ ಕ್ಷೇತ್ರದಲ್ಲಿ ತಕ್ಷಣಕ್ಕೆ ಚುನಾವಣೆಯಾದರೆ ಏನಾಗುತ್ತದೆ? ಹಾಲಿ ಶಾಸಕಿ ಶಾರದಾ ಶೆಟ್ಟಿ ಯಾನೆ ಶೆಟ್ಟಿಯಮ್ಮ ಅಥವಾ ಅಮ್ಮನ ಎಮ್ಮೆಲ್ಲೆಗಿರಿ ಯದ್ವಾತದ್ವಾ ಚಲಾಯಿಸುತ್ತಿರುವ ಆಕೆಯ ಕುಲೋದ್ಧಾರಕ ರವಿಕುಮಾರ ಶೆಟ್ಟಿ ಸ್ಪರ್ಧಿಸಿದರೆ ಠೇವಣಿ ಕಳೆದುಕೊಳ್ಳೋದು ಖಂಡಿತ! ಇಂಥದೊಂದು ಚರ್ಚೆಯೀಗ ಕುಮಟಾ-ಹೊನ್ನಾವರ ಭಾಗದಲ್ಲಿ ಸ್ವಾರಸ್ಯಕರವಾಗಿ ನಡೆಯುತ್ತಿದೆ. ಇದಕ್ಕೆ ಮುಖ್ಯ ಕಾರಣ, ಹದಿನಾರಕ್ಕೇ ಯಜಮಾನಿಕೆ ಕಂಡ ರವಿಕುಮಾರ ಶೆಟ್ಟಿಯ ಅಧಿಕ ಪ್ರಸಂಗ, ಅವಾಂತರ, ಅವ್ಯವಹಾರ ಹಾಗು ಅಹಂಕಾರ! ಮತ್ತು ಪುತ್ರ ವ್ಯಾಮೋಹದಿಂದ ಎಡಬಿಡಂಗಿಯಾಗಿರುವ ಶಾಸಕಿ ಶೆಟ್ಟಿಯಮ್ಮನ ಸೋಗಲಾಡಿತನ.


ಪರ್ತಗಾಳಿ ಸ್ವಾಮಿ

ಎರಡು ಅವಧಿಗೆ ಶಾಸಕನಾಗಿದ್ದ ರವಿಕುಮಾರನ ಅಪ್ಪ ಮೋಹನ ಶೆಟ್ಟಿ ಒಂಥರಾ ಕುಹಕ-ಕುಚೇಷ್ಟೆಯವನಾಗಿದ್ದರೂ ಜನಸಾಮಾನ್ಯರೊಂದಿಗೆ ಹಮ್ಮು-ಬಿಮ್ಮುಯಿಲ್ಲದೆ ಬೆರೆಯುತ್ತಿದ್ದರು. ಹಾಗೆಯೇ ಲಂಚದ ಕಾಸಿಗೆಂದೂ ಆತ ಕೈಯೊಡ್ಡಿರಲಿಲ್ಲ. ಸರ್ಕಾರಿ ಗುತ್ತಿಗೆದಾರನಾಗಿದ್ದ ಅಪ್ಪ ಕೆ.ವಿ. ಶೆಟ್ಟಿ ಕೂಡಿಟ್ಟಿದ್ದ ಕಪ್ಪು ಕಾಸಿಂದ ರಾಜಕಾರಣ ಮಾಡಿದ ಮೋಹನ ಶೆಟ್ಟಿ ಮೂರನೇ ಬಾರಿ ಸ್ಪರ್ಧಿಸಿದಾಗ ಬರೀ ಇಪ್ಪತ್ತೇ ಓಟಲ್ಲಿ ಸೋತಿದ್ದರು. ಒಣ ದೊಡ್ಡಸ್ತಿಕೆ ದೌಲತ್ತಿನ ಮೋಹನ ಶೆಟ್ಟಿಗೆ ದಾಯಾದಿ ಸೋದರ ಜೆಡಿಎಸ್‌ನ ದಿನಕರ ಶೆಟ್ಟಿ ಎದುರು ಸೋತಿದ್ದು ಅರಗಿಸಿಕೊಳ್ಳಲಾಗಲೇ ಇಲ್ಲ. ಮೊದಲೇ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದ ಮೋಹನ ಶಾಸಕಗಿರಿ ಕಳಕೊಂಡ ಬೆನ್ನಿಗೇ ಇಹಲೋಕದಿಂದ ನಿರ್ಗಮಿಸಿಬಿಟ್ಟರು.

ಇದು ಜನರಲ್ಲಿ ಕರುಣೆ ಮೂಡಿಸಿತ್ತು. ಜತೆಗೆ ಶಾಸಕನಾಗಿದ್ದ ದಿನಕರ ಶೆಟ್ಟಿಯ ಹಣ ಮಾಡುವ ಚಟದಿಂದ ಆತನ ಪಾರ್ಟಿಯ ಕಾರ್ಯಕರ್ತರೇ ರೋಸಿ ಹೋಗಿದ್ದರು. ತತ್ಪರಿಣಾಮವಾಗಿ ಕಳೆದ ಚುನಾವಣೆಯಲ್ಲಿ ದಿವಂಗತ ಮೋಹನ್ ಶೆಟ್ಟರ ಮಡದಿ ಶಾರದಾ ಶೆಟ್ಟಿ ಗೆದ್ದುಬಿಟ್ಟರು. ಅಮ್ಮ ಶಾಸಕಿಯಾಗಿದ್ದೇ ತಡ, ಮಗ ರಂಗೀಲಾ ರವಿಕುಮಾರನಿಗೆ ಆಕಾಶ-ನೆಲ ಎರಡೂ ಕಾಣದಂತಾಗಿ ಆತ ತೇಲಾಡತೊಡಗಿದ. ತನ್ನ ಚಾಲಾಕಿತನ-ತಂತ್ರಗಾರಿಕೆಯಿಂದಾಗಿ ತಾಯಿ ಎಮ್ಮೆಲ್ಲೆಯಾಗಿದ್ದಾಳೆಂದು ಭ್ರಮಿಸಿ ತುಂಡುಗುಪ್ಪಳ ಹೊಡೆಯಲಾರಂಭಿಸಿಬಿಟ್ಟ! ಅಪ್ಪನ ಸ್ವಭಾವಕ್ಕೆ ತದ್ವಿರುದ್ಧವಾದ ಗುಣ-ಧರ್ಮದ ರವಿಕುಮಾರ ಶೆಟ್ಟಿ ಸಮಸ್ಯೆ-ಸಂಕಷ್ಟದೊಂದಿಗೆ ತನ್ನ ಮನೆ ಬಾಗಿಲಿಗೆ ಬರುವ ಅಸಹಾಯಕ-ಬಡವರೊಂದಿಗೆ ಉದ್ಧಟವಾಗಿ-ಒರಟಾಗಿ ವರ್ತಿಸಹತ್ತಿದ. ಶರವೇಗದಲ್ಲಿ ಹಣ ಮಾಡುವ ಚಿಕ್ಕಪ್ಪ ದಿನಕರ ಶೆಟ್ಟಿಯ ಕಾರ್ಯವೈಖರಿ ಅಳವಡಿಸಿಕೊಂಡ!

ಶೆಟ್ಟಿಯಮ್ಮ ಶಾಸಕಿಯಾಗಿ ಮೂರು ತಿಂಗಳು ಕಳೆವಷ್ಟರಲ್ಲೇ ನೂರಾರು ನಮೂನೆಯ ಆಕ್ಷೇಪ-ಜನಾಕ್ರೋಶಕ್ಕೆ ತುತ್ತಾಗಿಹೋದರು. ಕ್ಷೇತ್ರದ ಬೇಕುಬೇಡಗಳ ಅರಿವೇ ಇಲ್ಲದ ಖಾಲಿ ಬುರುಡೆಯ ತಾಯಿ-ಮಗ ಒಣ ಆಡಂಬರದ 'ಕುಮಟಾ ಉತ್ಸವ' ನಡೆಸಿ ಧೂಳಲ್ಲಿ ಕುಣಿವ ಕಲ್ಚರ್ ಹುಟ್ಟುಹಾಕಿದರು. ಉತ್ಸವದ ಹೆಸರಲ್ಲಿ ಕೋಟ್ಯಂತರ ರೂ. ಕೂಡಿಸಿ ಲೆಕ್ಕ ಮಾತ್ರ ಬಹಿರಂಗ ಮಾಡಲೇ ಇಲ್ಲ. ಪ್ರತಿವರ್ಷದ ಈ ಹುಚ್ಚು ಜಾತ್ರೆಗೆ ಸಿನಿಮಾ ನಟಿಯರನ್ನ ಕರೆಸಿ ಅವರ ನಡುವೆ ನಿಂತು ರವಿಕುಮಾರ ಹಲ್ಲು ಕಿಸಿದದ್ದೇ ಬಂತು! ಈ ಲಕ್ಷಾಂತರ ಹಣ ಹಳ್ಳಿಗಾಡಿನ ಜನರಿಗೆ ಬೇಕಾದ ಶಾಲೆ, ಆಸ್ಪತ್ರೆ-ರಸ್ತೆಯಂಥ ಜರೂರತ್ತಿಗೆ ಬಳಸುವ ಜನಪರ [illegible] ಹೊಳೆಯದ ರವಿಕುಮಾರ್ ಮೋಜು-ಮಸ್ತಿ ಮೂಲಕ ಜನಪ್ರಿಯನಾಗಲು ಅಡ್ಡದಾರಿ ಹಿಡಿದುಕೊಂಡಿದ್ದಾನೆ, ಪಾಪ!!


ರವಿಕುಮಾರ್ ಶೆಟ್ಟಿ ಎಮ್ಮೆಲ್ಲೆ ದರ್ಬಾರು ಶುರುಮಾಡಿದಾಗಿಂದ ಎರಡು ವರ್ಗಾವರ್ಗಿ ಸುಗ್ಗಿ ಕಳೆದಿದೆ. ಆಗೆಲ್ಲ ರವಿಯ ಲೇವಾದೇವಿ ಲೀಲೆಗಳ ಬಗ್ಗೆ ರಂಗಿನ ಸುದ್ದಿಗಳು ಹಬ್ಬಿವೆ. ಸರ್ಕಾರಿ ಕಾಮಗಾರಿ ಹಂಚಿಕೆಯಂತೂ ಕಮಿಷನ್-ಪರ್ಸೆಂಟೇಜ್ ಮೆರಿಟ್ ಮೇಲೆಯೇ ಹಂಚಿಕೆಯಾಗುತ್ತಿದೆ! ರವಿಯ ಸುತ್ತ ಗಿರಕಿ ಹೊಡೆಯುವ ಕಂಟ್ರಾಕ್ಟರಿಕೆಯ ಕ್ಷುದ್ರ ಗ್ರಹಗಳ ಹಾವಳಿಯಂತೂ ಹೇಳತೀರದು. ಧನಾಧಾರಿತ ರಾಜಕಾರಣ ಮೈಗೂಡಿಸಿಕೊಂಡಿರುವ ಈ ನಕಲಿ ಶಾಸಕನಿಗೆ ಜನರೆಂದರೆ ಅಲರ್ಜಿ. ಸೈದ್ಧಾಂತಿಕ ಬದ್ಧತೆ-ಜನಪರ ಚಿಂತನೆಗಳೊಂದೂ ಇಲ್ಲದ ರವಿಯ ರಗಳೆ-ರಾದ್ಧಾಂತದಿಂದ ಇಡೀ ಕ್ಷೇತ್ರ ದಿಕ್ಕೆಟ್ಟುಹೋಗಿದೆ. ಆತನ ಉಳ್ಳವರ ಪರ ನೀತಿ-ರೀತಿಯಿಂದ ಅಸಹಾಯಕ ಹಿಂದುಳಿದ ವರ್ಗದ ಜನರಂತೂ ಸಮಸ್ಯೆಗಳ ಸುಳಿಗೆ ಬಿದ್ದಿದ್ದಾರೆ.

ಖಾಸಾ ದೊಡ್ಡಮ್ಮನ ಮಗ (ಶೆಟ್ಟಿಯಮ್ಮರ ಅಕ್ಕನ ಪುತ್ರ) ಅಧಿಕ ಪ್ರಸಂಗಿ ಅಮರನಾಥ. ಶೆಟ್ಟಿಯೇ ರಗಳೆ ರವಿಕುಮಾರ ಶೆಟ್ಟಿಯ ಅಧಿಕೃತ ಏಜೆಂಟ್ ಮತ್ತು ಸಲಹೆಗಾರ. ಈತನ ಮೂಲ ಶಿರಸಿ. ಬ್ಯಾಂಕ್ ನೌಕರನಾಗಿದ್ದ ಈತ ಚಿಕ್ಕಮ್ಮ ಶಾಸಕಿಯಾಗಿದ್ದೇ ತಡ ಉದ್ಯೋಗಕ್ಕೆ ರಾಜಿನಾಮೆ ಬಿಸಾಕಿ ಕುಮಟೆಯಲ್ಲೇ ಠಿಕಾಣಿ ಹೂಡಿದ್ದಾನೆ. ಸಿದ್ಧನ ಬಾವಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡಿರುವ ಅಮರ ಆ ಅಡ್ಡೆಯಿಂದಲೇ ಕಲೆಕ್ಷನ್ ದಂಧೆ ನಿಭಾಯಿಸುತ್ತಾನೆ. ಈತ ಹೇಳಿದವರಿಗೇ ಸರ್ಕಾರಿ ಗುತ್ತಿಗೆ; ಈತ ಹೇಳಿದಂತೆಯೇ ರವಿಯ ಹಾರಾಟ. ಕುಮಟಾ-ಹೊನ್ನಾವರದ ದೈನಂದಿನ ಆಡಳಿತದಲ್ಲಿ ಮೂಗು ತೂರಿಸದಿದ್ದರೆ ಆತನಿಗೆ ಉಂಡ ಅನ್ನ ಅರಗುವುದಿಲ್ಲ. ತನ್ನ ಹೆಸರು ಕೆಡಿಸುತ್ತಿರುವ ಅಮರನ ಕಂಡರೆ ಶಾಸಕಿ ಶೆಟ್ಟಿಯಮ್ಮನಿಗೆ ಅಷ್ಟಕ್ಕಷ್ಟೇ. ಆದರೆ ಅದ್ಯಾಕೋ ಈತನ ದೂರ ಮಾಡಲು ರವಿ ರೆಡಿಯಿಲ್ಲ. ಅಮರನ ನೆರಳು ಕಂಡರೆ ಸಾಕು ಅಧಿಕಾರಿಗಳು ನಿಂತಲ್ಲೇ ಅಡಗಿಬಿಡುತ್ತಾರೆ. ಅಮರನ ಹಡಬೆ ಕೆಲಸ-ಹ್ವಾಹಪಿಗೆ ಜನರು ತತ್ತರಿಸಿ ಹೋಗಿದ್ದಾರೆ.

ಪುರಾತತ್ವ ಇಲಾಖೆಯ ನಿಯಮ-ಕಾನೂನು ಬುದ್ಧಿಪೂರ್ವಕವಾಗೇ ಉಲ್ಲಂಘಿಸಿ ಬಹುಮಹಡಿ ಕಟ್ಟಡ ಎಬ್ಬಿಸಿರುವ ಈ ತಾಯಿ-ಮಗ ಜನ ವಿರೋಧಿಯಾದ ಬೈಪಾಸ್ ಹೈವೇಗೆ ಕಿತಾಪತಿ ಮಾಡುತ್ತಿರುವ ದಗಾಕೋರ ಕೊಂಕಣಿ ಲಾಬಿಗೆ ಒಳಗೊಳಗೇ ಸಹಕಾರ-ಸಹಾಯ ಕೊಡುತ್ತಿದ್ದಾರೆ! 1963ರಲ್ಲೇ ಹೆದ್ದಾರಿ ಇಲಾಖೆ ಚತುಷ್ಪಥ ಹೆದ್ದಾರಿಯ ಮುಂದಾಲೋಚನೆಯಿಂದ ಪರಿಹಾರ ಕೊಟ್ಟು ಜಾಗ ಸ್ವಾಧೀನ ಪಡೆದುಕೊಂಡಿತ್ತು. ಸದ್ರಿ ಜಾಗದಲ್ಲೇ ಒಂದಿಷ್ಟು ಬಂಡವಾಳಶಾಹಿ ಭಂಡರು ಅನಧಿಕೃತ ಕಟ್ಟಡ ಎಬ್ಬಿಸಿ ದಂಧೆ ನಡೆಸುತ್ತಿದ್ದಾರೆ. ಇಂಥ ಕಳ್ಳ ಫ್ಯಾಮಿಲಿಯಲ್ಲಿ ಕೆ.ವಿ. ಶೆಟ್ಟಿ ಕುಟುಂಬವೂ ಒಂದು. ಈ ವಂಶದ ರವಿಕುಮಾರನ ತಾತ-ತಂದೆಯ 'ಆಡಳಿತ ಕಚೇರಿ' ಇದ್ದದ್ದೇ ಹೈವೇ ಪಕ್ಕದ ಎಕ್ವಾಯರಿ ಜಾಗದಲ್ಲಿನ ವಾಣಿಜ್ಯ ಮಳಿಗೆಯಲ್ಲಿ. ಇಂಥ ಅಕ್ರಮ ಕಟ್ಟಡದ ಪಿತಾಮಹರೆಲ್ಲ ಸೇರಿ ಎನ್‌ಎಚ್-66ರ ಚತುಷ್ಪಥದ ದಾರಿ ತಪ್ಪಿಸುವ ಪಾತಕಕ್ಕೆ ಇಳಿದಿದ್ದಾರೆ. ಕುಮಟಾ ನಗರದಲ್ಲಿ ಹಾದುಹೋಗುವ ಹೈವೇ ದಿಕ್ಕು ಬದಲಿಸಿದರೆ ಸಾವಿರಾರು ಬಡ ರೈತ-ಕೂಲಿಕಾರ-ಹಿಂದುಳಿದ ವರ್ಗದ ಕುಟುಂಬಗಳು ಬೀದಿ ಪಾಲಾಗುತ್ತವೆ. ಹಣವಂತರ ದೋನಂಬರ್ ಸಾಮ್ರಾಜ್ಯ ಉಳಿಸಲು ಬಡವರ ಬಲಿ ಪಡೆಯುವ ಸ್ಕೆಚ್ ಹಾಕಿರುವ ಕೊಂಕಣಿ ಚೆಡ್ಡಿಗಳ ಬೆನ್ನಿಗೆ ಶಾಸಕಿ ಶಾರದಾ ಶೆಟ್ಟಿ ಮತ್ತಾಕೆಯ ಮಗ ನಿಂತು ಕುಮ್ಮಕ್ಕು ಕೊಡುತ್ತಿದ್ದಾರೆ. ಈ ಪ್ಲಾನ್ ಸರ್ಕಾರಿ ಬೊಕ್ಕಸಕ್ಕೆ 500 ಕೋಟಿ ಹಾನಿ ಮಾಡುತ್ತದೆ.

ಕೊಂಕಣಿಗರ ಪರ್ತಗಾಳಿ ಮಠಾಧೀಶ ವಿದ್ಯಾಧಿರಾಜ ತೀರ್ಥ, ಆತನ ಅಧಿಕಾರಸ್ಥ ಶಿಷ್ಯೋತ್ತಮರಾದ ಕೇಂದ್ರ ಮಂತ್ರಿ ಮನೋಹರ ಪಾರಿಕ್ಕರ್, ರಾಜ್ಯದ ಮಂತ್ರಿ ಆರ್.ವಿ. ದೇಶಪಾಂಡೆ ಮತ್ತು ಕೊಂಕಣಿ ಚೆಡ್ಡಿಗಳ ಮುಖ್ಯಸ್ಥ ಮಂಗೇಶ್ ಭೇಂಡೆಗಳು ಈಗ ಜಂಟಿಯಾಗಿ ಶುರು ಹಚ್ಚಿಕೊಂಡಿರುವ ಬೈಪಾಸ್ ಭಾನ್ಗಡಿಗೆ ಶಾಸಕಿ ನಾತೆಯಿಂದ ಶಾರದಾ ಶೆಟ್ಟಿ ಕೊಟ್ಟಿರುವ 'ಬೆಂಬಲ ಪತ್ರ'ವೇ ಬಲವಾಗಿದೆ. ಹಂದಿ ಗೋಣದಿಂದ ಅಡ್ಡಹಾರಿ ಹಿಡಿವ ಹೈವೇ ಬೈಪಾಸ್ ನಿರ್ಮಾಣಕ್ಕೆ ರವಿಕುಮಾರ್ ತಾಯಿಯಿಂದ ಶಿಫಾರಸು ಪತ್ರ ಕೊಡಿಸಿದ್ದಾನೆ. ಈ ಪತ್ರ ಆಧಾರವಾಗಿಟ್ಟುಕೊಂಡೇ ದೋಷಪಾಂಡೆ ಲೋಕೋಪಯೋಗಿ ಸೆಕ್ರೆಟರಿಯೇಟ್‌ನಲ್ಲಿ ಆಟ ಆಡಿದ್ದಾನೆ. ನಂತರ ಆತ "ನೋಡಮ್ಮಾ ನಾನು ಮಾಡೋದೆಲ್ಲ ಮಾಡಿದ್ದೇನೆ.... ಈಗ ನೀನು ಬೈಪಾಸ್ ಬಗ್ಗೆ ಪ್ರಯತ್ನ ಮಾಡಬೇಕು..." ಎಂದು ಶಾಸಕಿ ಶೆಟ್ಟಿಯಮ್ಮನಿಗೆ ಹೇಳಿದ್ದಾನೆ.

ಈಗ ಈ ತರಲೆ ಪತ್ರವೇ ಶಾಸಕಿ ಶೆಟ್ಟಿಯಮ್ಮ ಮತ್ತಾಕೆಯ ಭಾವಿ ಶಾಸಕನಾಗುವ ಹಗಲುಗನಸಿನಲ್ಲಿರುವ ರವಿಕುಮಾರ್ ಶೆಟ್ಟಿಗೆ ಉರುಳಾಗಿ ಕಾಡುತ್ತಿದೆ. ಬೈಪಾಸ್‌ನಿಂದ ನಿರ್ಗತಿಕರಾಗುವ ಬಡ ವರ್ಗದ ದಲಿತ-ಹಿಂದುಳಿದ ಮತ್ತು ಬುಡಕಟ್ಟು ಹಾಲಕ್ಕಿ ಒಕ್ಕಲಿಗರು ಬೀದಿಗಿಳಿದಿದ್ದಾರೆ. ಮೊನ್ನೆ ಬೃಹತ್ ಪ್ರತಿಭಟನೆ ನಡೆಸಿ ಹೆದ್ದಾರಿ ತಡೆದಿದ್ದಾರೆ. ಕೆಲವೇ ಕೆಲವು ಬಿಲ್ಡರ್ ಮಾಫಿಯಾ ಮಂದಿ ಮತ್ತು ಪರಿಹಾರ ಪಡೆದೂ ಅಕ್ರಮ ಕಟ್ಟಡ ಸರ್ಕಾರಿ ಜಾಗದಲ್ಲಿ ಕಟ್ಟಿಕೊಂಡಿರುವ ಚೋರ ಬಂಡವಾಳಶಾಹಿಗಳಿಗಾಗಿ ನಮ್ಮ ಬದುಕು ಬರ್ಬಾದ್ ಮಾಡದಂತೆ ಎಚ್ಚರಿಕೆ ನೀಡಿದ್ದಾರೆ. ತಮ್ಮ ಬದುಕಿಗೆ ಬೆಂಕಿ ಹಾಕುವವರ ಜತೆ ಶಾಸಕಿ ಮತ್ತಾಕೆಯ ಮಗ ಸೇರಿಕೊಂಡಿರುವುದರಿಂದ ಜನ ಕೆರಳಿದ್ದಾರೆ. ಜನರ ಸಿಟ್ಟು ಕಂಡು ಕಂಗಾಲಾಗಿರುವ ತಾಯಿ-ಮಗ "ನಮ್ಮದು ಬೈಪಾಸ್‌ಗೆ ಬೆಂಬಲ ಇಲ್ಲ... ಹಾಗೆ ಪತ್ರವೇ ಕೊಟ್ಟಿಲ್ಲ. ಹೈವೆ ಅಗಲ 30 ಮೀಟರ್‌ಗೆ ಸೀಮಿತಗೊಳಿಸುವಂತೆ ಪತ್ರ ಕೊಟ್ಟಿದ್ದೇವಷ್ಟೇ....." ಎಂದು ಸುಳ್ಳು ಹೇಳುತ್ತಿದ್ದಾರೆ. 1963 ರಲ್ಲೇ ಸ್ವಾಧೀನಪಡಿಸಿಕೊಳ್ಳಲಾದ ಜಾಗವೇ 40 ಮೀಟರ್ ಇದೆ. ಹೀಗಿರುವಾಗ 30 ಮೀಟರ್ ಚತುಷ್ಪಥ ಸಾಧ್ಯವೇ? ಪೆದ್ದು ಶಾಸಕಿ ಮತ್ತು ಮೊದ್ದು ಮಗನಿಗೆ ಇದೆಲ್ಲ ಅರ್ಥವಾಗುತ್ತಿಲ್ಲ!


ದೇಶಪಾಂಡೆ

ವಾಸ್ತವವಾಗಿ ಶಾರದಾ ಶೆಟ್ಟಿ-ರವಿಕುಮಾರ್ ಬೈಪಾಸ್‌ಗೆ ಬೆಂಬಲಿಸಿದ್ದಾರೆ. ಹೀಗಾದರೆ ತಮ್ಮ ಅಕ್ರಮ ಕಟ್ಟಡವೂ ಬಚಾವಾಗುತ್ತದೆಂದ ದೂ(ರು)ರಾಲೋಚನೆ ಇವರಿಗಿತ್ತು. ಈಗ ಬೈಪಾಸ್‌ಗೆ ಒಪ್ಪಿಗೆ ಇಲ್ಲ ಅಂತಿದ್ದಾರೆ. ಹಾಗಿದ್ದರೆ ಬೈಪಾಸ್ ಬೇಡವೆಂದು ಶಾಸಕಿ ಶೆಟ್ಟಿಯನ್ನು ಏಕೆ ಕೇಂದ್ರದ ಹೆದ್ದಾರಿ ಪ್ರಾಧಿಕಾರಕ್ಕೆ, ರಾಜ್ಯ ಲೋಕೋಪಯೋಗಿ ಸೆಕ್ರೆಟರಿಯೇಟ್‌ಗೆ ಖಡಕ್ ಪತ್ರ ಬರೆಯುತ್ತಿಲ್ಲ? ರವಿಕುಮಾರ್ ಶೆಟ್ಟಿಯ ಡಬ್ಬಲ್ ಗೇಮ್ ಬಗ್ಗೆ ನಾನಾ ನಮೂನೆಯ ಅನುಮಾನ ಬೈಪಾಸ್‌ನಿಂದ ಸಂತ್ರಸ್ತರಾಗಲಿರುವವರಲ್ಲಿ ಮೂಡಿಸಿದೆ. ಶಾರದಾ ಶೆಟ್ಟಿ ಮತ್ತಾಕೆಯ ಸ್ವಯಂಘೋಷಿತ ನಾಯಕಾಗ್ರೇಸನಿಗೆ ಬೈಪಾಸ್ ವಿರೋಧಿ ನಿಲುವಿದ್ದಿದ್ದೇಯಾದರೆ, ತಕ್ಷಣ ದೇಶಪಾಂಡೆ ವಾಮ ಮಾರ್ಗದಿಂದ ಹೆದ್ದಾರಿ ಪ್ರಾಧಿಕಾರಕ್ಕೆ ಕಳಿಸಿರುವ ಬೈಪಾಸ್ ಪ್ರಸ್ತಾವನೆಗೆ ವಿರೋಧ ವ್ಯಕ್ತಪಡಿಸಬೇಕಿದೆ.




ಇಂಥದೇ ಎಡಬಿಡಂಗಿತನ ಶಾಸಕಿ ಶೆಟ್ಟಿಯಮ್ಮ ಕಚ್ಚೆಹರುಕ ರಾಘು ಸ್ವಾಮಿಯ ರೇಪ್ ಕೇಸಲ್ಲಿ ತೋರಿಸಿದ್ದರು. ರಾಘು ಮಾಣಿಯನ್ನು ಅರೆಸ್ಟ್ ಮಾಡಲು ಕೆಕ್ಕಾರು ಮಠಕ್ಕೆ ಪೊಲೀಸರು ಬಂದಾಗ ನಡುರಾತ್ರಿ ಶೆಟ್ಟಿಯಮ್ಮ ಓಡೋಡಿ ಬಂದು ಅಡ್ಡ ನಿಂತು ಜನ್ಮಸಾರ್ಥಕ ಮಾಡಿಕೊಂಡಿದ್ದರು! ಅಂದು ರಾತ್ರಿ ಕೆಕ್ಕಾರಿನ ಹವ್ಯಕ ಬ್ರಾಹ್ಮಣರ ಮಠದ ಅಂಗಳದಲ್ಲಿ ನಡೆದ ಹೈಡ್ರಾಮಾದ ಪ್ರಮುಖ ಪಾತ್ರಧಾರಿಯಾಗಿದ್ದರು ಶೆಟ್ಟಿಯಮ್ಮ. ಖಳನಾಯಕನನ್ನೇ ರಕ್ಷಿಸ ಹೊರಟಿದ್ದ ಶೆಟ್ಟಿಯಮ್ಮನಿಗೆ ಮಹಿಳಾ ಶಾಸಕಿಗಿದು ಕಳಂಕ ತರುವ ನಡೆಯೆಂಬ ಸರಳ ಸತ್ಯವೂ ಹೊಳೆದಿರಲಿಲ್ಲ. ಬ್ರಾಹ್ಮಣ ಮತಕ್ಕೂ ಮಗ ರವಿಕುಮಾರ್ ಮಾಡಿದ ಎಡವಟ್ಟಿದಾಗಿತ್ತು. ಯಾವಾಗ ಅತ್ಯಾಚಾರಿ ಸ್ವಾಮಿ ರಾಘುನ "ಏಕಾಂತ ದರ್ಶನ"ಗಳ ಬಗ್ಗೆ ಹೈಗರಲ್ಲಿ ಜ್ಞಾನೋದಯವಾಯ್ತೋ ಆಗ ಅಮ್ಮ-ಮಗ ನಿಧಾನಕ್ಕೆ ಬಣ್ಣ ಬದಲಿಸಿದರು. ಈಗ ಚತುಷ್ಪಥ ಹೈವೇ ನಡುವೆ ಭೂತದಂತೆ ನಿಂತಿರುವ ಬೈಪಾಸ್ ಬಗ್ಗೆಯೂ ಆಷಾಢಭೂತಿ ಬುದ್ಧಿ ಪ್ರಯೋಗಿಸುತ್ತಿದ್ದಾರೆ.


ಇನ್ನಾದರೂ ಕ್ಷೇತ್ರದ ಸಮಸ್ಯೆ-ಸಂಕಟದಲ್ಲಿ ದ್ವಂದ್ವ ಪ್ರದರ್ಶಿಸುವುದು ಅಮ್ಮ-ಮಗ ಬಿಡಬೇಕಾಗಿದೆ. ರಾಜಕೀಯ ಬೈಪಾಸ್‌ನಲ್ಲಿ ಹೊರಟಿರುವ ರವಿಕುಮಾರ್ ಶೆಟ್ಟಿ ಜನಪರವಾಗಿ ಯೋಚಿಸುವುದು ಕಲಿಯಬೇಕಿದೆ. ಉಡಾಫೆ ಬಿಟ್ಟು ನೇರಾನೇರ ಹೈವೇಯಲ್ಲಿ ಓಡಾಡೋದು ರೂಢಿಸಿಕೊಳ್ಳಬೇಕಿದೆ. ಇಲ್ಲದಿದ್ದರೆ ಜನರೇ ರವಿಕುಮಾರನನ್ನು ದಾರಿಗೆ ತರುವುದು ಗ್ಯಾರಂಟಿ!!

■ ನಹುಷ

ಅನಂತ್ಮಾಣಿ ನಾಪತ್ತೆ!!

ಉತ್ತರ ಕನ್ನಡದ ಪಾಲಿಗೆ ತಲೆಮಾಸಿದ ರಾಜಕಾರಣಿ ದೋಷಪಾಂಡೆ ಎಷ್ಟು ದೊಡ್ಡ ದೋಖಾ ಧೂಮಕೇತುವೋ ಅಷ್ಟೇ ದೊಡ್ಡ ಅನಿಷ್ಟ ಸೋಂಭೇರಿ ಸಂಸದ ಅನಂತ್ಮಾಣಿ ಯಾನೆ ಅನಂತಕುಮಾರ್ ಹೆಗಡೆ. ಜನರು ಮೂಲ ಸಮಸ್ಯೆ ಈತನ ಬಳಿಗೊಯ್ದರೆ, "ಇದು ಎಮ್ಮೆಲ್ಲೆ ಕೆಲ್ಸ... ನಾನು ಕೇಂದ್ರದಲ್ಲಿ ಕಾನೂನು ಮಾಡೋನು...." ಎಂದು ಒಣ ರುಬಾಬು ತೋರಿಸುತ್ತಾನೆ. ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದ, ದಿಲ್ಲಿಯಲ್ಲೇ ಪರಿಹಾರವಾಗಬೇಕಾದ ತಕರಾರು ಎದ್ದಾಗಲೂ ಈತ ತಲೆ ತಪ್ಪಿಸಿಕೊಳ್ಳುತ್ತಾನೆ. ಸೀಬರ್ಡ್ ನಿರಾಶ್ರಿತರ ಸಮಸ್ಯೆ, ಕೊಂಕಣ ರೈಲು ಸಮಸ್ಯೆ, ಅಂಕೋಲಾ-ಹುಬ್ಬಳ್ಳಿ ರೈಲು ಹಳಿ ನಿರ್ಮಾಣ ಸಮಸ್ಯೆ, ಕೇಂದ್ರ ಯೋಜನೆಗಳ ತಾಪತ್ರಯ..... ಯಾವುದೇ ಇರಲಿ ಈತ ಸ್ಪಂದಿಸಿದ್ದೇ ಇಲ್ಲ.



ನಿತಿನ್ ಗಡ್ಕರಿ


ಅನಂತಕುಮಾರ್ ಹೆಗಡೆ

ಇಲೆಕ್ಷನ್ ಹೊತ್ತಲ್ಲಿ ಅಥವಾ ಕೋಮು ಕಿತಾಪತಿ ಸಂದರ್ಭದಲ್ಲಷ್ಟೇ ಈತ ಪ್ರತ್ಯಕ್ಷನಾಗುತ್ತಾನೆ. ನಂತರ "ದೇಶ ಭೋಗಿ" ಕೆಲಸದಲ್ಲಿ ತಲ್ಲೀನನಾಗುತ್ತಾನೆ. ಒಂದು ಕಾಲದಲ್ಲಿ ಚಡ್ಡಿ ಬೈಠಕ್‌ನ ಬುತ್ತಿ ಹುಡುಗನಾಗಿದ್ದ ಈ ಮಾಣಿ ಇವತ್ತು ಹಲವು ಕೋಟಿಗೆ ತೂಗುತ್ತಾನೆ. ಇದೇ ಸಾಕು ಈತನ ಅಸಲಿ ಹಿಂದೂತ್ವ-ದೇಶ ಭಕ್ತಿ ಬಿಂಬಿಸಲಿಕ್ಕೆ! ಕುಮಟಾದಲ್ಲಿ ಭುಗಿಲೆದ್ದಿರುವ ಭಾನ್ಗಡಿಗೆ ಈತನೂ ಹೊಣೆಗಾರನೇ. ಬೈಪಾಸ್‌ಗೆ ಪ್ರಯತ್ನಿಸುತ್ತಿರುವ ಆರೆಸ್ಸೆಸ್ ಮಾಫಿಯಾದ ನಿಷ್ಠಾವಂತ ಸೇವಕನೀತ. ಈತ ಎಂಪಿನಾತೆಯಿಂದ ಬೈಪಾಸ್ ಪರ ಕಾರ್ಯಾಚರಣೆ ನಡೆಸಿದ್ದಾನೆ.

ಪರ್ತಗಾಳಿ ಸ್ವಾಮಿಯಿಂದ ಕೇಂದ್ರ ಮಂತ್ರಿ ಪಾರಿಕ್ಕರ್ ತನಕ, ದೇಶಪಾಂಡೆಯಿಂದ ಶಾಸಕಿ ಶೆಟ್ಟಿಯಮ್ಮರ ವರೆಗೆ ಯಾರೇನೇ ಬೈಪಾಸ್ ಕರಾಮತ್ತು ನಡೆಸಿದರೂ ಅದೆಲ್ಲ ತಡೆಯುವ ಪ್ರಜಾತಾಂತ್ರಿಕ ಶಕ್ತಿಯಿರುವುದು ಮತ್ತು ಹೊಣೆಗಾರಿಕೆಯಿರುವುದು ಸಂಸದ ಅನಂತ್ಮಾಣಿ ಒಬ್ಬನಿಗೆ ಮಾತ್ರ. ಇದು ಎಂಪಿಯ ಕರ್ತವ್ಯ. ಬೈಪಾಸ್‌ನಿಂದ 6-8 ಹಳ್ಳಿಗರು ಬದುಕು ಕಳೆದುಕೊಳ್ಳುವುದು, ಹೊಸ ಬೈಪಾಸ್‌ಗೆ 500 ಕೋಟಿಯಷ್ಟು ವ್ಯಯವಾಗುವುದು, ಈಗಾಗಲೇ ಚತುಷ್ಪಥಕ್ಕಾಗಿ ವಶಪಡಿಸಿಕೊಂಡಿರುವ ಜಾಗದ ಮಾಲೀಕರಿಗೆ ಕೊಟ್ಟಿರುವ ಪರಿಹಾರ ದಂಡವಾಗೋದು ಮತ್ತು ದಗಲುಬಾಜಿಗೆ ಡಬ್ಬಲ್ ಬೆನಿಫಿಟ್ ಆಗೋದೆಲ್ಲಾ ಕೇಂದ್ರ ಸಾರಿಗೆ ಮಂತ್ರಿ ನಿತಿನ್ ಗಡ್ಕರಿ ಎದುರಿಗಿಟ್ಟು ಬಲವಾಗಿ ವಾದ ಮಂಡಿಸುವ ಜವಾಬ್ದಾರಿ ಸಂಸದನದಲ್ಲವಾ? ಕುಮಟೆಯ ಜನ ಬೈಪಾಸ್ ಭಯದಿಂದ ಬೊಬ್ಬೆ ಹೊಡೆಯುತ್ತಿದ್ದರೂ ಅನಂತ್ಮಾಣೀದು ಮಾತ್ರ ಪತ್ತೆಯೇ ಇಲ್ಲ!!


ಇದೆಲ್ಲ ಗೊತ್ತಿದ್ದೂ ಸಂಸದ ಅನಂತ್ಮಾಣಿ ಮೂರೂ ಮುಚ್ಚಿಕೊಂಡು ಹಾಯಾಗಿದ್ದಾನೆ. ಉತ್ತರ ಕನ್ನಡದ ಕಲ್ಲಡ್ಕ-ಹನುಮಂತ ಶಾನ್‌ಭಾಗ್‌ಗೆ ಗುರು ದಕ್ಷಿಣೆಯಾಗಿ 'ಬೈಪಾಸ್' ಕೊಡಲು ಅನಂತ್ಮಾಣಿ ಕಂಕಣಬದ್ಧನಾಗಿ ನಿಂತಿರುವುದು ನಾಚಿಕೆಗೇಡು! ಕೊಂಕಣಿ ಮಾಫಿಯಾದ ಪದತಲದಲ್ಲಿ ಬಾಲ ಮುದುರಿಕೊಂಡು ಬಿದ್ದಿರುವ ಅನಂತ್ಮಾಣಿಯ ದೇಶಭಕ್ತಿಗೆ ಸಾರ್ವತ್ರಿಕ ಸಂಕೇತವಿದು!!



ಪ್ರೆಸಿಷನ್ ಡಯಾಗ್ನೋಸ್ಟಿಕ್ಸ್




ಪ್ರಭಾಕರನ ರಾಜಶ್ರೀ ಫೈನಾನ್ಸ್



ಇಟ್ಟಿಗೆ ಗೂಡಿನ ಆಶೀರ್ವಾದ್ ಫೈನಾನ್ಸ್

ಮೈಸೂರು: ಬಡ್ಡಿ ದೊರೆಗೆ ಮಗನೇ ಬಲಿ



ಅವಿನಾಶ್


ಮೀಟರ್ ಬಡ್ಡಿ, ಚಕ್ರ ಬಡ್ಡಿ, ಮುಸ್ತಿ ಬಡ್ಡಿ, ನಾನಾ ಬಡ್ಡಿ.... ಹೀಗೆ ಬಡ್ಡಿಗೆ ಬಡ್ಡಿ ಹಾಕಿ ಸಾಲಗಾರರನ್ನು ಸುಲಿದು ಸುಲಿದೇ ದುಂಡಗಾದ ಬಡ್ಡಿಗಂಡರ ಪೈಕಿ ಇವನದ್ದು ಕೊಂಚ ವಿಚಿತ್ರ ಶೈಲಿ.

ಬಡ್ಡಿ ಕೊಡದೇ ಹೋದರೆ ಇವನು ಒಡಹುಟ್ಟಿದ ಅಣ್ಣನನ್ನೂ ಬಿಡಲಾರ. ಹೆಣ್ಣು ಕೊಟ್ಟ ಮಾವನಿಗೇ ಬಡ್ಡಿ ಮೇಲೆ ಬಡ್ಡಿ ಹಾಕುತ್ತಾನೆ. ಒಡಹುಟ್ಟಿದ ತಮ್ಮನೇ ಆದರೂ ಚಕ್ರಬಡ್ಡಿ ಕಕ್ಕಲೇಬೇಕು. ಅಷ್ಟೇ ಏಕೆ ಕೈಹಿಡಿದ ಮಡದಿಗೂ ಈತನ ಜೊತೆ ಬಡ್ಡಿ ಆಧಾರದ ಸಂಸಾರ!

ಮೊನ್ನೆ ಮೈಸೂರಿನ ಅಮಾಯಕ ಯುವಕನೊಬ್ಬನನ್ನು ತನ್ನ ಚಕ್ರಬಡ್ಡಿಯ ಚಕ್ರ ಸುಳಿಯಲ್ಲೇ ಮುಳುಗಿಸಿ ಕೊಂದ ಬಡ್ಡಿ ಬಕಾಸುರನೇ ಕೆ.ಆರ್. ಪ್ರಭಾಕರ್!

ಕಳೆದ ಹತ್ತು ವರ್ಷದಿಂದೀಚೆಗೆ ಮೈಸೂರಿನ ಫುಟ್‌ಪಾತು, ತಳ್ಳು ಗಾಡಿಯವರು, ಮಾರ್ಕೆಟ್ ಕೂಲಿಗಳನ್ನೂ ಬಿಡದೇ ಸಾಂಕ್ರಾಮಿಕ ವ್ಯಾಧಿಯಂತೆ ವಿಸ್ತರಿಸಿದ ಮೀಟರ್ ಬಡ್ಡಿ ದಂಧೆಯ ಪರಮ ಕೊಳಕು ರೂಪವೇ ಈ ಪ್ರಭಾಕರ. ಮೈಸೂರಿನ ಲಿಕ್ಕರ್ ದೊರೆ ಮಾಂಬಳ್ಳಿ ಪ್ರೋತರಾಜು ಹೆಸರು ಬಳಸಿಕೊಂಡೇ ಮುಗ್ಧ ಸಾಲಗಾರರ ಸುಲಿಗೆಗೆ ನಿಂತ ಬಡ್ಡಿ ದೈತ್ಯ ಪ್ರಭಾಕರನ ಗುಂಡಾಗಿರಿ, ಬಡ್ಡಿ ದಾಹ ಮತ್ತು ಅಕ್ರಮ ಫೈನಾನ್ಸಿಂಗ್ ಹಾವಳಿಗೆ ಪೊಲೀಸರು ಬ್ರೇಕ್ ಹಾಕಲೇಬೇಕಿದೆ. ಕನಿಷ್ಠ ಮೈಸೂರು ಪೊಲೀಸ್ ಕಮೀಷನರ್ ಸಲೀಮ್ ಸಾಹೇಬರಿಗಾದರೂ ಈತನ ಸಾಲಗಾರರ ಕಣ್ಣೀರು ಅರ್ಥವಾಗದಿದ್ದರೆ ಹೇಗೆ?

ಮೈಸೂರಿನ ಕೆ.ಆರ್. ಆಸ್ಪತ್ರೆ ಪಕ್ಕದಲ್ಲೇ ತಲೆ ಎತ್ತಿದ ರಾಜಶ್ರೀ ಫೈನಾನ್ಸ್ ಇನ್‌ವೆಸ್ಟ್‌ಮೆಂಟ್ಸ್ ಮತ್ತು ಮೈಸೂರು ಮೃಗಾಲಯದ ಎದುರಿಗೆ ಹೆಡೆ ಎತ್ತಿದ ಆಶೀರ್ವಾದ್ ಫೈನಾನ್ಸ್ ಅಂಡ್ ಇನ್‌ವೆಸ್ಟ್‌ಮೆಂಟ್ಸ್ ಎಂಬ ಎರಡು ಬಡ್ಡಿ ಅಡ್ಡೆಗಳ ವಾರ್ಷಿಕ ವಹಿವಾಟೆ ಕೋಟಿ ಲೆಕ್ಕದಲ್ಲಿದೆ. ಈ ಎರಡೂ ಬಡ್ಡಿ ಅಡ್ಡೆಗಳಿಗೆ ಕೆ.ಆರ್. ಪ್ರಭಾಕರನೇ ಧಣಿ. ಇದಲ್ಲದೆ ಮೈಸೂರಿನ ಜಗನ್ಮೋಹನ ಪ್ಯಾಲೇಸ್ ಪಕ್ಕ 'ಪ್ರೆಸಿಷನ್ ಡಯಾಗ್ನೋಸ್ಟಿಕ್ಸ್' ಎಂಬ ಕಫ, ಮಲ, ಮೂತ್ರ ಪರೀಕ್ಷಾ ಕೇಂದ್ರಕ್ಕೂ ಈತನೇ ಮಾಲಿಕ. ಮೀಟರ್ ಬಡ್ಡಿ ದಂಧೆಗೂ ಮಲಮೂತ್ರ ಪರೀಕ್ಷೆಗೂ ಅದೆಂಥ ನೆಂಟಸ್ತಿಕೆಯೋ ಗೊತ್ತಿಲ್ಲ, ಆದರೆ ಪ್ರಭಾಕರನ ಭೂತ ಭವಿಷ್ಯತ್ ವರ್ತಮಾನಗಳೆಲ್ಲವೂ ಬಡ್ಡಿ ಚಕ್ರಬಡ್ಡಿಯ ಸುತ್ತಲೇ ಗಿರಕಿ ಹಾಕುತ್ತವೆ.



ತಾಂಡವಪುರ ಪುಟ್ಟಪ್ಪ

ರಾಜಶ್ರೀ ಫೈನಾನ್ಸ್ ಮತ್ತು ಇಟ್ಟಿಗೆ ಗೂಡಿನ ಆಶೀರ್ವಾದ್ ಫೈನಾನ್ಸ್ ಅಡ್ಡೆಗಳ ಕುಖ್ಯಾತಿ, ಕ್ರೌರ್ಯ ಮತ್ತು ಬಡ್ಡಿ ಬಾಕ ಹಾವಳಿಗಳು ಒಂದೆರಡಲ್ಲ. ಫುಟ್‌ಪಾತ್ ವ್ಯಾಪಾರಿಯೊಬ್ಬ ಬೆಳಗ್ಗೆ ಒಂಬೈನೂರು ರೂಪಾಯಿ ಸಾಲ ಪಡೆದನೆಂದರೆ ಸಂಜೆ ಹೊತ್ತಿಗೆ ಸಾವಿರ ರೂಪಾಯಿ ತೆಕ್ಕಲೇಬೇಕು. ಅಂದರೆ ದಿನದ ಲೆಕ್ಕಕ್ಕೇ 12 ಪರ್ಸೆಂಟ್ ಬಡ್ಡಿ. ಇದನ್ನೇ ತಿಂಗಳ ಲೆಕ್ಕಕ್ಕೆ ಮುಂದುವರೆಸಿದನೆಂದರೆ ದಿನಂಪ್ರತಿ ನೂರು ರೂಪಾಯಿ ಬಡ್ಡಿ ಕಟ್ಟುತ್ತಲೇ ಇರಬೇಕು. ಇದು ಹೇಗೆಂದರೆ ಸಾವಿರ ರೂಪಾಯಿ ಸಾಲ ಪಡೆದವನು ತಿಂಗಳಾಂತ್ಯಕ್ಕೆ ಮೂರು ಸಾವಿರ ರೂಪಾಯಿ ಬಡ್ಡಿ ಕಟ್ಟಿದರೂ ಆತನ ಸಾಲದ ಅಸಲು ಸಾವಿರ ರೂಪಾಯಿ ಹಾಗೇ ಉಳಿದಿರುತ್ತದೆ!

ಮೈಸೂರಿನ ದೇವರಾಜ ಮಾರ್ಕೆಟ್, ಚಿಕ್ಕ ಗಡಿಯಾರ, ದೇವರಾಜ ಅರಸ್ ರಸ್ತೆ ಬಸ್‌ಸ್ಟ್ಯಾಂಡ್ ಸುತ್ತಮುತ್ತ, ಕೆ.ಆರ್. ಆಸ್ಪತ್ರೆ ಪ್ರದೇಶ, ಇಟ್ಟಿಗೆ ಗೂಡು ಇತ್ಯಾದಿ ಏರಿಯಾಗಳ ಫುಟ್‌ಪಾತ್ ವ್ಯಾಪಾರಿಗಳು, ತಳ್ಳು ಗಾಡಿಯವರು, ಕೂಲಿಗಳು, ಆಟೋ ಚಾಲಕರು, ಗಾರೆ ಕೆಲಸದವರು ಸೇರಿದಂತೆ ಸಾವಿರಾರು ಮಂದಿ ಬಡಪಾಯಿಗಳು ಇವನಿಗೂ ಈತನ ಬಡ್ಡಿ-ಚಕ್ರ ಬಡ್ಡಿಯ ವಿಷವರ್ತುಲಕ್ಕೆ ಬಿದ್ದು ನರಳುತ್ತಲೇ ಇದ್ದಾರೆ.

ಇದಲ್ಲದೆ ಸಣ್ಣಪುಟ್ಟ ಹೊಟೇಲು, ಲಾರಿ ಮಾಲೀಕರು, ಟ್ಯಾಕ್ಸಿ ಡ್ರೈವರುಗಳು, ತರಕಾರಿ ಮಾರುಕಟ್ಟೆಯ ಚಿಲ್ಲರೆ ವರ್ತಕರಿಗೆಂದೇ ಲಕ್ಷ ರೂಪಾಯಿ ಸಾಲದ ಮತ್ತೊಂದು ಬಲೆ ಹೆಣೆದಿದ್ದಾನೆ. ಅದು ವಾರಕ್ಕೆ 10 ಸಾವಿರದಂತೆ 70 ದಿನದ ಸಾಲ. ಲಕ್ಷದಲ್ಲಿ ಆ ವಾರದ 10 ಸಾವಿರ ಹಿಡಕೊಂಡು 90 ಸಾವಿರ ಕೊಟ್ಟನೆಂದರೆ ಪ್ರತಿವಾರ 10 ಸಾವಿರದಂತೆ ಎರಡೂವರೆ ತಿಂಗಳ ಕಾಲ ಕಟ್ಟಬೇಕು. ಅದಕ್ಕೆಂದು ಖಾಲಿ ಚೆಕ್ಕು ಆ್ಯಂಡಿಮ್ಯಾಂಡ್, ಖಾಲಿ ಛಾಪಾ ಕಾಗದದ ಮೇಲೆ ಸಹಿ, ಹೆಬ್ಬೆಟ್ಟು ಒತ್ತಿಸಿಕೊಳ್ಳುತ್ತಾನೆ. ಸ್ವಂತ ಲಾರಿ, ಟ್ಯಾಕ್ಸಿಯಿದ್ದರೆ ಅವುಗಳ ಮಾಲಿಕತ್ವದ ಫಾರ್ಮುಗಳ ಮೇಲೆ ಸಹಿ ಹಾಕಿಸಿ ಕೊಳ್ಳುತ್ತಾನೆ. ಚೂರು ಏರುಪೇರಾದರೂ 1 ಲಕ್ಷಕ್ಕೆ ಐದು ಲಕ್ಷದ ಮೊತ್ತ ಬರೆದು ಕೇಸು ಜಡಿಯುತ್ತಾನೆ.



ಕಮೀಷನರ್ ಸಲೀಂ

ಈತನ ಕೇಸು, ಖಾಲಿ ಕಾಗದಪತ್ರಗಳ ಮೇಲೆ ಪಡೆದ ಸಹಿಯ ದುಷ್ಪರಿಣಾಮಕ್ಕೆಂದೇ ಒಂದಲ್ಲ ಎರಡಲ್ಲ ಐದು ಮಂದಿ ವಕೀಲರನ್ನಿಟ್ಟಿದ್ದಾನೆ. ಕೊಟ್ಟ 90 ಸಾವಿರಕ್ಕೆ ವಾರಂಪ್ರತಿ 10 ಸಾವಿರವೆಂದರೆ ಅಲ್ಲಿಗೆ ಲಕ್ಷಕ್ಕೆ ಬಡ್ಡಿಯೇ 20 ಸಾವಿರವಾಯಿತು!

ಹಾಗೊಮ್ಮೆ ಬಡ್ಡಿ ಕಟ್ಟುವುದಾಗಲಿ, ಕಂತು ಕಟ್ಟುವುದಾಗಲಿ ಒಂದು ದಿನ ತಡವಾದರೂ ಅದಕ್ಕೆ 500 ರೂಪಾಯಿ ದಂಡ ವಿಧಿಸುತ್ತಾನೆ. ಈ ರೀತಿ ಬಡ್ಡಿ ಚಕ್ರ ಬಡ್ಡಿಗೆ ದಂಡವೆಂದು ಸುಲಿಯುವ ದಿನಂಪ್ರತಿ 500 ರೂಪಾಯಿಯ ಒಟ್ಟೂ ಮೊತ್ತವೇ ವರ್ಷವೊಂದಕ್ಕೆ 8 ರಿಂದ 10 ಲಕ್ಷದಷ್ಟಾಗುತ್ತದೆ. ಹೀಗೆ ಬಡ್ಡಿಗೆ ಬಡ್ಡಿ ಅದಕ್ಕೆ ಪೆನಾಲ್ಟಿ ಎಂದು ವರ್ಷಂಪ್ರತಿ ಸಂಗ್ರಹವಾಗುವ ಹೆಚ್ಚುವರಿ ಎಂಟೋ ಹತ್ತೋ ಲಕ್ಷ ಹಿಡಿದು ಫಾರಿನ್ ಶೋಕಿಗೆ ಹೊಂಟನೆಂದರೆ ಥೈಲ್ಯಾಂಡ್, ಬ್ಯಾಂಕಾಕ್, ಪಟ್ಟಾಯಗಳ ಟೂರಿಸಂ ಮುಗಿಸಿಬರುವುದು ಈತನ ವಿಕೃತಿ!

ಇಂಥಾ ವಿಕಾರಗಳಿಗೆಂದೇ ಧ್ರುವ ಎಂಬಾತನ ಮೂರ್‍ನಾಲ್ಕು ಮಂದಿ ಲಂಪಟ ಗೆಳೆಯರ ತಂಡವೊಂದು ಪ್ರಭಾಕರನಿಗೆ ಸಾಥ್ ಕೊಡುತ್ತದೆ.


ಮೂರೋ ಐದೋ ಲಕ್ಷ ಸಾಲ ಕೊಟ್ಟು ಅದಕ್ಕೆ ಬಡ್ಡಿ, ಚಕ್ರ ಬಡ್ಡಿ, ಪೆನಾಲ್ಟಿ ಎಂದೆಲ್ಲಾ ಲೆಕ್ಕ ಹಾಕಿ ಇಲವಾಲದ ಜಗದೀಶ್ ಎಂಬಾತನ 60x40 ಅಳತೆಯ ನಿವೇಶನವನ್ನು ಕೇವಲ 20 ಲಕ್ಷಕ್ಕೆ ಪ್ರಭಾಕರ್ ಲಪಟಾಯಿಸಿಬಿಟ್ಟ. ಅಸಲಿಗೆ ಅದರ ಮಾರುಕಟ್ಟೆ ರೇಟೇ 50 ಲಕ್ಷವಿತ್ತು. ಕೇವಲ 6 ಲಕ್ಷ ಸಾಲ ಕೊಟ್ಟು ಕುಂಬಾರ ಕೊಪ್ಪಲಿನ ಅಸಹಾಯಕನೊಬ್ಬನ 60x40 ಸೈಟನ್ನೂ ಕಿತ್ತುಕೊಂಡ. ಕುವೆಂಪು ನಗರದ 2ನೇ ಕ್ರಾಸಿನ 416ನೇ ನಂಬರಿನ 30x50 ಸೈಟು ಈತನ ವಶವಾಗಿದ್ದು ಕೇವಲ 8 ಲಕ್ಷದ ಸಾಲಕ್ಕೆ. ಸದ್ಯ ಅದರ ಮಾರುಕಟ್ಟೆ ದರವೇ 70 ಲಕ್ಷಕ್ಕಿದೆ!

ಈ ಹಿಂದೆ ನಂಜನಗೂಡು ಗುಂಡ್ಲುಪೇಟೆ ನಡುವಿನ ತಾಂಡವಪುರದಲ್ಲಿ ಇದೇ ಪ್ರಭಾಕರ್ ಚಾಮುಂಡಿ ವೈನ್ಸ್ ಎಂಬ ಥರ್ಡ್‌ಕ್ಲಾಸ್ ಲಿಕ್ಕರ್ ಅಡ್ಡೆಯೊಂದನ್ನು ತೆರೆದಿದ್ದ. ನಕಲಿ ಬ್ರಾಂಡಿ-ವಿಸ್ಕಿ ಮಾರಲೆತ್ನಿಸಿ ಒಂದಲ್ಲ ಎರಡು ಬಾರಿ ಜೈಲಿಗೂ ಹೋಗಿಬಂದ. ಈತನ ಕಳಪೆ ವೈನ್‌ಸ್ಟೋರಿಗೆ ಪ್ರತಿನಿತ್ಯ ಕುಡಿಯಲು ಬರುತ್ತಿದ್ದ ಪುಟ್ಟಪ್ಪ ಎಂಬಾತನಿಗೆ ಸಾಲದ ಲೆಕ್ಕದಲ್ಲಿ ಕಳಪೆ ವಿಸ್ಕಿ ಕುಡಿಸಿಯೇ ಆ ಸಾಲದ ಜೊತೆ ಇನ್ನೂ ಏಳು ಲಕ್ಷದ ಸಾಲ ಕೊಟ್ಟ. ಅಲ್ಲಿಗೆ 8 ಲಕ್ಷ ಸಾಲವಾಯಿತು. ಅದಕ್ಕೆ ಬಡ್ಡಿ, ಚಕ್ರಬಡ್ಡಿ ಪೆನಾಲ್ಟಿ ಎಲ್ಲವೂ ಸೇರಿ ಕೊನೆಗೆ ಗುಂಡ್ಲುಪೇಟೆ ಸಮೀಪದ ಪುಟ್ಟಪ್ಪನ ಐದು ಎಕರೆ ಭರ್ಜರಿ ತೋಟವೇ ಪ್ರಭಾಕರನ ಪಾಲಾಗಿ ಹೋಯಿತು.

ಇವತ್ತು ಪುಟ್ಟಪ್ಪ ಬೀದಿಗೆ ಬಿದ್ದಿದ್ದಾನೆ; ಪ್ರಭಾಕರನ ಫಾರ್ಮ್‌ಹೌಸ್‌ನಲ್ಲಿ ವಾರಕ್ಕೊಮ್ಮೆ ಗುಂಡು ತುಂಡಿನ ಪಾರ್ಟಿ!

ಇದು ಪ್ರಭಾಕರನ ಬಡ್ಡಿ ಜಾಲಕ್ಕೆ ಸಿಲುಕಿ ಮನೆ, ಮಠ ಕಳೆದುಕೊಂಡವರ ಕೆಲ ಉದಾಹರಣೆಗಳಷ್ಟೆ. ಈತನ ಕ್ರೌರ್ಯ ಮತ್ತು ಬಡ್ಡಿದಾಹದ ಪರಮಾವಧಿಯೆಂಬಂತೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡವನು ಬೆಂಗಳೂರಿನ ಕುರುಬರಹಳ್ಳಿಯ ಮುಗ್ಧ ಯುವಕ ಅವಿನಾಶ್. 2014ರ ಅಕ್ಟೋಬರ್ 2ರ ಗಾಂಧಿ ಜಯಂತಿಯಂದೇ ತನ್ನ ಕುರುಬರಹಳ್ಳಿಯ ಮನೆಯಲ್ಲಿ ಅವಿನಾಶ್ ಆತ್ಮಹತ್ಯೆಗೆ ಶರಣಾಗಿದ್ದ. ಈ ಅವಿನಾಶ್ ಬೇರೆ ಯಾರೂ ಅಲ್ಲ ಖುದ್ದು ಪ್ರಭಾಕರನ ಅಣ್ಣ ವೃಷಭೇಂದ್ರಪ್ಪನ ಒಬ್ಬನೇ ಮಗ. ಆತ ಮಾಡಿದ ತಪ್ಪೆಂದರೆ ಮೈಸೂರಿನ ಜಗನ್ ಮೋಹನ್ ಅರಮನೆ ಬಳಿ ತನ್ನ ಚಿಕ್ಕಪ್ಪ ಪ್ರಭಾಕರನ ಪಾರ್ಟನರ್‌ಶಿಪ್‌ನಲ್ಲಿ ಪ್ರೆಸಿಷನ್ ಡಯಾಗ್ನೋಸ್ಟಿಕ್ಸ್ ಎಂಬ ಲ್ಯಾಬೋರೇಟರಿ ಆರಂಭಿಸಿದ್ದು.

ಮಲ ಮೂತ್ರ ಪರೀಕ್ಷಾ ಕೇಂದ್ರವನ್ನು ಆರಂಭಿಸಿದ್ದು ಅಣ್ಣನ ಮಗ ಅವಿನಾಶ್ ಆದರೂ ಅದಕ್ಕೆ ಬಂಡವಾಳ



ಬಡ್ಡಿ ದೊರೆ ಪ್ರಭಾಕರ್

ಎಂದು ಸಾಲ ಕೊಟ್ಟವನು ಪ್ರಭಾಕರ್. ಬಂದ ಲಾಭದಲ್ಲಿ ಅರ್ಧಕ್ಕರ್ಧ ಎಂದೇ ಮಾತಾಗಿತ್ತು. ಆದರೆ ಹೊಸ ಲ್ಯಾಬ್‌ಗೆ ವ್ಯಾಪಾರ ಕುದುರಬೇಕಲ್ಲ. ಅದೆಷ್ಟು ಮಂದಿ ತಾನೇ ಮಲ ಮೂತ್ರ ಹಿಡಿದು ಬಂದಾರು. ಮೀಟರ್ ಬಡ್ಡಿ ದಂಧೆಗೂ ಮಲಮೂತ್ರದ ವಿಷಯಕ್ಕೂ ಏನಕೇನ ತಾಳೆಯೇ ಇರದಿದ್ದರೂ ಕೊಟ್ಟ ಸಾಲಕ್ಕೆ ಬಡ್ಡಿ, ಚಕ್ರ ಬಡ್ಡಿ ಬೆಳೆದು ಬಡಪಾಯಿ ಅವಿನಾಶ್‌ಗೆ ಅದೇ ದೊಡ್ಡ ಪಜೀತಿಯಾಯಿತು.

ಲ್ಯಾಬೋರೇಟರಿ ಹಾಳಾಗಲಿ ಚಿಕ್ಕಪ್ಪನ ಬಡ್ಡಿ ಕಾಟದಿಂದ ಬಚಾವಾಗುವುದೇ ದೊಡ್ಡ ತಲೆನೋವಾಯಿತು. ನಿನ್ನ ಲ್ಯಾಬು ನೀನೇ ಇಟ್ಟುಕೋ ಎಂದಿದ್ದೇ ಅವಿನಾಶ್ ಬೆಂಗಳೂರಿಗೆ ಕಂಬಿ ಕಿತ್ತ. ಹಾಗಂತ ಪ್ರಭಾಕರ್ ಬಿಡಬೇಕಲ್ಲ. ಒಂದೋ ನನ್ನ ಸಾಲಕ್ಕೆ ಈ ಪಾಟಿ ಬಡ್ಡಿ ಸೇರಿಸಿಕೊಡು ಇಲ್ಲಾಂದ್ರೆ ಅದು ತೀರುವ ತನಕ ನನ್ನ ಲ್ಯಾಬಿನಲ್ಲಿ ಬಿಟ್ಟಿ ಜೀತ ಮಾಡು ಎಂದದ್ದೇ ಒಂದು ಡಜನ್ ಮೈಸೂರಿನ ರೌಡಿಗಳನ್ನು ಕಟ್ಟಿಕೊಂಡಿದ್ದೇ ಬೆಂಗಳೂರಿಗೆ ದಾಳಿಯಿಟ್ಟ. ಆ ಹೊತ್ತಿಗೆ ಅವಿನಾಶ್ ಕೆಂಗೇರಿಯ ಶಿರ್ಕೆ ಟೌನ್‌ಶಿಪ್ಪಿನಲ್ಲಿ ತಂದೆ ವೃಷಭೇಂದ್ರಪ್ಪನೊಂದಿಗೆ ಬಾಡಿಗೆಗಿದ್ದ. ಪ್ರಭಾಕರ್ ಮನೆಗೆ ನುಗ್ಗಿದ್ದೇ ಅಣ್ಣನ ಎದುರೇ ಆತನ ಮಗ ಅವಿನಾಶ್‌ನನ್ನು ಎತ್ತಾಕಿಕೊಂಡು ಮೈಸೂರಿಗೊಯ್ಯಲೆತ್ನಿಸಿದ.

ವಿಧಿಯಿಲ್ಲದೆ ಒಂದು ತಿಂಗಳು ಟೈಮು ಕೇಳಿದ ಅಣ್ಣ ಮಗನನ್ನು ಕಳಿಸು,' ನಿನ್ನ ಸಾಲಕ್ಕಾದರೂ ಏರ್ಪಾಡು ಮಾಡುತ್ತೇನೆಂದು ಮಾತು ಕೊಟ್ಟ. ತಿಂಗಳೇನೋ ಕಳೆಯಿತು. ಗೆಳೆಯರ್‍ಯಾರೂ ಅವಿನಾಶ್ ಕೈಹಿಡಿಯಲಿಲ್ಲ. ಅಪ್ಪ ವೃಷಭೇಂದ್ರಪ್ಪನಿಗೂ ಬರಬೇಕಿದ್ದ ದುಡ್ಡು ಹುಟ್ಟಲಿಲ್ಲ. ಅದನ್ನೆಲ್ಲ ಹತಾಶೆಯಿಂದಲೇ ಅನುಭವಿಸಿದ್ದ ಅವಿನಾಶ್ 2014ರ ಅಕ್ಟೋಬರ್ 2 ರಂದು ತನ್ನನ್ನು ತಾನೇ ಕೊಂದುಕೊಂಡು. ತನ್ನ ಕ್ರೌರ್ಯ ಮತ್ತು ಬಡ್ಡಿ ದಾಹಕ್ಕೆ ಅನ್ಯಾಯವಾಗಿ ಅಣ್ಣನ ಮಗನನ್ನೇ ಪ್ರಭಾಕರ ಬಲಿ ಪಡೆದಿದ್ದ ಸಣ್ಣದೊಂದು ಪಶ್ಚಾತ್ತಾಪ, ಪಾಪ ಪ್ರಜ್ಞೆಯೂ ಆತನನ್ನು ಕಾಡಲಿಲ್ಲ. ಅಂಥಾದ್ದೇನೂ ನಡೆದೇ ಇಲ್ಲ ಎಂಬಂತೆ ಅವಿನಾಶ್ ಶವದ ಮುಂದೆ ನಿಂತು ತನ್ನ ತಲೆ ಕ್ರಾಪು ತೀಡಿಕೊಂಡಿದ್ದ.

ಈಗ ಒಂಟಿಕೊಪ್ಪಲಿನ ಸಿದ್ಧರಾಜು ಎಂಬ ಆಟೋಡ್ರೈವರ್ ನೇಣಿಗೆ ಶರಣಾದ ಸುದ್ದಿ ಮೈಸೂರಿನಿಂದ ಬಂದಿದೆ. ಆತನದ್ದೂ ಮೀಟರ್ ಬಡ್ಡಿಗೆ ನಡೆದ ಬಲಿಯೆ. ಒಂದು ಮೂಲದ ಪ್ರಕಾರ ಈತ ಕೂಡ ಬಡ್ಡಿ ದೊರೆ ಪ್ರಭಾಕರನ ಬಡ್ಡಿ ಪಾಪದ ಫಲಾನುಭವಿಯೆ. ಎಲ್ಲಿ ತನ್ನನ್ನು ಜನ ರೊಚ್ಚಿಗೆದ್ದು ಅಟ್ಟಾಡಿಸಿಯಾರೋ ಎಂದು ಪ್ರಭಾಕರ ಬಾಡಿಗೆ ಬಂಟರೇ ಆತ್ಮಹತ್ಯೆ ಮಾಡಿಕೊಂಡವನ ಕುಟುಂಬದ ಬಾಯಿ ಮುಚ್ಚಿಸಿದ್ದಾರಂತೆ.

ಮೈಸೂರು ಬಡ್ಡಿ ದೊರೆಗೆ ಇನ್ನೆಷ್ಟು ಬಲಿಗಳೋ...? ಪೊಲೀಸ್ ಕಮೀಷನರ್ ಸಲೀಮ್ ಸಾರ್, ನೀವಾದರೂ ಕಣ್ಣು ತೆರೆಯಬಾರದೆ?

■ ರಾ.ಸೋಮನಾಥ್





ಬಡ್ಡಿ ದುಡ್ಡಲ್ಲೇ ಪ್ರಭಾಕರನ ಸಿದ್ಧಾರ್ಥ ಲೇಔಟ್ ಬಂಗಲೆ



ಮದ್ದೂರು ಪುರಸಭೆ

ತಮ್ಮಣ್ಣ ಪಟಾಲಂನ ಅಂಧಾದರ್ಬಾರ್





ಒಂದು ಕಾಲಕ್ಕೆ ಹೋರಾಟಗಾರರ ತವರೂರು ಎಂದೆನಿಸಿದ್ದ ಮದ್ದೂರು ಇವತ್ತು ಶಾಸಕ ಡಿ.ಸಿ.ತಮ್ಮಣ್ಣನ ಪುಂಡ ಪಟಾಲಂನಿಂದಾಗಿ ಕಳಂಕ ಮೆತ್ತಿಸಿಕೊಳ್ಳುವ ಹಾದಿಯಲ್ಲಿದೆ. ಜನರ ಸೇವೆಗೆಂದೇ ರಾಜಕೀಯ ರಂಗ ಪ್ರವೇಶಿಸಿ ಮಾದರಿಯಾಗಿದ್ದ ಹೆಚ್.ಕೆ.ವೀರಣ್ಣಗೌಡ, ಜೋಳದ ಮಂಚೇಗೌಡ, ಎಂ.ಎಸ್.ಸಿದ್ದರಾಜುರಂತವರು ಅಧಿಕಾರ ನಡೆಸಿದ್ದ ಮದ್ದೂರಿನ ಪುರಸಭೆಯಲ್ಲಿಂದು ಅಧ್ಯಕ್ಷ, ಸದಸ್ಯರು ಹಾಗೂ ಅಧಿಕಾರಿಗಳ ಆಟಾಟೋಪ ಎಗ್ಗಿಲ್ಲದೆ ನಡೆದಿದೆ.

23 ಸದಸ್ಯ ಬಲದ ಪುರಸಭೆ ಆಡಳಿತ ಜೆಡಿಎಸ್ ಪಕ್ಷದ ಹಿಡಿತದಲ್ಲಿದೆ. ಜೆಡಿಎಸ್-15, ಕಾಂಗ್ರೆಸ್-4, ಪಕ್ಷೇತರ-4 ಮಂದಿ ಸದಸ್ಯರಿದ್ದಾರೆ. ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕಾಂಗ್ರೆಸ್ ಆಳಿದ್ದು ಬಿಟ್ಟರೆ ಬಹುಪಾಲು ಅವಧಿ ಜೆಡಿಎಸ್ ಪಕ್ಷವೇ ಇಲ್ಲಿ ಅಧಿಕಾರ ಚಲಾಯಿಸುತ್ತಾ ಬಂದಿದೆ. ಬೆಂಗಳೂರು-ಮೈಸೂರು ಹೆದ್ದಾರಿಗೆ ತಾಗಿಕೊಂಡಿರುವ ಮದ್ದೂರು ಶಹರದಲ್ಲಿ ಮಂಡ್ಯದ ಇತರೆ ತಾಲ್ಲೂಕುಗಳಿಗಿಂತ ಭೂಮಿಯ ಬೆಲೆ ಸಾಕಷ್ಟು ಹೆಚ್ಚು, 30x40 ಸೈಟಿನ ಬೆಲೆ 15 ಲಕ್ಷ ರೂ.ಗಳಿಗೂ ಹೆಚ್ಚು, ಲೀಲಾವತಿ ಬಡಾವಣೆಯಂತಹ ಪ್ರತಿಷ್ಠಿತ ಬಡಾವಣೆಯಲ್ಲಿ 20 ಲಕ್ಷ ರೂಪಾಯಿಗೂ ಒಂದು ಸೈಟು ಸಿಗೊಲ್ಲ. ಇಂತಹ 'ಬಹುಮೌಲ್ಯ'ದ ಮದ್ದೂರು ಪುರಸಭೆ ಆದಾಯಕ್ಕೂ ಗತಿಯಿಲ್ಲದೆ ಅಭಿವೃದ್ಧಿ ಕಾರ್ಯದಿಂದ ದೂರ ಸರಿದಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಶಾಸಕ ಡಿ.ಸಿ.ತಮ್ಮಣ್ಣ ಹಿಡಿತ

ಒಮ್ಮೆ ಕಿರುಗಾವಲು ಕ್ಷೇತ್ರದಿಂದ, 2 ಬಾರಿ ಮದ್ದೂರು ಕ್ಷೇತ್ರದಿಂದ ಶಾಸಕನಾಗಿ ಆಯ್ಕೆಯಾಗಿರುವ ಡಿ.ಸಿ.ತಮ್ಮಣ್ಣನ ಭಾಷಣದಲ್ಲಿ ಅಭಿವೃದ್ಧಿ ಪುಂಖಾನುಪುಂಖವಾಗಿ ಹರಿದುಬರುತ್ತದೆಯೇ ಹೊರತು ಕಾರ್ಯರೂಪಕ್ಕೆ ಬಂದದ್ದು ಅಷ್ಟರಲ್ಲೇ ಇದೆ. ಮದ್ದೂರು ಪುರಸಭೆ ತಮ್ಮದೇ ಪಕ್ಷದ ಸದಸ್ಯರಿಂದ ತನ್ನ ಆದಾಯಕ್ಕೆ ಕನ್ನ ಹಾಕಿಸಿಕೊಳ್ಳುತ್ತಿದ್ದರೂ ಕಂಡೂಕಾಣದಂತೆ ಮುಗುಮ್ಮಾಗಿರುವ ಶಾಸಕ ತಮ್ಮಣ್ಣನ ವಿರುದ್ಧ ಜನ ಅಸಮಾಧಾನ ಕಾರುತ್ತಿದ್ದಾರೆ. ತಮ್ಮಣ್ಣ ಗೆದ್ದು 2 ವರ್ಷಗಳಾಗುತ್ತಾ ಬಂದರೂ ಅಭಿವೃದ್ಧಿ ಕೆಲಸಗಳು ಆಮೆ ವೇಗದಲ್ಲಿ ನಡೆಯುತ್ತಿವೆ. ತಾಲ್ಲೂಕಿನ ಬಹುತೇಕ ಕೆರೆಗಳಲ್ಲಿ ನೀರಿಲ್ಲ, ಚುನಾವಣೆಗೂ ಮುನ್ನ ನೀರಾವರಿ ಯೋಜನೆಗಳ ಬಗ್ಗೆ ಗಂಟೆಗಟ್ಟಲೆ ಭಾಷಣ ಬಿಗಿಯುತ್ತಿದ್ದ ತಮ್ಮಣ್ಣನ ಬಾಯಿ ಆ ಪದಗಳನ್ನೇ ಮರೆತಂತಿದೆ.

ಪಕ್ಕದ ಚನ್ನಪಟ್ಟಣ ತಾಲ್ಲೂಕಿನಲ್ಲಿ ಶಾಸಕ ಸಿ.ಪಿ.ಯೋಗೇಶ್ವರ್ ಶಿಂಷಾ ನದಿಯಿಂದ ಕೆರೆಗಳಿಗೆ ನೀರನ್ನು ತುಂಬಿಸಿದ್ದಾರೆ. ಇದು ಮದ್ದೂರಿನ ಜನರನ್ನು ಮತ್ತಷ್ಟು ಕೆರಳಿಸಿದೆ. ಜಿಲ್ಲೆಯಲ್ಲಿ ಕನ್ನಂಬಾಡಿ ಅಣ್ಣೆಕಟ್ಟೆ ಇದ್ದರೂ ಮದ್ದೂರು ಭಾಗದ ಕೊನೆಯ ಪ್ರದೇಶಗಳಿಗೆ ನೀರಾವರಿ ಸೌಕರ್ಯ ಇನ್ನೂ ಆಗಿಲ್ಲ, ಇನ್ನು ಕ್ಷೇತ್ರದ ಹಲವು ರಸ್ತೆಗಳು ತೀರಾ ಹದಗೆಟ್ಟಿವೆ. ಕೆಲವು ರಸ್ತೆಗಳಂತು ಓಡಾಡುವುದಕ್ಕೂ ದುಸ್ತರವೆನಿಸಿವೆ.

ಇವತ್ತು ತಮ್ಮಣ್ಣ ಮದ್ದೂರಿನ ಶಾಸಕನಾಗಿದ್ದರೂ ಇಲ್ಲಿನ ಪುರಸಭೆ ಮೇಲೆ ಜೆಡಿಎಸ್ ಪತಾಕೆ ಹಾರಾಡಿಸುವ ವೇಳೆ ಆತ ಇದ್ದದ್ದು ಬಿಜೆಪಿಯಲ್ಲಿ! ಕಳೆದ ಪುರಸಭೆ ಚುನಾವಣೆ ಎದುರಾದಾಗ ಕಲ್ಪನಾ ಸಿದ್ದರಾಜು ಇನ್ನೂ ಜೆಡಿಎಸ್ ಶಾಸಕಿಯಾಗಿ ಅಧಿಕಾರದಲ್ಲಿದ್ದರು. ಆಗ ವಿಧಾನಸಭಾ ಚುನಾವಣೆಗೆ 2 ತಿಂಗಳಷ್ಟೇ ಬಾಕಿಯಿತ್ತು, ಬಿಜೆಪಿಯಲ್ಲಿದ್ದ ಡಿ.ಸಿ.ತಮ್ಮಣ್ಣ ತಮ್ಮ ಬೀಗರಾದ ಹೆಚ್.ಡಿ.ದೇವೇಗೌಡ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಸರಿಮಾಡಿಕೊಂಡು ಜೆಡಿಎಸ್ ಪಕ್ಷಕ್ಕೆ ಬರುವ ಸಿದ್ಧತೆಯಲ್ಲಿದ್ದ. ಇಂತಹ ಸಂದರ್ಭದಲ್ಲೇ ಪುರಸಭಾ ಚುನಾವಣೆ ಎದುರಾದದ್ದು, ಶಾಸಕಿಯಾಗಿದ್ದ ಕಲ್ಪನಾ ಸಿದ್ದರಾಜು, ತಾಲ್ಲೂಕು ಅಧ್ಯಕ್ಷರಾದ ಅಜ್ಜಹಳ್ಳಿ ರಾಮಕೃಷ್ಣ ವಿಧಾನಪರಿಷತ್ ಸದಸ್ಯ ಬಿ. ರಾಮಕೃಷ್ಣ ಜೊತೆಗೂಡಿ ಸೋಮನಹಳ್ಳಿ ಬಳಿಯಿರುವ ಕಾಫಿಡೇಯಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ಕಲೆಹಾಕಿಕೊಂಡು ಗೆಲ್ಲುವ ಸಾಮರ್ಥ್ಯವಿರುವಂತವರಿಗೆ ಬಿ ಫಾರಂ ವಿತರಿಸುತ್ತಿದ್ದ ಸಂದರ್ಭದಲ್ಲಿ ನಸುಗನ್ನಿಯಂತಹ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಏಕಾಏಕಿ ಡಿ.ಸಿ.ತಮ್ಮಣ್ಣನನ್ನು ಅಲ್ಲಿಗೆ ಕರೆದೊಯ್ದು ಕುತಂತ್ರ ರಾಜಕಾರಣ ಮಾಡಿದ್ದ. ಇದರ ಫಲವಾಗಿ ಡಿ.ಸಿ.ತಮ್ಮಣ್ಣ ಬೆಂಬಲಿಗರಾದ ಭಾಗ್ಯ ಸತೀಶ್, ಲಕ್ಷ್ಮಮ್ಮ, ಮಂಜುಳಾ, ನಿಂಗಯ್ಯ, ಎಸ್.ಎಂ.ಜಗದೀಶ್ ಎಂಬುವವರಿಗೂ ಜೆಡಿಎಸ್ ಟಿಕೆಟ್ ಸಿಕ್ಕಿತ್ತು. ಸ್ವಂತ ಸಾಮರ್ಥ್ಯದ ಮೇಲೆ ಹತ್ತು ಓಟು ಗಿಟ್ಟಿಸುವ ಶಕ್ತಿಯೂ ಇಲ್ಲದ ರಮೇಶ್, ದೇವೇಗೌಡ ಹಾಗೂ ಕುಮಾರಣ್ಣನಿಗೆ ಬಹುಪರಾಕ್ ಹಾಕುತ್ತಲೇ ಸಾಕಷ್ಟು ಗೆಬರಿಕೊಂಡಿದ್ದಾನೆ. ಆತ ಮತ್ತು ತಮ್ಮಣ್ಣನ ಕುತಂತ್ರದ ನಡುವೆಯೂ ಶಾಸಕಿಯಾಗಿದ್ದ ಕಲ್ಪನಾ ಸಿದ್ದರಾಜು ನಾಮಬಲದಲ್ಲಿ ದ್ಯಾವಣ್ಣ ಉ.ಶಿವಣ್ಣ ರಾಧಮ್ಮ, ಡಿ.ಕೆ.ಉಮಾ, ಎಂ.ಪಿ.ಮಂಜುನಾಥ್, ಎಂ.ವಿಜಯಕುಮಾರಿ, ಪರ್ವಿಜ್‌ಪಾಷ ಸೇರಿದಂತೆ ಗೆದ್ದ ಹತ್ತಕ್ಕೂ ಹೆಚ್ಚು ಮಂದಿ ಪುರಸಭೆ ಚುನಾವಣೆಯಲ್ಲಿ ಗೆದ್ದು ಜೆಡಿಎಸ್‌ನ ವಿಜಯ ಪತಾಕೆ ಹಾರಿಸಿದ್ದರು.

ಕಲ್ಪನಾ ಸಿದ್ದರಾಜುಗೆ ಕೈಕೊಟ್ರು

ಮದ್ದೂರಿನ ಮತದಾರರು ಶಾಸಕಿ ಕಲ್ಪನಾ ಸಿದ್ದರಾಜುಗೆ ಮಣೆಹಾಕಿ ಆ ಚುನಾವಣೆಯಲ್ಲಿ ಜೆಡಿಎಸ್‌ಗೆ ಬಹುಮತ ನೀಡಿದ್ದರು. ಆದರೆ ನಂತರ ನಡೆದ ವಿದ್ಯಮಾನದಲ್ಲಿ ಅವಕಾಶವಾದಿ ಡಿ.ಸಿ.ತಮ್ಮಣ್ಣ ವಿಧಾನಸಭಾ ಚುನಾವಣೆ ವೇಳೆಗೆ ಮುಳುಗುತ್ತಿದ್ದ ಬಿಜೆಪಿ ಬಿಟ್ಟು ಬೀಗರಾದ ದೇವೇಗೌಡ ಹಾಗೂ ಕುಮಾರಸ್ವಾಮಿಯಿಂದ ಟಿಕೆಟ್ ಖಚಿತ ಪಡಿಸಿಕೊಂಡು ಜೆಡಿಎಸ್ ಪಕ್ಷಕ್ಕೆ ಜಿಗಿದಿದ್ದ. ದೊಡ್ಡಗೌಡರು ಹಾಗೂ ಕುಮಾರಣ್ಣ ನಂಬಿಕೆ ದ್ರೋಹ ಮಾಡುವುದಿಲ್ಲ ಎಂದು ಅಪಾರವಾಗಿ ನಂಬಿದ್ದ ಕಲ್ಪನಾ ಸಿದ್ದರಾಜುಗೆ ಜೆಡಿಎಸ್ ವರಿಷ್ಠರು ಭರ್ಜರಿ ದ್ರೋಹವನ್ನೇ ಬಗೆದಿದ್ದರು.

ನಂತರ ಕಲ್ಪನಾ ಸಿದ್ದರಾಜು ಪಕ್ಷೇತರವಾಗಿ ಕಣಕ್ಕೆ ಇಳಿಯಬೇಕಾಯಿತು. ಈ ನಡುವೆ ಪುರಸಭೆ ಚುನಾವಣೆಯಲ್ಲಿ ಕಲ್ಪನಾ ಸಿದ್ದರಾಜು ನಾಮಬಲದಲ್ಲೇ ಗೆದ್ದಿದ್ದ ಜೆಡಿಎಸ್ ಸದಸ್ಯರು ಡಿ.ಸಿ.ತಮ್ಮಣ್ಣನ ರೊಕ್ಕಕ್ಕೆ ಶರಣಾಗಿ ಕಲ್ಪನಾ ಸಿದ್ದರಾಜು ಕೈಬಿಟ್ಟರು. ಇದೆಲ್ಲದರ ಪರಿಣಾಮವಾಗಿ ಕಲ್ಪನಾ ಚುನಾವಣೆಯಲ್ಲಿ ಸೋತು ಮಾಜಿಯಾದರೆ, ತಮ್ಮಣ್ಣ ಗೆದ್ದು ಶಾಸಕನಾದ.

ಇಸ್ಪೀಟು ಅಧ್ಯಕ್ಷ

ಪುರಸಭೆಯ 30 ತಿಂಗಳ ಅಧ್ಯಕ್ಷರ ಅಧಿಕಾರಾವಧಿ ಬಿಸಿಎಂ (ಎ) ಪ್ರವರ್ಗಕ್ಕೆ ಮೀಸಲಾದ ಪರಿಣಾಮ ಮೊದಲ ಅವಧಿಯಲ್ಲಿ ಜೆಡಿಎಸ್‌ನ ಪರ್ವಿಜ್ ಪಾಷ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಈಗ 2ನೇ ಅವಧಿಗೆ ಶಾಸಕ ಡಿ.ಸಿ.ತಮ್ಮಣ್ಣನ ಆಶೀರ್ವಾದದಿಂದ ಅಧ್ಯಕ್ಷ ಗಾದಿಗೆ ವಕ್ಕರಿಸಿದವನೇ ಇಸ್ಪೀಟು ಗಿರಾಕಿ ದ್ಯಾವಯ್ಯ ಉ.ಶಿವಣ್ಣ. ಈತ ತನ್ನ ಮೂಲನಾಮ ದ್ಯಾವಯ್ಯ ಎಂಬುದಕ್ಕಿಂತ 'ಇಸ್ಪೀಟು ದ್ಯಾವಯ್ಯ' ಅಂತಲೇ ಗ್ರ್ಯಾಂಡ್ ಫೇಮಸ್ಸು! ತಿಗಳ ಜಾತಿಗೆ ಸೇರಿದ ದ್ಯಾವಯ್ಯ ಮದ್ದೂರಮ್ಮ ದೇವಸ್ಥಾನದ ಪೂಜಾರಿಯಾಗಿದ್ದವನು. ಪೂಜಾರಿಯಾಗಿ ಪಟ್ಟಣದ ಹೊರವಲಯದ ತೋಟಗಳಲ್ಲಿ ಭರ್ಜರಿ ಇಸ್ಪೀಟು ತಟ್ಟಿಸುವುದೇ ಪುರಸಭೆ ಹಾಲಿ ಅಧ್ಯಕ್ಷ ಪೂಜಾರಿ ದ್ಯಾವಯ್ಯನ ಉಪಕಸುಬು. ಪೊಲೀಸರಿಗೆ ಪ್ರಸಾದ ಫಿಕ್ಸ್ ಮಾಡಿಕೊಂಡು ರಾಜಾರೋಷವಾಗಿ ಇಸ್ಪೀಟು ಆಡಿಸುತ್ತಿದ್ದ. ಈತನ ಅಡ್ಡೆಗೆ ಮಂಡ್ಯ, ಮಳವಳ್ಳಿ, ರಾಮನಗರ, ಚನ್ನಪಟ್ಟಣ, ಹುಲಿಯೂರುದುರ್ಗ ಮೊದಲಾದ ಕಡೆಗಳಿರುವ ಇಸ್ಪೀಟು ಪಂಟರುಗಳೇ ಬರುತ್ತಿದ್ದರು. ಜೂಜುಕೋರರಿಗೆ ಗುಂಡು, ತುಂಡು ಸೇರಿದಂತೆ ಸಕಲವನ್ನು ಸಪ್ಲೈ ಮಾಡುತ್ತಿದ್ದ ಪೂಜಾರಿ ದ್ಯಾವಣ್ಣ ಉರುಫ್ ಇಸ್ಪೀಟ್ ದ್ಯಾವಣ್ಣ ಕಳೆದ ಪುರಸಭೆ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಗೆದ್ದ ನಂತರ ಇಸ್ಪೀಟು ಆಡಿಸುವುದನ್ನು ಬಿಟ್ಟಿದ್ದಾನೆ. ಇಂತವನ ಅದ್ಯಾವ ಗುಣ ಕಂಡು ತಮ್ಮಣ್ಣ ಮಾರುಹೋದನೋ ಗೊತ್ತಿಲ್ಲ ಪರ್ವಿಜ್ ಪಾಷನನ್ನು ಕೆಳಗಿಳಿಸಿ ದ್ಯಾವಣ್ಣನಿಗೆ ದರ್ಬಾರ್ ಒಪ್ಪಿಸಿದ್ದಾನೆ.

ಪುರಸಭೆ ಆದಾಯಕ್ಕೆ ಕನ್ನ

ಪುರಸಭೆಯಲ್ಲಿ ಡಿ.ಸಿ.ತಮ್ಮಣ್ಣನ ಕೃಪಾಪೋಷಿತ ನಾಟಕ ಮಂಡಳಿಯ ಸದಸ್ಯರೆಲ್ಲಾ ಅಡ್ಜಸ್ಟ್‌ಮೆಂಟ್ ಗಿರಾಕಿಗಳೇ. ಕೆಲವು ಸದಸ್ಯರಂತು ಪರ್ಸೆಂಟೇಜ್ ಫಿಕ್ಸ್ ಮಾಡಿಕೊಂಡು ಹಣ ಮಾಡಲು ನಿಂತುಬಿಟ್ಟಿದ್ದಾರೆ. ಕಾಮಗಾರಿ ಗುಣಮಟ್ಟ ಹೇಗಾದರೂ ಇರಲಿ ನಮ್ಮ ಪಾಲಿನ ಕಮೀಷನ್ ಬಂದ್ರೆ ಸಾಕು ಎಂಬಂತೆ ನಡೆದುಕೊಳ್ಳುತ್ತಾರೆ. ಸಾಮಾನ್ಯ ಸಭೆಯಲ್ಲಿ ಒಂದೂ ಮಾತನಾಡದೆ ಉಪ್ಪಿಟ್ಟು ತಿಂದು ಕಾಫಿ ಕುಡಿದುಹೋಗುವ ಸದಸ್ಯರ ಸಂಖ್ಯೆಯೇ ಸಾಕಷ್ಟಿದೆ. ಮಹಿಳಾ ಸದಸ್ಯರಲ್ಲಿ ಬಹುತೇಕರು ಮಾತನಾಡುವುದೇ ಇಲ್ಲ, ಮಹಿಳಾ ಸದಸ್ಯರ ಪತಿಯರೇ ಕೌನ್ಸಿಲರ್‌ಗಳಂತೆ ಹಕ್ಕು ಚಲಾಯಿಸುತ್ತಾರೆ. ವಿರೋಧ ಪಕ್ಷದ ಎಂ.ಐ.ಪ್ರವೀಣ್, ಮನ್ಸೂರ್, ಅಸ್ಲಾಂಖಾನ್ ಪುರಸಭೆ ನಿರ್ಣಯಗಳ ವಿರುದ್ಧ ಮಾತನಾಡಿದರೂ ಆಡಳಿತ ಪಕ್ಷದ ಸದಸ್ಯರ ಬಹುಮತ ಸಿಗುವುದರಿಂದ ಪುರಸಭೆಯ ಆದಾಯಕ್ಕೆ ಕನ್ನ ಬಿದ್ದಿದೆ. 4.3.2015ರಂದು ನಡೆದ ಸಾಮಾನ್ಯ ಸಭೆಯಲ್ಲಿ ಬೀದಿಬದಿ ವ್ಯಾಪಾರಿಗಳ ಸುಂಕ ವಸೂಲಾತಿ, ಖಾಸಗಿ ಬಸ್, ಮಿನಿ ಟ್ಯಾಕ್ಸಿಗಳ ಸುಂಕ ವಸೂಲಾತಿ ಹಾಗೂ ವಾರದ ಸಂತೆಯ ಸುಂಕ ವಸೂಲಾತಿಯಲ್ಲಿ ಪುರಸಭೆಗೆ ಬರಬೇಕಿದ್ದ 15ರಿಂದ 20ಲಕ್ಷ ಆದಾಯಕ್ಕೆ ಕನ್ನ ಹಾಕಲಾಗಿದೆ.

ಕಳೆದ ಬಾರಿ ಖಾಸಗಿ ಹಾಗೂ ಮಿನಿ ಟ್ಯಾಕ್ಸಿಗಳ ಸುಂಕ ವಸೂಲಾತಿ 9,58,100 ರೂ.ಗೆ ಬಿಡ್ ಆಗಿತ್ತು, ಈ ಬಾರಿ ಅಧ್ಯಕ್ಷರು ಅಧಿಕಾರಿಗಳ ಅಡ್ಜೆಸ್ಟ್‌ಮೆಂಟ್‌ನಿಂದ 5,25,000 ರೂ.ಗೆ ಬಿಡ್ ಆಗಿದೆ. ಇದರ ಹಿಂದೆ ಅಧ್ಯಕ್ಷ ದ್ಯಾವಣ್ಣ ಹಾಗೂ ಕೆಲ ಪುರಸಭಾ ಸದಸ್ಯರ ಕೈವಾಡವಿದೆ. ಪುರಸಭೆಯ ಪ್ರತಿಯೊಂದು ವಿಚಾರದಲ್ಲಿ ಮೂಗು ತೂರಿಸುವ ಶಾಸಕ ಡಿ.ಸಿ.ತಮ್ಮಣ್ಣರ ಬೆಂಬಲವೂ ಇರುವುದರಿಂದ ಇಂತಹ ಹಗಲುದರೋಡೆಗೆ ಇಳಿದಿದ್ದಾರೆ. ಮದ್ದೂರು ಪಟ್ಟಣದ ಮೂಲಕ ಪ್ರತಿದಿನ 200ಕ್ಕೂ ಹೆಚ್ಚು ಖಾಸಗಿ ಬಸ್‌ಗಳು ಬೆಂಗಳೂರು, ಮೈಸೂರು, ತುಮಕೂರು ಮೊದಲಾದ ಜಿಲ್ಲೆಗಳಿಗೆ ಹೋಗುತ್ತವೆ. ಒಂದು ಬಸ್‌ಗೆ 30 ರೂ. ಸುಂಕ ಹಾಗೂ ಪ್ಯಾಸೆಂಜರ್ ಆಟೋಗಳು, ಲಗೇಜ್ ಆಟೋಗಳಿಗೆ 10 ರೂ. ಸುಂಕ ಫಿಕ್ಸ್ ಮಾಡಲಾಗಿದೆ. ತಿಂಗಳಿಗೆ ಇದೊಂದೇ ಬಾಬ್ತಿನಿಂದ ಲಕ್ಷಾಂತರ ಆದಾಯ ಬರುತ್ತದೆ. ಹೀಗಿದ್ದರೂ ಕಳೆದ ಬಾರಿಗಿಂತ ಈ ಬಾರಿ ಕಡಿಮೆ ಬಿಡ್ ಆಗಿರುವುದು ಸಂಶಯ ಮೂಡಿಸಿದೆ.

ಹಾಗೆಯೇ ಬೀದಿಬದಿ ವ್ಯಾಪಾರಿಗಳ ಸುಂಕ ವಸೂಲಿ ಹರಾಜಿನಲ್ಲೂ ಪುರಸಭಾ ಆದಾಯಕ್ಕೆ ಕತ್ತರಿಹಾಕಲಾಗಿದೆ. ಕಳೆದ ವರ್ಷ 3,19,500 ರೂ.ಗಳಿಗೆ ಬಿಡ್ ಆಗಿತ್ತು, ಈ ಬಾರಿ 2,20,000 ರೂ.ಗಳಿಗೆ ಬಿಡ್ ಆಗಿದೆ. ಪ್ರತಿ ಬೀದಿ ವ್ಯಾಪಾರಿಗಳಿಂದ 15-20 ರೂ. ವಸೂಲಿ ಮಾಡಲಾಗುತ್ತದೆ. ಸೊಪ್ಪು, ಹಾಲು ಮಾರುವವರು 10 ರೂ. ಸುಂಕ ಕೊಡಬೇಕು. ಪುರಸಭೆ ಅಧ್ಯಕ್ಷರು, ಸದಸ್ಯರು ಹಾಗೂ ಅಧಿಕಾರಿಗಳ ಒಳ ಒಪ್ಪಂದದಿಂದ ಇಲ್ಲೂ 4-5 ಲಕ್ಷ ಆದಾಯ ಸೋರಿಹೋಗಿದೆ. ಇನ್ನು ಉಗ್ರನರಸಿಂಹಸ್ವಾಮಿ ದೇವಾಲಯದ ಆವರಣದಲ್ಲಿ ನಡೆಯುವ ಮಂಗಳವಾರ ಸಂತೆಯಲ್ಲಿ ವ್ಯಾಪಾರಿಗಳಿಂದ ವಸೂಲು ಮಾಡುವ ಸುಂಕದಲ್ಲೂ ಪುರಸಭೆ ಆದಾಯಕ್ಕೆ ಖೋತಾ ಆಗಿದೆ. ಕಳೆದ ವರ್ಷ 3,43,000 ರೂಪಾಯಿಗೆ ಆಗಿದ್ದ ಬಿಡ್ ಈ ಬಾರಿ 3,40,000 ರೂ.ಗೆ ಇಳಿದಿದೆ. ಸರಿಯಾಗಿ ಬಿಡ್ ಆಗಿದ್ದರೆ 5 ಲಕ್ಷ ರೂ.ಗಳಿಗೆ ಹೋಗುತ್ತಿತ್ತು, 3 ಸುಂಕ ವಸೂಲಾತಿಗಳಲ್ಲಿ 2 ಸುಂಕ ವಸೂಲಾತಿಗಳು ಅಧ್ಯಕ್ಷ ದ್ಯಾವಯ್ಯನ ಬೆಂಬಲಿಗರಿಗೆ ದೊರಕಿರುವುದರ ಹಿಂದಿನ ಕರಾಮತ್ತು ಏನೆಂಬುದು ಮದ್ದೂರಿನ ಸಾರ್ವಜನಿಕರಿಗೆಲ್ಲಾ ಗೊತ್ತಾಗಿದೆ. ಪ್ರತಿ ಸಾಮಾನ್ಯಸಭೆಗೂ ಹಾಜರಾಗುತ್ತಿದ್ದ ಶಾಸಕ ಡಿ.ಸಿ.ತಮ್ಮಣ್ಣ ಅಂದಿನ ಸಭೆಗೆ ಮಾತ್ರ ಗೈರುಹಾಜರಾದುದ್ದರ ಹಿಂದೆ ವ್ಯವಸ್ಥಿತ ಸಂಚು ಅಡಗಿರುವುದು ಸುಳ್ಳಲ್ಲ.


ಡಿ.ಸಿ.ತಮ್ಮಣ್ಣ ಕಣ್ಣಿಟ್ರೆ ಮುಗೀತು


ಡಿ.ಸಿ.ತಮ್ಮಣ್ಣ

ದೇವೇಗೌಡರೊಂದಿಗೆ ಬೀಗತನ ಬೆಳೆಸಿರುವ ಹಿರಿಯ ರಾಜಕಾರಣಿ ಡಿ.ಸಿ.ತಮ್ಮಣ್ಣನ ಮಾತಿಗೆ ಬೆಲೆ ಕೊಡದಿದ್ದರೆ ಅವರ ಮೇಲೆ ಕಣ್ಣಿಟ್ಟು ಅವರನ್ನು ನೆಲಕ್ಕೆ ಅದುಮುವವರೆಗೂ ಬಿಡುವುದೇ ಇಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಲ್ಪನಾ ಸಿದ್ದರಾಜುಗೆ ಜೆಡಿಎಸ್ ಟಿಕೆಟ್ ತಪ್ಪಿಸಿದ ಡಿ.ಸಿ.ತಮ್ಮಣ್ಣ ಹಣವನ್ನು ನೀರಿನಂತೆ ಹರಿಸಿ ಗೆದ್ದು ಬಂದ. ಕೆಐಎಡಿಬಿಯಲ್ಲಿ ಅಧಿಕಾರಿಯಾಗಿದ್ದ ತಮ್ಮಣ್ಣನಿಗೆ ಯಾವ ಯೋಜನೆಯಲ್ಲಿ ಎಷ್ಟೆಷ್ಟು ಹಣ ಬರುತ್ತದೆ ಎಂಬ ಪ್ರತಿ ಮಾಹಿತಿಯೂ ಗೊತ್ತು. ಅದನ್ನು ಇಟ್ಟುಕೊಂಡೇ ಪ್ರತಿ ಇಲಾಖೆಯ ಅಧಿಕಾರಿಗಳ ಮೇಲೆ ಹಿಡಿತ ಸಾಧಿಸಿರುವ ಡಿ.ಸಿ.ತಮ್ಮಣ್ಣನವರ ಮುಂದೆ ಅಧಿಕಾರಿಗಳು ಬಾಲಬಿಚ್ಚಲು ಸಾಧ್ಯವೇ ಇಲ್ಲ, ಹಾಗೊಂದು ವೇಳೆ ಬಾಲ ಬಿಚ್ಚಿದರೆ ಅದನ್ನು ಹೇಗೆ ಕಟ್ ಮಾಡಬೇಕೆಂಬುದು ಚೆನ್ನಾಗೇ ಗೊತ್ತು.

ಶಾಸಕಿ ಆಗಿದ್ದಾಗ ಕಲ್ಪನಾ ಸಿದ್ದರಾಜು ನಗರೋತ್ಥಾನ 2ನೇ ಹಂತದ ಕಾಮಗಾರಿಯಲ್ಲಿ 4 ಕೋಟಿ ಹಣವನ್ನು 6 ಕಾಮಗಾರಿಗಳಿಗೆಂದು ಮಂಜೂರು ಮಾಡಿಸಿಕೊಂಡು ಬಂದಿದ್ದರು. ಅದರಲ್ಲಿರುವ ಕಾಮಗಾರಿಗಳನ್ನು ಡಿ.ಸಿ.ತಮ್ಮಣ್ಣ ಬದಲಾಯಿಸಲು ಡಿಎಂಎ ಮೂಲಕ ಸಾಕಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಡಿಎಂಎ ಅಧಿಕಾರಿಗಳು 4 ಕೋಟಿ ಹಣವನ್ನು ಬಳಸಿಕೊಳ್ಳದಿದ್ದರೆ ವಾಪಾಸ್ ಪಡೆಯುವುದಾಗಿ ಹೇಳಿದ್ದರಿಂದ ಈಗಲೂ ಆ ಕೆಲಸಗಳು ಆಮೆಗತಿಯಲ್ಲಿ ನಡೆಯುತ್ತಿವೆ. ಕುಡಿಯುವ ನೀರಿನ ಪೈಪ್‌ಲೈನ್ ನಿರ್ವಹಣೆ ಟೆಂಡರ್, ಒಳಚರಂಡಿ ಸ್ಥಾವರದ ನಿರ್ವಹಣೆ ಟೆಂಡರ್, ಘನತ್ಯಾಜ್ಯ ನಿರ್ವಹಣಾ ಟೆಂಡರ್ ಸೇರಿದಂತೆ ಹಲವು ವಾರ್ಷಿಕ ಟೆಂಡರ್‌ಗಳನ್ನು ಮಾಡುವ ಸಂದರ್ಭದಲ್ಲಿ ತಪ್ಪದೆ ಪುರಸಭೆ ಸಾಮಾನ್ಯ ಸಭೆಗೆ ಹಾಜರಾಗುವ ಡಿ.ಸಿ.ತಮ್ಮಣ್ಣ ಸದಸ್ಯರು ವಿರೋಧ ವ್ಯಕ್ತಪಡಿಸದಂತೆ ನೋಡಿಕೊಳ್ಳುತ್ತಾರೆ.

ಡಿ.ಸಿ.ತಮ್ಮಣ್ಣನವರ ಹಗೆತನಕ್ಕೆ ಮತ್ತೊಂದು ಉದಾಹರಣೆ ಇದೆ. ಪುರಸಭೆ ಅಧ್ಯಕ್ಷನಾಗಿ ಉತ್ತಮ ಕೆಲಸ ಮಾಡಿದ್ದ ಎಂ.ಪಿ.ಅಮರ್‌ಬಾಬು ಎಂಬ ಯುವಕ ಎಂ.ಎಸ್.ಸಿದ್ದರಾಜು ಕುಟುಂಬಕ್ಕೆ ನಿಷ್ಠ ಎಂಬ ಕಾರಣದಿಂದಲೇ ಕಳೆದ ಪುರಸಭೆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದ ಆತನನ್ನು ಸೋಲಿಸುವಲ್ಲಿ ಯಶಸ್ವಿಯಾಗಿದ್ದ. ಅಮರ್‌ಬಾಬು ವಿರುದ್ಧ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ರಘು ಎಂಬಾತನಿಗೆ ಒಳಗೊಳಗೇ ಸಹಕಾರ ನೀಡಿ 30 ಮತಗಳ ಅಂತರದಿಂದ ಸೋಲುವಂತೆ ಮಾಡಲಾಗಿತ್ತು, ಹೀಗೆ ಡಿ.ಸಿ.ತಮ್ಮಣ್ಣನಿಗೆ ತನಗೆ ನಿಷ್ಠರಾದವರನ್ನು ಮೇಲೆತ್ತುವುದು ಗೊತ್ತು, ನಿಷ್ಠರಲ್ಲದವರನ್ನು ಬದಿಗೊತ್ತುವುದೂ ಗೊತ್ತು.



...ವಾರದ ಸಂತೆ ನಡೆಯುವ ಉಗ್ರನರಸಿಂಹ ...ಾಲಯಕ್ಕೆ ಪ್ರತಿ ದಿನ ನೂರಾರು ಭಕ್ತರು ಬರುತ್ತಾರೆ. ...ಗಳವಾರ ಸಂತೆ ನಡೆಯುವ ಕಾರಣ ಇಲ್ಲಿಗೆ ಭಕ್ತಾದಿಗಳು ...ು ಸಾಕಷ್ಟು ಕಷ್ಟಪಡಬೇಕು. ಮುಜರಾಯಿ ಇಲಾಖೆಗೆ ...ದ ಜಾಗದಲ್ಲಿ ಪುರಸಭೆ ಅನಧಿಕೃತವಾಗಿ ಸಂತೆ ...ುತ್ತಿದೆ. ಹಿಂದಿನ ಜಿಲ್ಲಾಧಿಕಾರಿ ಡಿಸಿ ಕೃಷ್ಣಯ್ಯ ಇಲ್ಲಿ ... ನಡೆಸದಂತೆ ಹೇಳಿದ್ದರೂ ಸಂತೆ ನಡೆಸಲಾಗುತ್ತಿದೆ. ...ದಿಗಳಿಗೆ ತೊಂದರೆಕೊಟ್ಟು ಸಂತೆ ನಡೆಸುವ ಪುರಸಭೆ ... ಜಾಗದಲ್ಲೇ ಇವರಿಗೆ ಸಂತೆ ನಡೆಸಲು ಅನುವು ...ಡಿಕೊಡಬಹುದಿತ್ತು, ಆದರೆ ಅದನ್ನು ಮಾಡುತ್ತಿಲ್ಲ. ...ದೇ ವ್ಯಾಪಾರಸ್ಥರಿಂದ ಸುಂಕ ಪಡೆಯುವ ಪುರಸಭೆ ...ರಿಗೆ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ...ಡಿಕೊಡಬೇಕು. ಹಾಗೆಯೇ ಯಾರಿಂದ ಎಷ್ಟು ಸುಂಕ ...ಲಿ ಮಾಡುತ್ತೇವೆ ಎಂಬ ಬಗ್ಗೆ ನಿಗದಿತ ಸ್ಥಳದಲ್ಲಿ ...ೋರ್ಡ್ ಹಾಕಬೇಕು. ಆದರೆ ಅದನ್ನೆಲ್ಲಾ ಸುಂಕ ...ಲಿಕೋರರು ಪಾಲಿಸುತ್ತಲೇ ಇಲ್ಲ.

...ಹರಾಜು ಪ್ರಕ್ರಿಯೆಯ ಬಗ್ಗೆ ಕರಪತ್ರ ಮುದ್ರಿಸಿ ಹಂಚದೆ, ...ಪತ್ರಿಕೆಗಳಲ್ಲಿ ಜಾಹೀರಾತು ನೀಡದೆ ಒಳಗೊಳಗೆ ಎಲ್ಲರೂ ...ೋಡಿಸಿದ ಪರಿಣಾಮ ಪುರಸಭೆ ಆದಾಯ ...ಕುಹಗಲೇ ವಸೂಲಿಕೋರರ ಪಾಲಾಗಿದೆ. ಅಲ್ಲದ ಬೆಳಗ್ಗೆ ...ಕ ವಸೂಲಾತಿ ಬಿಡ್ ಮಾಡಿ ದಿಢೀರ್ ಅಂತ ...ಧ್ಯಾಹ್ನವೇ ತುರ್ತುಸಭೆ ಕರೆದು ಅನುಮೋದನೆ ...ಯಲಾಗಿದೆ. ಇಂತಹ ಅಕ್ರಮ ಹರಾಜಿನ ಬಗ್ಗೆ ವಿಪಕ್ಷ ...ಸ್ಯರಾದ ಪ್ರವೀಣ್, ಮನ್ಸೂರ್, ಅಸ್ಲಾಂಖಾನ್ ವಿರೋಧ ...ಪಡಿಸಿದರೂ ಬಹುಮತವಿರುವ ತಮ್ಮಣ್ಣನ ಪಟಾಲಂ ...ಂದೆ ಏನೂ ನಡೆಯುತ್ತಿಲ್ಲ. ಇನ್ನು ಆಡಳಿತ ಪಕ್ಷದಲ್ಲೇ ... ಸದಸ್ಯರು ಇಂತಹ ಅಕ್ರಮಗಳ ವಿರುದ್ಧ ಅಸಮಾಧಾನ ...ಂದಿದ್ದಾರಾದರು ಶಾಸಕ ಡಿ.ಸಿ.ತಮ್ಮಣ್ಣನಿಗೆ ಹೆದರಿ ...ಯಿ ಮುಚ್ಚಿಕೊಂಡು ಸುಮ್ಮನಾಗಿದ್ದಾರೆ.

...ಮುಖ್ಯಾಧಿಕಾರಿ ಕೈಕಟ್ಟಿ ಹಾಕಲಾಗಿದೆ

...ಪುರಸಭೆ ಮುಖ್ಯಾಧಿಕಾರಿ ಗಂಗಾಧರ್ ಇದ್ದುದ್ದರಲ್ಲಿ ...ಗಿಯೇ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ...ದ್ದೂರು ತಾಲ್ಲೂಕಿನ ಸಿಎ ಕೆರೆ ಹೋಬಳಿಯವರಾದ ...ಗಾಧರ್ ಈ ಹಿಂದೆ ಪುರಸಭೆಯಲ್ಲಿ ಕೆಲಸ ...ಡಿರುವುದರಿಂದ ಎಲ್ಲಾ ಪಕ್ಷಗಳ ಮುಖಂಡರನ್ನು ...ಲೆನ್ಸ್ ಮಾಡಿಕೊಂಡೇ ಸರ್ಕಾರದ ಯೋಜನೆಗಳನ್ನು ...ರ್ಪಕವಾಗಿ ಅನುಷ್ಠಾನಗೊಳಿಸಿದ್ದಾರೆ. ಆಸ್ತಿ ತೆರಿಗೆ ...ಗ್ರಹ, ವಿವಿಧ ಕಂದಾಯ ವಸೂಲಾತಿ, ಜನನ-ಮರಣ ...'ಲೈಸ್ ನೋಂದಣಿ, ಶೇ 22.75 ಯೋಜನೆಯ ...ಷ್ಠಾನ ಸೇರಿದಂತೆ ಹಲವು ಯೋಜನೆಗಳ ಸಮರ್ಪಕ ...ಷ್ಠಾನದಲ್ಲಿ ರಾಜ್ಯದಲ್ಲೇ ಮದ್ದೂರು ಪುರಸಭೆ ನಂ.1 ...ು ಹೆಸರು ಗಳಿಸಿದೆ. ಇವೆಲ್ಲದ್ದರ ಹಿಂದೆ ಮುಖ್ಯಾಧಿಕಾರಿ ...ಗಾಧರ್ ಶ್ರಮ ಸಾಕಷ್ಟು ಎದ್ದು ಕಾಣುತ್ತದೆ. ಆದರೆ ...ರು ಶಾಸಕ ಡಿ.ಸಿ.ತಮ್ಮಣ್ಣ ಕಾಂಗ್ರೆಸ್‌ನ ಕಲ್ಪನಾ ಸಿದ್ದರಾಜು, ...ುಚರಣ್, ಮಧುಮಾದೇಗೌಡ ಇವರೆಲ್ಲರನ್ನು ...ಾಳಿಸಿಕೊಂಡೇ ಆಡಳಿತ ನಡೆಸಬೇಕು. ಹಾಗಾಗಿ ಸುಂಕ ...ೂಲಾತಿ ಪ್ರಕರಣದ ಹರಾಜಿನಲ್ಲಿ ಮುಖ್ಯಾಧಿಕಾರಿ ...ಗಾಧರ್ ಕೈಕಟ್ಟಿ ಕೂರಿಸಲಾಗಿದೆ.

...ಸುಂಕ ವಸೂಲಾತಿ ಹರಾಜಿನಲ್ಲಿ 15-20 ಲಕ್ಷ ರೂ. ...ರಸಭೆ ಕೈತಪ್ಪಿರುವುದು ಬಹಿರಂಗವಾಗಿಯೇ ಕಾಣುತ್ತಿದೆ. ...ಂದೇ ಹೆಸರು ಮಾಡಿರುವ ಜಿಲ್ಲಾಧಿಕಾರಿ ಅಜಯ್ ...ಭೂಷಣ್ ಈ ಅವ್ಯವಹಾರದತ್ತ ಗಮನ ಹರಿಸಿ ... ಬಿಡ್ ಮಾಡುವಂತೆ ಕ್ರಮ ಕೈಗೊಳ್ಳಬೇಕು. ಈ ...ದೆ ಕೂಡ ಹಲವು ಬಾರಿ ಕಡಿಮೆ ಬಿಡ್‌ಗೆ ಹರಾಜು ...ಗ ಅದನ್ನು ಕ್ಯಾನ್ಸಲ್ ಮಾಡಿ ಮತ್ತೆ ಹೊಸದಾಗಿ ...ರಾಜು ಹಾಕಿರುವ ನಿದರ್ಶನ ಇರುವುದರಿಂದ ...ಧಿಕಾರಿಗಳು ಈ ಬಗ್ಗೆ ಗಮನ ಹರಿಸಿ ವಸೂಲಿಕೋರರ ...ಾಗುತ್ತಿರುವ ಪುರಸಭೆ ಆದಾಯವನ್ನು ಮರಳಿ ...ಭೆಯ ತಿಜೋರಿಗೆ ಸೇರಿಸಬೇಕೆಂಬುದು ಮದ್ದೂರು ... ಮಹಾಶಾಯರಿಕೊಳ್ಳುತ್ತಿದ್ದಾರೆ.

■ ವರದಿಗಾರ

ಜನಪದ ವಿವಿ ಗೋಲ್‌ಮಾಲ್

ನಕಲಿ ವೈದ್ಯರಿಗೆ ಅಸಲಿ ಸರ್ಟಿಫಿಕೇಟ್

ಪ್ರಪಂಚದ ಪ್ರಪ್ರಥಮ ಜಾನಪದ ವಿವಿ ಎಂದು ಕರೆಸಿಕೊಳ್ಳುವ ಶಿಗ್ಗಾಂವಿ ತಾಲೂಕಿನ ಗೊಟಗೋಡಿ ವಿವಿ ತನ್ನ ಘನತೆಗೆ ತಕ್ಕಂತೆ ನಡೆದುಕೊಳ್ಳುತ್ತಿಲ್ಲ, ಮೊದಲ ಹೆಜ್ಜೆಯಲ್ಲೇ ನೇಮಕಾತಿ ವಿಚಾರದಲ್ಲಿ ಭ್ರಷ್ಟತೆಯನ್ನು ಮೈಮೇಲೆ ಎಳೆದುಕೊಂಡು ಕೊಸರಾಡುತ್ತಿರುವ ವಿವಿ ಇದೀಗ ಸರ್ಟಿಫಿಕೇಟ್ ಕೋರ್ಸ್ ಕರ್ಮಕಾಂಡದಲ್ಲಿ ಹೆಸರು ಕೆಡಿಸಿಕೊಳ್ಳುವ ಹಾದಿಯಲ್ಲಿದೆ. ಜನಪದದ ಗ್ರಾಮೀಣ ಸೊಗಡಿನ ಒಡನಾಟವನ್ನೇ ಕತ್ತರಿಸಿಕೊಂಡು ಪುಸ್ತಕ ಓದಿ ಜಾನಪದ ಕೃತಿ ರಚಿಸಿದ 'ಮೇಧಾವಿ'ಗಳೇ ವಿವಿಯಲ್ಲಿ ವಿಜೃಂಭಿಸುತ್ತಿದ್ದಾರೆ. ಇಂತವರಲ್ಲಿ ವಿವಿಯ ಮುಖ್ಯಸ್ಥ ಪ್ರೊ. ಅಂಬಳಿಕೆ ಹಿರಿಯಣ್ಣ ಹೊರತೇನೂ ಅಲ್ಲ.

ವಿವಿಯ ಪ್ರಪ್ರಥಮ ಕುಲಪತಿಯಾಗುವ ಅವಕಾಶ ಸಿಕ್ಕಿರುವಾಗ ಅದಕ್ಕೊಂದು ಸಾರ್ವತ್ರಿಕ ಕಾಯಕಲ್ಪ ತಂದುಕೊಟ್ಟು ಮಾನನೀಯ ಎನಿಸಬಹುದಿತ್ತು, ಆದರೆ ದೂರದೃಷ್ಟಿಯೇ ಇಲ್ಲದಂತೆ ವರ್ತಿಸುತ್ತಿರುವ ಅಂಬಾಲಿಕೆ ಹಿರಿಯಣ್ಣ ತನ್ನ ಸಂಬಂಧಿ ಎಂಬ ಕಾರಣಕ್ಕೆ ಕನಿಷ್ಠ ಜಾನಪದದ ಅರಿವೂ ಇಲ್ಲದ ಹಂಪಿ ಪ್ರೊ. ಸ.ಚಿ.ರಮೇಶ್ ಎಂಬ ಮಾಹಾನುಭಾವನಿಗೆ ವಿಸ್ತರಣೆ ಹಾಗೂ ಸಲಹಾ ಕೇಂದ್ರ (ಪ್ರಸಾರಾಂಗ)ದ ನಿರ್ದೇಶಕ, ಮೌಲ್ಯಮಾಪನ ಕುಲಸಚಿವ ಎಂಬ ಪದವಿ ದಯಪಾಲಿಸಿದ್ದಾರೆ. ಇನ್ನು ಜಾನಪದ ವಿ.ವಿ.ಯಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಸಿಗುತ್ತದೆ ಎಂಬುದನ್ನು ಪತ್ತೆಹಚ್ಚಲು ಹಂಪಿ ವಿ.ವಿ.ಯ ಸಹಾಯಕ ರೆಜಿಸ್ಟ್ರಾರ್ ಪ್ರೇಮಕುಮಾರ್ ಎಂಬ ಪತ್ತೆದಾರಿಯನ್ನು ಕರೆದು ತಂದಿರುವ ಹಿರಿಯಣ್ಣ 'ಹಿರಿಯ ಸಂಶೋಧನಾಧಿಕಾರಿ' ಹೆಸರಿನ ಹುದ್ದೆ ದಯಪಾಲಿಸಿದ್ದಾರೆ. ಈತ ಕರ್ನಾಟಕದಲ್ಲಿ ಅಂತಹ ಯಾವುದೇ ಸಂಶೋಧನೆ ಮಾಡಿದ ಚರ್ಚೆಯಿಲ್ಲ. ಈತನ ಪಿಎಚ್‌ಡಿಯೂ ಹಿಂದಿಯಲ್ಲಿದ್ದು ಮೂರ್ನಾಲ್ಕು ಬಾರಿ ವಾಪಾಸ್ ಹೋಗಿ ಬಂದಿದೆ. ಅಲ್ಪ ಸ್ವಲ್ಪ ಇಂಗ್ಲಿಷ್ ಬರುತ್ತದೆನ್ನುವುದಷ್ಟೇ ಇವನ ಅರ್ಹತೆ.

ಸರ್ಟಿಫಿಕೇಟ್ ಎಂಬ ವ್ಯಾಮೋಹ

ಹೀಗೆ ವಿವಿಗೆ ವಕ್ಕರಿಸಿದ ಸ.ಚಿ.ರಮೇಶ್ ಹಾಗೂ ಡಾ.ಪ್ರೇಮಕುಮಾರ್ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಹರಾಜಿಗಿಟ್ಟಿದ್ದಾರೆ. ಮುಖ್ಯವಾಗಿ ಜನಪದ ಗೀತಗಾಯನ, ಜನಪದ ಕಸೂತಿ, ಜನಪದ ದೊಡ್ಡಾಟ, ಜನಪದ ವೈದ್ಯ ಜನಪದ ನೃತ್ಯ ಜನಪದ ಹೀಗೆ ಹಲವಾರು ಕೋರ್ಸ್‌ಗಳನ್ನು ಪರಿಚಯಿಸಿದ್ದಾರೆ. ಆದರೆ, ಇವಿರಷ್ಟರಲ್ಲಿ ಹಾಟ್ ಅಟೆಂಡೆಂಗ್ ಕೋರ್ಸ್ ಎಂದರೆ ಜನಪದ ವೈದ್ಯಕೋರ್ಸ್.

ಅಸಲಿಗೆ, ಈಗ ಚಾಲ್ತಿಯಲ್ಲಿರುವ ಅಲೋಪತಿ, ಆಯುರ್ವೇದ, ಯುನಾನಿ, ಇವುಗಳಿಗಿಂತ ಭಿನ್ನ ಸುಶ್ರುತ, ಚರಕಾದಿ ಋಷಿಮುನಿಗಳು ಕಂಡುಹಿಡಿಯದ ಜನಪದ ವೈದ್ಯಪದ್ಧತಿಯನ್ನು ರೂಢಿಸಿಕೊಂಡವರಿಗೆ ಅಥವಾ ಅದರತ್ತ ಆಕರ್ಷಿತರಾದವರಿಗೆ ನೀಡುವ ಕೋರ್ಸ್ ಇದು.

ಆದರೆ, ಜನಪದ ವೈದ್ಯ ಕೋರ್ಸ್ ಕಲಿಯುತ್ತಿರುವವರಲ್ಲಿ ಬಹುಪಾಲು ಮಂದಿ ದೊಡ್ಡದೊಡ್ಡ ದವಾಖಾನೆಗಳಲ್ಲಿ ಕಾಂಪೌಂಡರಾಗಿ, ನರ್ಸಾಗಿ ಇಲ್ಲವೆ ಅಟೆಂಡರುಗಳಾಗಿ ಅಲೋಪತಿ ಡಾಕ್ಟರ್ ಕೈಯ್ಯಲ್ಲಿ ಪಳಗಿದಂತವರು. ಇಂದು ಯಾವುದೇ ವೈದ್ಯಪದವಿ ಪಡೆಯದೆ ಹಳ್ಳಿಗಳಲ್ಲಿ ಅಲೋಪತಿ ಔಷಧಿ ಕೊಟ್ಟುಕೊಂಡು ಚೆನ್ನಾಗಿ ಕಮಾಯಿ ಕಾಣುವ ಸಮೂಹವೇ ಇದೆ. ಈಗ ನಮ್ಮ ಹಳ್ಳಿಗಳಲ್ಲಿ ಕನಿಷ್ಠ ಇಂತಹ 2-3 ಜನ ನಕಲಿ ಡಾಕ್ಟರರಿದ್ದಾರೆ. ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ತಿಂಗಳಿಗೆ ಇಂತಿಷ್ಟು ಮಾಮೂಲಿ ಕೊಟ್ಟು ಕೆಲಸ ನಡೆಸುವ ಈ ನಕಲಿ ಡಾಕ್ಟರ್‌ಗಳು



ಏನಿಲ್ಲವೆಂದರೂ ದಿನಕ್ಕೆ ಒಂದೂವರೆಯಿಂದ ಎರಡು ಸಾವಿರ ಜೇಬಿಗಿಳಿಸಿಕೊಳ್ಳುತ್ತಿದ್ದಾರೆ. ಇಂತವರೇ ಈಗ ಜನಪದ ವಿವಿಯ ವೈದ್ಯ ಕೋರ್ಸ್‌ಗೆ ಅರ್ಜಿ ಗುಜರಾಯಿಸಿಕೊಂಡು ಕೊನೆಗೆ ಸರ್ಟಿಫಿಕೇಟನ್ನೂ ಪಡೆದು ನಂತರ ರಾಜಾರೋಷವಾಗಿ ದಂಧೆಗಿಳಿಯುವ ಹುನ್ನಾರದಲ್ಲಿದ್ದಾರೆ.

ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲಿ ಆರಂಭಿಸಲಾಗಿರುವ ಉಳಿದ ಎಲ್ಲಾ 6 ಸರ್ಟಿಫಿಕೇಟ್ ವಿಭಾಗಗಳಿಂದ ವಿದ್ಯಾರ್ಥಿಗಳ ಸಂಖ್ಯೆ 80 ಇದ್ದರೆ. ಜನಪದ ವೈದ್ಯ ಕೋರ್ಸ್‌ಗೆ ಬರೋಬ್ಬರಿ 125 ಜನ ನೋಂದಾಯಿಸಿ ಕೊಂಡಿದ್ದಾರೆಂದರೆ ಅದೇನು ಪವಾಡ ಅನ್ನುತ್ತೀರಾ! ಅಷ್ಟು ವಿದ್ಯಾರ್ಥಿಗಳಿಗೆ ಕನಿಷ್ಠ 2 ಕ್ಲಾಸ್‌ರೂಮ್‌ನಲ್ಲಿ ನಡೆಸಬೇಕಾದ ಕೋರ್ಸನ್ನು ವಾರಕ್ಕೆರಡು ದಿನ ಒಂದೇ ರೂಮ್‌ನಲ್ಲಿ ಕಾಟಾಚಾರಕ್ಕೆ ನಡೆಸುತ್ತಿದ್ದಾರೆ.

ಹಣ ಮಾಡುವ ಸಾರ್ವಜನಿಕ ಸಂಸ್ಥೆಗಳು

ಈ ಕೋರ್ಸ್ ಕೆಲ ಕಾಲೇಜು ಶಿಕ್ಷಣ ಸಂಸ್ಥೆಗಳ ಬಂಡವಾಳಶಾಹಿಗಳಿಗೆ ಭರ್ಜರಿ ಭೋಜನವಾಗಿದೆ. ಜನಪದ ವಿವಿಯಿಂದ ಮಾನ್ಯತೆ ಪಡೆದ ವೈದ್ಯ ಕೋರ್ಸ್ ಅನ್ನು ನಮ್ಮ ದೂರಶಿಕ್ಷಣ ಸಂಸ್ಥೆಯ ಮೂಲಕ ಕಟ್ಟಿಕೊಳ್ಳಿ ಎಂದು ಫೇಪರ್ ಜಾಹಿರಾತು ನೀಡುವ ಈ ಸಂಸ್ಥೆಗಳು ರೆಗ್ಯುಲರ್ ಪ್ರವೇಶಕ್ಕೆ 20 ಸಾವಿರ, ನೇರ ಪರೀಕ್ಷೆ ತೆಗೆದುಕೊಳ್ಳುವುದಾದರೆ 40 ಸಾವಿರ ಎಂಬ ರೇಟ್ ಫಿಕ್ಸ್ ಮಾಡಿಕೊಂಡಿವೆ. ಧಾರವಾಡ, ಗದಗ, ಹರಪನಹಳ್ಳಿ ಮುಂತಾದ ಕಡೆ ಇಂತಹ ಹತ್ತಾರು ಸೆಂಟರ್‌ಗಳು ತಲೆ ಎತ್ತಿವೆ. ವಿವಿಯಿಂದ ಈ ಸೆಂಟರ್‌ಗೆ ಸಲೀಸಾಗಿ ಪರ್ಮಿಷನ್ ಸಿಗುತ್ತದಾ? ಒಂದಷ್ಟು 'ತಾಳಮೇಳ' ಜೇಬು ತುಂಬಿಕೊಳ್ಳದೇ ಇದ್ದೀತಾ...


ಹೀಗೆ ಜನಪದ ವಿವಿಯಿಂದ ದುಡ್ಡುಕೊಟ್ಟು ವೈದ್ಯ ಸರ್ಟಿಫಿಕೇಟ್ ಗಿಟ್ಟಿಸುವ ನಕಲಿ ವೈದ್ಯರಿಂದ ಸಮಾಜಕ್ಕೆ ಅದರಲ್ಲೂ ಮುಗ್ಧ ಗ್ರಾಮೀಣ ಜೀವಗಳಿಗೆ ಅದೆಂತಹ ಅಪಾಯ ಕಾದಿದೆ ಎನ್ನುವುದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ. ಜನಪದ ವೈದ್ಯಪದ್ಧತಿ ಬಗ್ಗೆ ಮಿನಿಮಮ್ ಜ್ಞಾನವೂ ಇಲ್ಲದ, ಅಲೋಪಥಿಕ್ ವೈದ್ಯಪದ್ಧತಿಯನ್ನು ಸಮಗ್ರವಾಗಿ ಅರ್ಥಮಾಡಿಕೊಂಡಿರದ ಇಂತಹ ಅರೆಬೆಂದ 'ಡಾಕ್ಟರ್'ಗಳನ್ನು ಸಮಾಜದ ಮೇಲೆ ಹೇರುವ ಕೆಲಸವನ್ನು ಜನಪದ ವಿವಿ ಮಾಡುತ್ತಿದೆ.

ಹೋಗಲಿ ಹೀಗೆ ಸೇರಿಕೊಂಡವರಿಗೆ ಪಾಠಪ್ರವಚನವಾದರೂ ನೆಟ್ಟಗೆ ದಕ್ಕುತ್ತಿದೆಯಾ ಎಂದರೆ ಅದೂ ಇಲ್ಲ. ಪಾರಂಪರಿಕ ಜ್ಞಾನ ಪಡೆದವರೇ ಇಲ್ಲಿ ಹೇಳಿಕೊಡಬೇಕು. ಆದರೆ ಪ್ರತಿ ಅವಧಿಗೆ 500 ರೂ. ಎಂದು ಫಿಕ್ಸ್ ಮಾಡಿರೋದರಿಂದ ನುರಿತ ಅನುಭವಸ್ಥ ಜನ ಇಲ್ಲಿ ಪಾಠ ಮಾಡಲು ಬರುತ್ತಿಲ್ಲವಂತೆ. ಹಾವೇರಿಯ ಆಯುರ್ವೇದ ಕಾಲೇಜಿನ ಡಾ. ಅಶ್ವಿನಿ ಪಾಟೀಲ್ ಎಂಬುವರು ಹಾಗೂ ಯಾವುದೇ ಅನುಭವವಿಲ್ಲದವರು ಇಲ್ಲಿ ಪಾಠ ಮಾಡುತ್ತಿದ್ದಾರೆ. ಬೇರೆ ಕ್ಷೇತ್ರದ ವೈದ್ಯ ಪದ್ಧತಿಯವರು ಜನಪದ ವೈದ್ಯವನ್ನು ಅದೇಗೆ ಬೋಧಿಸಿಯಾರು? ಇನ್ನು ಧಾರವಾಡ, ಹರಪನಹಳ್ಳಿ, ಗದಗ, ಬೀದರ್, ಮಲೆಮಹದೇಶ್ವರ ಬೆಟ್ಟದ ಶಾಖೆಗಳಲ್ಲೂ ಇದೇ ಹಣೆಬರಹ. ಹಾಗಾಗಿ ಅಲ್ಲಿಯೂ ಜನಪದ ವೈದ್ಯ ಕೋರ್ಸ್ ಬಹುಬೇಡಿಕೆಯ ಸರಕಾಗಿದೆಯಂತೆ.

ಮೆಡಿಕಲ್ ಬೋರ್ಡ್, ಮೆಡಿಕಲ್ ಕೌನ್ಸಿಲ್‌ಗಳ ಪರ್ಮಿಶನ್ ಕೇಳದೆ ಅಥವಾ ಅಲ್ಲಿಯ ತಜ್ಞ ವೈದ್ಯರನ್ನೂ ಸಂಪರ್ಕಿಸದೆ ಇಂತಹದ್ದೊಂದು ಜನಪದ ವೈದ್ಯ ಕೋರ್ಸ್‌ಗೆ ಸಿಲಬಸ್ ತಯಾರಿಸಿದ್ದು ಕರಾವಳಿಯ ಶಾಂತಿನಾಯಕ. ಒಂದು ಸ್ಪಷ್ಟ ನೀಲನಕ್ಷೆ, ಔಟ್‌ಕಮ್ ಏನೂ ತಿಳಿಯದೆ ಸಮಾಜವನ್ನು ನೇರವಾಗಿ ಬಾಧಿಸಬಹುದಾದ ಇಂತಹ ಕೋರ್ಸ್ ಅನ್ನು ಕೇವಲ ಹಣಗಳಿಕೆಯ ಉದ್ದೇಶದಿಂದಲೇ ಅನುಷ್ಠಾನಕ್ಕೆ ತಂದಂತಿದೆ. ಮುಂದಾಗುವ ಅನಾಹುತವನ್ನು ತಪ್ಪಿಸಬೇಕೆಂದರೆ ವಿ.ವಿ. ಕೂಡಲೇ ಈ ವೈದ್ಯ ಕೋರ್ಸ್ ಅನ್ನು ರದ್ದುಗೊಳಿಸಿ ಸ್ಪಷ್ಟ ರೂಪರೇಷೆ, ಅರ್ಹತೆ, ಅನುಭವ, ಆಸಕ್ತಿಗಳ ಆಧಾರದಲ್ಲಿ ಪುನರಾರಂಭಿಸಬೇಕಿದೆ. ಈ ವಿಚಾರವಾಗಿ ಬಲು ಮುಗ್ಧನಂತೆ ಹಾರಿಕೆ ಉತ್ತರ ನೀಡುತ್ತಿರುವ ಅಂಬಳಿಕೆ ಹಿರಿಯಣ್ಣ 'ನಮಗೇನೂ ತಿಳಿಯದು ಅವರೆ ಎಲ್ಲಾ ಮಾಡುತ್ತಾರೆ' ಎಂದು ನುಣುಚಿಕೊಳ್ಳುವ ಯತ್ನ ಮಾಡುತ್ತಿದ್ದಾರೆ. ಆದರೆ ಒಂದು ಜವಾಬ್ದಾರಿಯುತ ಹುದ್ದೆಯಲ್ಲಿರುವ ಹಿರಿಯಣ್ಣನ ಘನತೆಗೆ ತಕ್ಕುನಾಗಿ ವರ್ತಿಸಬೇಕಿದೆ. ಈಗಲಾದರೂ ಅವರು ಎಚ್ಚೆತ್ತುಕೊಳ್ಳುತ್ತಾರಾ......

■ ಹುವಿ

ಕೊಡಗು: ಅಕಾಡೆಮಿಗಳಲ್ಲಿ ಅವಾಂತರ



ಬಿ.ಎಸ್. ತಮ್ಮಯ್ಯ

ಉತ್ತಮ ಕೆಲಸಗಳ ನಡುವೆ ಒತ್ತಡಕ್ಕೆ ಮಣಿದು ಸಿದ್ದರಾಮಯ್ಯ ಸರಕಾರ ಕೆಲವೊಂದು ಎಡವಟ್ಟುಗಳನ್ನು ಮಾಡಿಕೊಂಡಿದೆ. ಅವುಗಳ ಪೈಕಿ ಕೊಡಗು ಜಿಲ್ಲೆಗೆ ಮಾತ್ರ ಸೀಮಿತವಾಗಿರುವ ಎರಡು ಅಕಾಡೆಮಿಗಳು ಆಗಿವೆ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಅರೆಭಾಷೆ ಸಾಹಿತ್ಯ ಅಕಾಡೆಮಿಗಳು ಕೊಡಗು ಜಿಲ್ಲೆಯಿಂದ ಕಾರ್ಯ ನಿರ್ವಹಿಸುತ್ತವೆ. ಅರೆಭಾಷೆ ಅಕಾಡೆಮಿಯ ವ್ಯಾಪ್ತಿ ದಕ್ಷಿಣ ಕನ್ನಡ ಜಿಲ್ಲೆಗೂ ಸೇರಿದ್ದರೂ ಕಾರ್ಯಕ್ಷೇತ್ರ ಮಾತ್ರ ಕೊಡಗು ಜಿಲ್ಲೆಯೇ ಆಗಿದೆ. ಕೊಡವ ಭಾಷಾ ಅಕಾಡೆಮಿಯನ್ನು ಮುಖ್ಯಮಂತ್ರಿಯಾಗಿದ್ದ ವೀರಪ್ಪ ಮೊಯ್ಲಿ ಸ್ಥಾಪಿಸಿದ್ದರೆ, ಸ್ವತಃ ಅರೆಭಾಷೆ ಮಾತನಾಡುವ ಡಿ.ವಿ. ಸದಾನಂದಗೌಡ ತಾನು ಮುಖ್ಯಮಂತ್ರಿಯಾಗಿದ್ದ ವೇಳೆಯಲ್ಲಿ ಅರೆಭಾಷೆ ಅಕಾಡೆಮಿಯನ್ನು ಸ್ಥಾಪಿಸಿದ್ದರು. ಒಂದು ಕಡೆ ಭಾಷಾ ಅಕಾಡೆಮಿಗಳೆಲ್ಲವನ್ನೂ ರದ್ದು ಮಾಡಿ, ಕನ್ನಡ ಸಾಹಿತ್ಯ ಅಕಾಡೆಮಿಯ ಅಡಿಯಲ್ಲಿಯೇ ಎಲ್ಲಾ ಭಾಷೆಯ ಚಟುವಟಿಕೆಗಳು ನಡೆಯಬೇಕು ಎಂಬ ಪ್ರಸ್ತಾಪ ಇದ್ದಂತೆಯೇ ಅರೆಭಾಷೆ ಅಕಾಡೆಮಿ ಸ್ಥಾಪನೆಯಾಗಿತ್ತು. ಅರೆಭಾಷೆ ಅಕಾಡೆಮಿ ಸ್ಥಾಪನೆಯಾಗುತ್ತಿದ್ದಂತೆಯೇ ಸಂಪಾಜೆಯ ದೇವಿಪ್ರಸಾದ್‌ರವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಅವರು ಅಧ್ಯಕ್ಷರಾಗಿದ್ದ ವೇಳೆಯಲ್ಲಿ ಅವರು ಮಾಡಿದ ಘನಕಾರ್ಯ ಎಂದರೆ, ಅಕಾಡೆಮಿಗೆ ಒಂದು ಬಾಡಿಗೆ ಕಟ್ಟಡವನ್ನು ಗುರುತಿಸಿದ್ದಾಗಿತ್ತು. ಅಕಾಡೆಮಿಯ ಸದಸ್ಯರ ಮತ್ತು ಅವರ ನಡುವೆ ಎಂದೂ ಕೂಡ ಸಹಮತವಿರಲಿಲ್ಲ. ಹಾಗಾಗಿ ಅಕಾಡೆಮಿ ಯಾವುದೇ ಕಾರ್ಯಕ್ರಮವನ್ನು ಮಾಡಲಿಲ್ಲ.

ಈ ಎರಡೂ ಅಕಾಡೆಮಿಗಳು ಆರಂಭದಿಂದಲೂ ಗೊಂದಲದ ಗೂಡಾಗಿಯೇ ಇತ್ತು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಅಕಾಡೆಮಿಗಳು ಸಾಹಿತ್ಯಾಸಕ್ತರ ಮತ್ತು ಸಾಹಿತಿಗಳ ಪಾಲಾಗುವುದಕ್ಕಿಂತಲೂ ಹೆಚ್ಚಾಗಿ ರಾಜಕಾರಣಿಗಳ ಪಾಲಾಗಿತ್ತು. ಹಾಗೆ ನೋಡಿದರೆ ಈ ಎರಡೂ ಭಾಷೆಗಳಲ್ಲಿ ಹೆಸರು ಮಾಡಿದಂತಹ ಸಾಹಿತಿಗಳು ಇಲ್ಲದಿದ್ದರೂ, ಇರುವ ಬರಹಗಾರರು ಅಥವ ಸಾಹಿತಿಗಳನ್ನು ಗುರುತಿಸಿ ಅಕಾಡೆಮಿಗೆ ಅಧ್ಯಕ್ಷರು ಹಾಗೂ ಸದಸ್ಯರನ್ನಾಗಿ ನೇಮಿಸಬಹುದಿತ್ತು. ಈ ಗೊಂದಲಗಳು ಹಿಂದಿನ ಸರಕಾರಗಳಲ್ಲಿ ನಡೆದಿದ್ದರೂ, ಸಿದ್ದರಾಮಯ್ಯನವರ ಸರಕಾರ ಇಂತಹ ವಿಚಾರಗಳಲ್ಲಿ ಸೂಕ್ಷ್ಮತೆಯನ್ನು ಹೊಂದಿದೆ ಎಂಬ ಭಾವನೆ ಇತ್ತು. ಏಕೆಂದರೆ ರಾಜ್ಯದಲ್ಲಿ ಇರುವಂತಹ ಇತರ ಎಲ್ಲಾ ಅಕಾಡೆಮಿಗಳಿಗೆ ಅತ್ಯಂತ ಯೋಗ್ಯರನ್ನು ಗುರುತಿಸಿ ಸರಕಾರ ಅಧ್ಯಕ್ಷರನ್ನಾಗಿ ನೇಮಿಸಿತ್ತು ಮತ್ತು ಸದಸ್ಯರ ನೇಮಕಾತಿಯಲ್ಲಿಯೂ ಯಾವುದೇ ಅಪಸ್ವರಗಳು ಕೇಳಿಬರಲಿಲ್ಲ. ಅದೇರೀತಿ ಈ ಎರಡೂ ಅಕಾಡೆಮಿಗಳಿಗೂ ರಾಜಕೀಯ ಸೋಂಕದಂತೆ ನೋಡಿಕೊಂಡು ಕೊಡವ ಅಕಾಡೆಮಿಗೆ ಇಟ್ಟಿರ ಬಿದ್ದಪ್ಪ ಎಂಬವರನ್ನು, ಅರೆಭಾಷೆ ಅಕಾಡೆಮಿಗೆ ಕೆ.ಆರ್.ವಿದ್ಯಾಧರ ಎಂಬವರನ್ನು ನೇಮಿಸಿ ಆದೇಶವನ್ನು ಹೊರಡಿಸಿತ್ತು. ನಿವೃತ್ತ ಪ್ರಾಂಶುಪಾಲರಾಗಿದ್ದ ಇಟ್ಟಿರ ಬಿದ್ದಪ್ಪ ಹಾಗೂ ವಕೀಲ ಮತ್ತು ಸಾಹಿತಿ, ಜೊತೆಗೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನೂ ಪಡೆದಂತಹ ಕೆ.ಆರ್.ವಿದ್ಯಾಧರರವರ ಆಯ್ಕೆ ಕರ್ನಾಟಕ ರಾಜ್ಯ ಸರಕಾರದ ಗೌರವವನ್ನು ಹೆಚ್ಚಿಸಿತ್ತು. ಆದರೆ ಈ ಅವಧಿಯಲ್ಲಿ ಕಾಂಗ್ರೆಸಿಗರಿಗೆ ಅಧಿಕಾರ ಸಿಗದಿದ್ದರೆ, ಮೋದಿಯವರ ಕನಸಿನಂತೆ ಕಾಂಗ್ರೆಸ್ ಮುಕ್ತ ಭಾರತವಾದರೆ, ಮುಂದೆಂದೂ ತಮಗೆ ಸ್ಥಾನಮಾನಗಳು ಸಿಗುವುದಿಲ್ಲ ಎನ್ನುವಂತೆ ಕಾಂಗ್ರೆಸಿಗರು ವರ್ತಿಸಿದ್ದರು.

ಅಷ್ಟರಲ್ಲಿ ಲೋಕಸಭಾ ಚುನಾವಣೆಯೂ ಘೋಷಣೆ ಆಗುವ ಹಂತದಲ್ಲಿ ಇತ್ತು ಮತ್ತು ಕಾಂಗ್ರೆಸಿಗರು ತಮ್ಮ ಆಸ್ತಿಯನ್ನು ಬೇರೆ ಯಾರೋ ಕಿತ್ತುಕೊಂಡಿದ್ದಾರೆ ಎನ್ನುವಂತೆ ವರ್ತಿಸಿ, ಈ ಎರಡೂ ಅಕಾಡೆಮಿಗಳ ಅಧ್ಯಕ್ಷರ ಘೋಷಣೆಯನ್ನು ತಡೆಹಿಡಿದಿದ್ದರು. ಇದಕ್ಕೆ ನಿಜವಾಗಿಯೂ ಕಾರಣಕರ್ತರು ಆಗ ಸಂಸದರಾಗಿದ್ದ ಹೆಚ್.ವಿಶ್ವನಾಥ್. ಚುನಾವಣೆಯಲ್ಲಿ ಗೆಲ್ಲಬೇಕು ಎಂದಾದರೆ ಕಾಂಗ್ರೆಸಿಗರನ್ನೇ ನೇಮಿಸಬೇಕು ಎಂದು ಕೆಲವು ಕಾಂಗ್ರೆಸಿಗರು ವಿಶ್ವನಾಥ್‌ರವರಿಗೆ ಧಮಕಿ ಹಾಕಿದ್ದರಿಂದ ಸೂಕ್ಷ್ಮ ಸಂವೇದಿ ಎಂದು ಗುರುತಿಸಿಕೊಳ್ಳುವ ವಿಚಾರವಾದಿ(?) ವಿಶ್ವನಾಥ್, ತನ್ನ ಗೆಲುವು ಮುಖ್ಯ ಎಂದು ಹೇಳಿಕೊಂಡು ನೇಮಕಾತಿಯನ್ನು ತಡೆದಿದ್ದರು. ನಂತರದ ದಿನಗಳಲ್ಲಿ ವಿರಾಜಪೇಟೆ ಕ್ಷೇತ್ರದ ಮಾಜಿ ಶಾಸಕ ಹೆಚ್.ಡಿ.ಬಸವರಾಜುರವರು, ವಿಶ್ವನಾಥ್‌ರವರ ಜೊತೆಯಲ್ಲಿ ಸೇರಿಕೊಂಡು ಸಾಹಿತ್ಯದ ಗಂಧ ಗಾಳಿಯೇ ಇಲ್ಲದಿರುವ ಕಾಂಗ್ರೆಸ್ ಪಕ್ಷದ ವಕ್ತಾರ ಬಿದ್ದಾಟಂಡ ತಮ್ಮಯ್ಯರವರನ್ನು ಕೊಡವ ಅಕಾಡೆಮಿಗೆ ಮತ್ತು ಜಿಲ್ಲೆಯ ಒಂದು ಬ್ಲಾಕಿನ ಕಾಂಗ್ರೆಸ್ ಅಧ್ಯಕ್ಷರಾದ ಕೊಲ್ಯದ ಗಿರೀಶ್‌ರವರನ್ನು ಅರೆಭಾಷೆ ಅಕಾಡೆಮಿಗೆ ಅಧ್ಯಕ್ಷರನ್ನಾಗಿ ನೇಮಿಸಿ ಕೆಲವು ಸದಸ್ಯರನ್ನು ಕೂಡ ನೇಮಿಸಲಾಗಿತ್ತು. ಸಾರ್ವಜನಿಕವಾಗಿ ಎಷ್ಟೇ ಟೀಕೆಗಳು ಈ ನೇಮಕಾತಿಯ ಬಗ್ಗೆ ಬಂದರೂ ಕಾಂಗ್ರೆಸ್ ಪಕ್ಷ ತಲೆಕೆಡಿಸಿಕೊಂಡಿರಲಿಲ್ಲ. ಕಾಂಗ್ರೆಸಿನ ಎಲ್ಲಾ ಹುದ್ದೆಗಳು ಕೊಡಗು ಜಿಲ್ಲೆಯ ನಾಪೋಕ್ಲು ವಿಭಾಗಕ್ಕೆ ಸೀಮಿತವಾಗುತ್ತಿದೆ ಎಂಬ ವ್ಯಂಗ್ಯ ಕೂಡ ಕಾಂಗ್ರೆಸಿಗರನ್ನು ಕಾಡಲಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಅರೆಭಾಷೆ ಮಾತನಾಡುವ ಜನರು ಅಕಾಡೆಮಿಗೆ ಗಿರೀಶ್‌ರವರನ್ನು ನೇಮಿಸಿದ್ದು ಮತ್ತು ಅರೆಭಾಷೆ ಗೌಡ ಜನಾಂಗಕ್ಕೆ ಸೇರದೇ ಇರುವವರನ್ನು ಸದಸ್ಯರನ್ನಾಗಿ ನೇಮಿಸಿದ್ದನ್ನು ಆಕ್ಷೇಪಿಸಿದ್ದರು. ಅರೆಭಾಷೆ ಗೌಡ ಜನಾಂಗಕ್ಕೆ ಸೇರದೆ ಇರುವವರನ್ನು ಅಕಾಡೆಮಿಯ ಸದಸ್ಯರನ್ನಾಗಿ ನೇಮಿಸಿದ್ದಕ್ಕೆ ಆಕ್ಷೇಪಣೆ ಮಾಡಿದ್ದು ಸರಿಯಲ್ಲ. ಅರೆಭಾಷೆಯ ಬಗ್ಗೆ ತಿಳಿವಳಿಕೆ ಇದ್ದಂತಹ ವ್ಯಕ್ತಿಗಳೇ ನೇಮಕಗೊಂಡಿದ್ದರು. ಆದರೆ ಅರೆಭಾಷೆ ಮಾತನಾಡುವ ಗೌಡ ಜನಾಂಗದವರು ಬಹಳ ಸ್ವಾರ್ಥಿಗಳಾಗಿ ವರ್ತಿಸಿದರು. ಕಾಂಗ್ರೆಸಿಗರು ಹೇಗೆ ಅಕಾಡೆಮಿಯು ಕಾಂಗ್ರೆಸಿನ ಆಸ್ತಿ ಎಂದು ಭಾವಿಸಿದ್ದರೋ ಅದೇ ರೀತಿ ಅರೆಭಾಷೆ ಅಕಾಡೆಮಿಯು ಅರೆಭಾಷೆಯನ್ನು ಮಾತನಾಡುವ ಗೌಡ ಜನಾಂಗದ ಆಸ್ತಿ ಎಂದು ಭಾವಿಸಿದ್ದರು. ಇದರ ಪರಿಣಾಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿಭಟನೆಗಳು ನಡೆದು, ನಾಲ್ವರು ಸದಸ್ಯರು ಅಕಾಡೆಮಿಗೆ ರಾಜೀನಾಮೆಯನ್ನು ಸಲ್ಲಿಸಿದ್ದರು. ರಾಜೀನಾಮೆಯನ್ನು ಅಂಗೀಕರಿಸಿದ ಸರಕಾರ, ಆ ನಂತರ ಖಾಲಿ ಆದ ಈ ಸ್ಥಾನಕ್ಕೆ ತೀರಾ ಇತ್ತೀಚೆಗೆ ಸದಸ್ಯರನ್ನು ನೇಮಕ ಮಾಡಿತು. ಆದ ತಪ್ಪನ್ನು ಸರಿ ಪಡಿಸಲು ಸಾಕಷ್ಟು ಸರ್ಕಸ್ಸು ಮಾಡಿತು.

ಅಕಾಡೆಮಿ ಅಧ್ಯಕ್ಷರ ನೇಮಕಾತಿಯ ಹಿಂದೆ ವಾಸ್ತವದಲ್ಲಿ ಬಹಳ ಗೂಢಾಲೋಚನೆ ಇದೆ. ಈಗಾಗಲೇ ಕೊಡಗು ಜಿಲ್ಲೆಯ ಎರಡೂ ವಿಧಾನಸಭಾ ಕ್ಷೇತ್ರಗಳು ಕೊಡವ ಜನಾಂಗಕ್ಕೆ ಒಂದು ಹಾಗೂ ಅರೆಭಾಷೆ ಗೌಡ ಜನಾಂಗಕ್ಕೆ ಒಂದು ಎನ್ನುವಂತೆ ಆಗಿರುವುದರಿಂದ, ಅಕಾಡೆಮಿಗಳ ಅಧ್ಯಕ್ಷರುಗಳಾಗಿ ತಾವುಗಳು ನೇಮಕಗೊಂಡರೆ ಮುಂದೆ ತಾವೇ ಮುಂದಿನ ವಿಧಾನಸಭಾ ಚುನಾವಣೆಯ ವೇಳೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾಗಿ ಶಾಸಕರಾಗುವ ಸಾಧ್ಯತೆ ಇದೆ ಎಂಬ ಭ್ರಮೆ ತಮ್ಮಯ್ಯ ಮತ್ತು ಗಿರೀಶ್‌ರವರಲ್ಲಿ ಇದೆ. ಹಾಗಾಗಿ ತನ್ನ ಮಕ್ಕಳನ್ನು ಓದಿಸುವ ನೆಪದಲ್ಲಿ ಬಿ.ಎಸ್.ತಮ್ಮಯ್ಯ ತನ್ನ ಹುಟ್ಟೂರಾದ ನಾಪೋಕ್ಲಿನಿಂದ ಪೊನ್ನಂಪೇಟೆಗೆ ಬಂದು ಬಾಡಿಗೆ ಮನೆಯಲ್ಲಿ ವಾಸವಿದ್ದುಕೊಂಡು, ಮುಂದಿನ ಚುನಾವಣೆಗೆ ತಯಾರಿ ನಡೆಸುವುದು ಹೇಗೆ ಎಂಬ ಲೆಕ್ಕಾಚಾರವನ್ನು ಹಾಕುತ್ತಿದ್ದಾರೆ.

ಅಧ್ಯಕ್ಷ-ರಿಜಿಸ್ಟ್ರಾರ್ ಜಟಾಪಟಿ

ಸರಕಾರ ಈ ಎರಡೂ ಅಕಾಡೆಮಿಗಳಿಗೆ ಪೂರ್ಣ ಪ್ರಮಾಣದಲ್ಲಿ ರಿಜಿಸ್ಟ್ರಾರ್‌ರವರನ್ನು ನೇಮಿಸಲೇ ಇಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರಿಗೆ ಈ ಎರಡೂ ಅಕಾಡೆಮಿಗಳ ರಿಜಿಸ್ಟ್ರಾರ್ ಆಗಿ ಹೆಚ್ಚುವರಿ ಜವಾಬ್ದಾರಿಯನ್ನು ನೀಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಶ್ರೀಮತಿ ಮಂಗಳಾ ನಾಯಕ್ ಎಂಬವರು ಇದರ ರಿಜಿಸ್ಟ್ರಾರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನಿಯಮಾವಳಿಗಳನ್ನು ಮೀರಿ ಯಾವುದೇ ಕಾರ್ಯಕ್ರಮ ನಡೆಯಬಾರದು ಎಂಬುದು ಅವರ ಉದ್ದೇಶವಾಗಿದೆ. ಹಾಗಾಗಿ ಚಟುವಟಿಕೆಗಳು ವ್ಯವಸ್ಥಿತವಾಗಿ ನಿಯಮಾವಳಿಗಳ ವ್ಯಾಪ್ತಿಯಲ್ಲಿಯೇ ನಡೆಯಬೇಕು ಎಂದು ತಾಕೀತು ಮಾಡುತ್ತಾರೆ.


ಕೊಡವ ಭಾಷಾ ಅಕಾಡೆಮಿಯ ಅಧ್ಯಕ್ಷರಾದ ಬಿ.ಎಸ್. ತಮ್ಮಯ್ಯ ಕಾಂಗ್ರೆಸ್ ಪಕ್ಷದ ವಕ್ತಾರರಾಗಿದ್ದ ವೇಳೆಯಲ್ಲಿಯೂ ಸರ್ವಾಧಿಕಾರಿಯಂತೆ ವರ್ತಿಸುತ್ತಾ, ಕಾಂಗ್ರೆಸ್ ಕಾರ್ಯಕರ್ತರ ಕೆಂಗಣ್ಣಿಗೆ ಗುರಿಯಾದಂತಹ ವ್ಯಕ್ತಿ. ಅಕಾಡೆಮಿಯ ಅಧ್ಯಕ್ಷರಾದ ನಂತರ ಕೊಡಗು ಜಿಲ್ಲೆಯೇ ತನ್ನ ಕಪಿಮುಷ್ಠಿಯಲ್ಲಿ ಇದೆ ಎನ್ನುವಂತೆ ವರ್ತಿಸುವ ತಮ್ಮಯ್ಯ ಈಗ ಕಾಂಗ್ರೆಸಿಗರನ್ನು ಕಡೆಗಣಿಸುತ್ತಾ, ತಾನು ಸಾಂವಿಧಾನಿಕ ಹುದ್ದೆಯಲ್ಲಿ ಇರುವವನು; ಪಕ್ಷ ತನಗೆ ಏನೂ ಅಲ್ಲ ಎನ್ನುವಂತೆ ವರ್ತಿಸುತ್ತಾ, ಕಾಂಗ್ರೆಸಿಗರಿಗೆ ಅವರ ಬಗ್ಗೆ ರೇಜಿಗೆ ಹುಟ್ಟಿಸುವಂತೆ ಮಾಡಿದ್ದಾರೆ. ತಾನು ಕಾಂಗ್ರೆಸಿಗನಲ್ಲ, ಹಾಗಾಗಿ ತಾನು ಕಾಂಗ್ರೆಸ್ ಸಭೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳುವ ಮೂಲಕ ತೆರೆಮರೆಯ ರಾಜಕೀಯವನ್ನು ಮಾಡಿಕೊಂಡು, ಮಂತ್ರಿಗಳ ಕಿವಿ ಊದುವ ಕೆಲಸವನ್ನು ಮಾಡುತ್ತಿದ್ದಾರೆ. ಕೊಡಗು ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷರಾದ ಅವರ ಕುಟುಂಬಸ್ಥರೇ ಆಗಿರುವ ಸೌಮ್ಯ ಸ್ವಭಾವದ ಬಿ.ಟಿ. ಪ್ರದೀಪ್‌ರವರಿಗೆ ಈಗ ಇದು ನುಂಗಲಾರದ ತುತ್ತಾಗಿದೆ.

ಸಾಹಿತ್ಯ ಅಕಾಡೆಮಿ ಯಾವ ಕಾರ್ಯವನ್ನು ಮಾಡಬೇಕು ಎಂಬ ಜ್ಞಾನ ಇವರಿಗೆ ಇಲ್ಲ. ಹಾಗಾಗಿ ಜಾನಪದ ಅಕಾಡೆಮಿಗಳು ಮಾಡಬೇಕಾದಂತಹ ಕಾರ್ಯವನ್ನೇ ಇವರು ಮಾಡುತ್ತಾ, ಸಾಹಿತ್ಯ ಅಕಾಡೆಮಿಗೆ ಬಂದಂತಹ ಅನುದಾನಗಳು ಜಾನಪದ ಪ್ರಾಕಾರಗಳಿಗೆ ವೆಚ್ಚವಾಗುವಂತೆ ಮಾಡುತ್ತಿದ್ದಾರೆ. ಇದರಿಂದ ಸಾಹಿತ್ಯ ಕ್ಷೇತ್ರಕ್ಕೆ ಅನ್ಯಾಯವಾಗುತ್ತಿದೆ. ಇಲ್ಲಿಯವರೆಗೂ ಕೊಡವ ಸಾಹಿತ್ಯ ಅಕಾಡೆಮಿ ಕೊಡವ ಸಾಹಿತ್ಯದ ವಿಚಾರದಲ್ಲಿ ಗಟ್ಟಿಯಾದ ಯಾವುದೇ ಕಾರ್ಯವನ್ನು ಮಾಡಿಲ್ಲ.

ಜಾನಪದ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ಅದನ್ನು ವ್ಯವಸ್ಥಿತವಾಗಿ ಮಾಡುತ್ತಿದ್ದಾರೆಯೇ ಎಂದರೆ, ಇಲ್ಲ ಎನ್ನುತ್ತಾರೆ ಅಕಾಡೆಮಿಯ ರಿಜಿಸ್ಟ್ರಾರ್ ಆಗಿರುವ ಮಂಗಳಾ ನಾಯಕ್. ನವೆಂಬರ್ 15 ಮತ್ತು 16ರಂದು ಕೊಡಗಿನ ಕಕ್ಕಬ್ಬೆಯಲ್ಲಿ ಮತ್ತು ಡಿಸೆಂಬರ್ 20 ಹಾಗೂ 21ರಂದು ಹುದಿಕೇರಿ ಗ್ರಾಮದಲ್ಲಿ ಕೊಡವ ಸಾಂಸ್ಕೃತಿಕ ಮೇಳಗಳನ್ನು ಕೊಡವ ಅಕಾಡೆಮಿ ವತಿಯಿಂದ ಆಯೋಜಿಸಲಾಗಿತ್ತು. ಹಾಗಾಗಿ ಇದೊಂದು ಅಧಿಕೃತ ಕಾರ್ಯಕ್ರಮವಾಗಿತ್ತು. ಆದರೆ ಹುದಿಕೇರಿಯಲ್ಲಿ ಕಾರ್ಯಕ್ರಮ ನಡೆಯುವ ವೇಳೆಯಲ್ಲಿ ರಿಜಿಸ್ಟ್ರಾರ್ ಮಂಗಳಾ ನಾಯಕ್‌ರವರು ಪತ್ರಿಕಾ ಹೇಳಿಕೆಯೊಂದನ್ನು ನೀಡಿ, ಎರಡೂ ಕಾರ್ಯಕ್ರಮಗಳಿಗೆ ಖಾಸಗಿಯಾಗಿ ಹಣ ಸಂಗ್ರಹ ಮಾಡಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ರಶೀದಿಗಳು ತನ್ನ ಕೈಸೇರಿವೆ. ಅಕಾಡೆಮಿ ನಡೆಸುವ ಅಧಿಕೃತ ಕಾರ್ಯಕ್ರಮಕ್ಕೆ ಸಾರ್ವಜನಿಕ ವಂತಿಗೆಯನ್ನು ಪಡೆಯಲು ಸಭೆಯಲ್ಲಿ ತೀರ್ಮಾನವನ್ನು ತೆಗೆದುಕೊಂಡಿಲ್ಲ ಮತ್ತು ಯಾವುದೇ ಅನುಮತಿಯನ್ನು ಪಡೆದಿಲ್ಲ. ಹಾಗಾಗಿ ಈ ಎರಡೂ ಕಾರ್ಯಕ್ರಮಗಳಿಗೆ ಸಂಗ್ರಹಿಸಿರುವ ಹಣವನ್ನು ಅಕಾಡೆಮಿ ಖಾತೆಗೆ ಜಮಾಯಿಸಬೇಕು ಎಂದು ಪತ್ರ ಬರೆದಿದ್ದರು. ಯಾವುದೇ ವೆಚ್ಚವಿದ್ದರೂ ಸಂಗ್ರಹಿಸಿದ ಮೊತ್ತವನ್ನು ಅಕಾಡೆಮಿಯ ಖಾತೆಗೆ ಜಮೆ ಮಾಡಿ, ಅಲ್ಲಿಂದ ಪಾವತಿಯಾಗಬೇಕು ಎಂದು ಅವರು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

ಅಕಾಡೆಮಿಯ ಅಧ್ಯಕ್ಷ ಬಿ.ಎಸ್. ತಮ್ಮಯ್ಯ ಇದನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಬಹಿರಂಗ ಪತ್ರಿಕಾಹೇಳಿಕೆಯನ್ನು ರಿಜಿಸ್ಟ್ರಾರ್‌ರವರು ನೀಡಿದ ನಂತರ ಈ ಬಗ್ಗೆ ಸ್ಪಷ್ಟೀಕರಣವನ್ನು ನೀಡುವುದು ಅಧ್ಯಕ್ಷರ ಜವಾಬ್ದಾರಿಯಾಗಿತ್ತು. ಆದರೆ ಉಡಾಫೆ ಮನೋಭಾವದಿಂದ ಇದಕ್ಕೆ ಅವರು ಪ್ರತಿಕ್ರಿಯಿಸಲೇ ಇಲ್ಲ. ತಾನು ಉತ್ತರ ನೀಡುವ ಬದಲು ಬೇರೆಯವರ ಮೂಲಕ ಪತ್ರಿಕಾಹೇಳಿಕೆಗಳನ್ನು ಕೊಡಿಸುವ ಕಾರ್ಯದಲ್ಲಿ ತಮ್ಮಯ್ಯ ನಿರತರಾಗಿದ್ದಾರೆ. ಈ ಬಗ್ಗೆ ಹಣ ಸಂಗ್ರಹ ಮಾಡಿದವರಾಗಲಿ, ಅಕಾಡೆಮಿಯ ಅಧ್ಯಕ್ಷರಾಗಲಿ ಪ್ರತಿಕ್ರಿಯೆಯನ್ನು ನೀಡದೇ ಇರುವುದರಿಂದ ಸರಕಾರಿ ಕಾರ್ಯಕ್ರಮಕ್ಕೆ ಸಾರ್ವಜನಿಕವಾಗಿ ಹಣ ಸಂಗ್ರಹ ಮಾಡಿದ್ದು ಅಪರಾಧ ಎಂಬುದು ಮಂಗಳಾ ನಾಯಕ್‌ರವರ ಅಭಿಪ್ರಾಯವಾಗಿದೆ. ಹಾಗಾಗಿ ಈ ವಿಚಾರದಲ್ಲಿ ತಾನು ಪೊಲೀಸ್ ಪುಕಾರು ನೀಡುವುದಾಗಿಯೂ ಅವರು ಪತ್ರಿಕೆಗಳಿಗೆ ಹೇಳಿಕೆಗಳನ್ನು ನೀಡಿದ್ದಾರೆ. 16.02.2015 ರಲ್ಲಿ ನಾಪೋಕ್ಲು ಪೊಲೀಸ್ ಠಾಣೆಗೆ ಹಾಗೂ ಹುದಿಕೇರಿ ಪೊಲೀಸ್ ಠಾಣೆಗೆ ರಿಜಿಸ್ಟ್ರಾರ್ ಮಂಗಳಾ ನಾಯಕ್ ಅವರು 'ಅಕಾಡೆಮಿ ಕಾರ್ಯಕ್ರಮಗಳ ಹೆಸರಿನಲ್ಲಿ ಅನಧಿಕೃತ ಹಣ ಸಂಗ್ರಹಿಸಿರುವವರ ಬಗ್ಗೆ ಕಾನೂನು ಕ್ರಮ ಕೈಗೊಳ್ಳಲು' ಪುಕಾರು ನೀಡಿದ್ದು, ಇಲ್ಲಿಯವರೆಗೂ ಈ ಎರಡೂ ಠಾಣೆಯ ಅಧಿಕಾರಿಗಳು ಪ್ರಕರಣವನ್ನು ದಾಖಲಿಸಿಕೊಂಡಿಲ್ಲ. ಸರ್ಕಾರದ ಅಧಿಕೃತ ಪುಕಾರು ದೊರೆತ ನಂತರ ಠಾಣಾಧಿಕಾರಿಗಳು ಪ್ರಕರಣವನ್ನು ದಾಖಲಿಸುವುದು ಅವರ ಜವಾಬ್ದಾರಿಯಾಗಿತ್ತು. ಆದರೆ ಹಾಗೆ ಮಾಡದ ಅಧಿಕಾರಿಗಳು ಕಾಂಗ್ರೆಸಿಗರ ಒತ್ತಡಕ್ಕೆ ಮಣಿದಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ.

ಆಡಳಿತ ಪಕ್ಷದ ನೇಮಕಾತಿಯಾದ ಅಕಾಡೆಮಿಗಳು ಅವ್ಯವಹಾರ ಮತ್ತು ಕಾನೂನು ಪಾಲನೆ ಮಾಡದೆ ಇರುವುದು ವಿರೋಧ ಪಕ್ಷಕ್ಕೆ ಒಂದು ಅಸ್ತ್ರವಾಗಬೇಕಾಗಿತ್ತು. ಆದರೆ ವಿರೋಧ ಪಕ್ಷಗಳು ಕೂಡ ಈ ವಿಚಾರದಲ್ಲಿ ಮೌನ ತಳೆದಿದೆ. ಎಲ್ಲರೂ ಚುನಾವಣೆಯಲ್ಲಿ ಬರಬಹುದಾದ ಮತಗಳಿಗೆ ಎಲ್ಲಿ ಸಂಚಕಾರ ಬರುತ್ತದೋ ಎಂಬ ಲೆಕ್ಕಾಚಾರದಲ್ಲಿ ತೊಡಗಿರುವುದರಿಂದ ಈ ನಿಷ್ಕ್ರಿಯತೆ ಕಂಡುಬರುತ್ತಿದೆ. ಪತ್ರಕರ್ತರ ಸಂಘದ ಚುನಾವಣೆಯ ವೇಳೆಯಲ್ಲಿ ಹಾಲಿ ಅಧ್ಯಕ್ಷ ಅಜ್ಜಮಾಡ ಕುಟ್ಟಪ್ಪರವರ ಪರವಾಗಿ ಚುನಾವಣಾಧಿಕಾರಿಗಳಿಗೆ ಇದೇ ಬಿ.ಎಸ್. ತಮ್ಮಯ್ಯ ಧಮಕಿ ಹಾಕಿದ್ದರು. ಕೊನೆಗೆ ಅವರ ವರ್ತನೆಗೆ ಬೇಸತ್ತು ಚುನಾವಣೆಯಲ್ಲಿ ಸ್ಪರ್ಧಿಸಿದ್ದ ವ್ಯಕ್ತಿ ನಾಮಪತ್ರವನ್ನು ಹಿಂದಕ್ಕೆ ಪಡೆದು ಅವಿರೋಧ ಆಯ್ಕೆಯಾಗಲು ಕಾರಣಕರ್ತರಾಗಿದ್ದರು. ಹಾಗಾಗಿ ಈ ಕುಟ್ಟಪ್ಪ ಪ್ರತಿನಿಧಿಸುವ ವಿಜಯವಾಣಿ ಪತ್ರಿಕೆ ಅಕಾಡೆಮಿಯ ಅಧ್ಯಕ್ಷ ಬಿ.ಎಸ್. ತಮ್ಮಯ್ಯ ಯಾವುದೇ ರೀತಿಯಲ್ಲಿ ತಪ್ಪು ಮಾಡಿಲ್ಲ ಎನ್ನುವ ಸಂದೇಶಗಳು ಬರುವ ರೀತಿಯಲ್ಲಿ 'ತುತ್ತೂರಿ' ಊದುತ್ತಿದ್ದಾರೆ. ತನ್ಮೂಲಕ ತನ್ನನ್ನು ಅಧ್ಯಕ್ಷನನ್ನಾಗಿಸಿದ ಋಣವನ್ನು ತೀರಿಸುತ್ತಿದ್ದಾರೆ.



ಕೊಲ್ಯದ ಗಿರೀಶ್

ಸಚಿವರಿಗೆ ಪುಕಾರು

ಈ ಮಧ್ಯೆ ಈ ರೀತಿ ಹಣ ಸಂಗ್ರಹ ಮಾಡಿರುವ ಬಗ್ಗೆ ಇಲಾಖೆಯ ಹಿರಿಯ ಅಧಿಕಾರಿಗಳಿಗೂ, ಕಾರ್ಯದರ್ಶಿಯವರಿಗೂ ಮತ್ತು ಸಚಿವರಿಗೂ ರಿಜಿಸ್ಟ್ರಾರ್‌ರವರು ಪುಕಾರು ಸಲ್ಲಿಸಿದ್ದಾರೆ. ಪುಕಾರು ಸಲ್ಲಿಸುವುದು ಮಾತ್ರವಲ್ಲ, ಈ ಬಗ್ಗೆ ಇಲಾಖೆಯಿಂದ ತನಿಖೆಯಾಗಬೇಕು ಎಂದು ಪತ್ರ ಬರೆದಿರುವ ಅವರು, ಇಲಾಖಾ ತನಿಖೆ ಆಗುವವರೆಗೆ ತಾನು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ನಡೆಸುವ ಯಾವುದೇ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದಿಲ್ಲ ಎಂದು ತಿಳಿಸಿದ್ದಾರೆ.

ಇಷ್ಟೆಲ್ಲಾ ಆದ ನಂತರ ಅಧ್ಯಕ್ಷರು ಅಕಾಡೆಮಿಯ ಕಾರ್ಯಕ್ರಮ ನಡೆಯಬೇಕು ಎನ್ನುವ ಕಾರಣಕ್ಕಾಗಿಯಾದರೂ ರಿಜಿಸ್ಟ್ರಾರ್‌ರವರೊಂದಿಗೆ ಚರ್ಚೆಯನ್ನು ನಡೆಸಿ, ಭಿನ್ನಾಭಿಪ್ರಾಯಗಳನ್ನು ಸರಿಮಾಡುವ ವಿಚಾರಕ್ಕೆ ಮುಂದಾಗಬೇಕಾಗಿತ್ತು. ಆದರೆ ಅವರು ತಮ್ಮ ಸರಕಾರವಿದ್ದು ತನ್ನನ್ನು ಏನೂ ಮಾಡಲು ಸಾಧ್ಯವಿಲ್ಲ ಎನ್ನುವಂತಹ ಉದ್ಧಟತನವನ್ನು ತೋರುತ್ತಿರುವುದಲ್ಲದೆ, ನಿಮ್ಮನ್ನು ಈ ಜಿಲ್ಲೆಯಿಂದ ವರ್ಗಾಯಿಸುತ್ತೇನೆ ಎಂದು ರಿಜಿಸ್ಟ್ರಾರ್ ಮಂಗಳಾ ನಾಯಕ್‌ರವರಿಗೆ ಬೆದರಿಕೆಯನ್ನು ಹಾಕುತ್ತಿದ್ದಾರೆ. ಅಕಾಡೆಮಿಯ ಅಧ್ಯಕ್ಷರಾಗುವ ಮುನ್ನವೂ ಕಾಂಗ್ರೆಸಿನ ವಕ್ತಾರನಾಗಿದ್ದುಕೊಂಡು, ಅಧಿಕಾರಿಗಳಿಗೆ ಧಮಕಿ ಹಾಕುವ ಕೆಲಸವನ್ನೇ ತಮ್ಮಯ್ಯ ಮಾಡಿಕೊಂಡು ಬಂದಿದ್ದರು. ಈಗ ಅಕಾಡೆಮಿಯ ಕಾರ್ಯಕ್ರಮಕ್ಕೆ ಬರಲಿಲ್ಲ ಎನ್ನುವ ಕಾರಣಕ್ಕೆ ಜಿಲ್ಲಾ ವಾರ್ತಾಧಿಕಾರಿಯನ್ನು ವರ್ಗಾಯಿಸುತ್ತೇನೆ ಎಂದು ಬೆದರಿಸುತ್ತಾ ನಿಮ್ಮ ವರ್ಗಾವಣೆಯ ಕಡತ ಮುಖ್ಯಮಂತ್ರಿಗಳ ಮುಂದೆ ಇದೆ ಎಂದು ಬೆದರಿಸುತ್ತಿದ್ದಾರೆ.

ಕೆಟ್ಟ ಮೇಲಾದರೂ ಬುದ್ಧಿ ಬರುತ್ತದೆ ಎಂದರೆ ಇಲ್ಲ ಎನ್ನುತ್ತಾರೆ ತಮ್ಮಯ್ಯ. ಇಷ್ಟೆಲ್ಲಾ ರಂಪಾಟಗಳನ್ನು ಮಾಡಿಕೊಂಡ ನಂತರ ಮುಂದಿನ ದಿನಗಳಲ್ಲಿಯಾದರೂ ತಿದ್ದಿಕೊಳ್ಳಬಹುದು ಎಂದರೆ ಅವರು ತಾನು ಏನನ್ನೂ ಮಾಡಿ ಜೀರ್ಣಿಸಿಕೊಳ್ಳಬಲ್ಲೆ ಎನ್ನುವಂತೆ ಕೆಲವೇ ದಿನಗಳ ಹಿಂದೆ ಪೊನ್ನಂಪೇಟೆಯ ಶಾಲೆಯೊಂದರಲ್ಲಿ ಮಕ್ಕಳಿಗಾಗಿ "ಕುಂಞಡ ಮೇಳ" ಕಾರ್ಯಕ್ರಮವನ್ನು ನಡೆಸಿದ್ದಾರೆ. ಕಾರ್ಯಕ್ರಮದ ಹಿಂದಿನ ದಿನ ರಿಜಿಸ್ಟ್ರಾರ್‌ರವರು ಈ ಕಾರ್ಯಕ್ರಮ ಕೊಡವ ಅಕಾಡೆಮಿಯ ಕಾರ್ಯಕ್ರಮವಲ್ಲ ಎಂದು ಪತ್ರಿಕಾಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ. ಹೀಗೆ ಹೇಳಿಕೆ ಬಿಡುಗಡೆಯಾಗುತ್ತಿದ್ದಂತೆಯೇ, ಎಲ್ಲಾ ಪತ್ರಿಕಾ ಕಚೇರಿಗೂ ದೂರವಾಣಿ ಮೂಲಕ ಹೇಳಿಕೆಯನ್ನು ಪ್ರಕಟಿಸದಂತೆ ಅಧ್ಯಕ್ಷ ತಮ್ಮಯ್ಯ ದುಂಬಾಲು ಬಿದ್ದಿದ್ದಾರೆ. ಆದರೆ ಪತ್ರಿಕೆಗಳಲ್ಲಿ ಈ ವಿಚಾರ ಪ್ರಕಟಗೊಂಡಿದೆ. ಆ ನಂತರ ಇದನ್ನು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ಅಧ್ಯಕ್ಷ ತಮ್ಮಯ್ಯ ತಂದಿದ್ದರೂ, ಈ ಬಗ್ಗೆ ಪೂರ್ಣ ಮಾಹಿತಿ ಇರುವ ಸಚಿವ ಕೆ.ಜೆ. ಜಾರ್ಜ್, ರಿಜಿಸ್ಟ್ರಾರ್‌ರವರ ಬಳಿ ಪ್ರಶ್ನಿಸಲೇ ಇಲ್ಲ. ಕೆ.ಡಿ.ಪಿ. ಸಭೆಯಲ್ಲಿಯೂ ಅವರು ಈ ಬಗ್ಗೆ ವಿವರಣೆಯನ್ನು ಪಡೆಯಲಿಲ್ಲ. ಅಂದರೆ ಅವರಿಗೆ

ಅಧ್ಯಕ್ಷರ ತಪ್ಪು ಏನು ಎಂಬುದು ಅರಿವಾಗಿದೆ.

ತನ್ನ ತಪ್ಪನ್ನು ತಿದ್ದಿಕೊಳ್ಳುವ ಬದಲು ಅಕಾಡೆಮಿಗೆ ಪ್ರತ್ಯೇಕ ರಿಜಿಸ್ಟ್ರಾರ್‌ರನ್ನು ನೇಮಕಾತಿ ಮಾಡುವ ಯತ್ನದಲ್ಲಿ ಕೂಡ ಬಿ.ಎಸ್. ತಮ್ಮಯ್ಯ ತೊಡಗಿದ್ದು, ಬೆಂಗಳೂರಿನಲ್ಲಿ ಇದಕ್ಕಾಗಿ ಯತ್ನಗಳನ್ನು ನಡೆಸಿದ್ದಾರೆ. ಆದರೆ ಅವರಿಗೆ ಸಫಲತೆ ಇಲ್ಲಿಯವರೆಗೆ ಸಿಕ್ಕಿಲ್ಲ, ಆದರೂ ಬೆದರಿಕೆಯನ್ನು ಹಾಕುವುದನ್ನು ನಿಲ್ಲಿಸಿಲ್ಲ.

ಸಭೆಗೆ ಸದಸ್ಯರ ಗೈರುಹಾಜರಿ

ಇಷ್ಟೆಲ್ಲದರ ನಡುವೆ ಅಕಾಡೆಮಿ ಒಂದು ರೀತಿಯಲ್ಲಿ ಯಾವುದೇ ಕಾರ್ಯಕ್ರಮಗಳು ಮಾಡದೆ ನಿಷ್ಕ್ರಿಯವಾಗಿರುವುದನ್ನು ಗಮನಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಅಧ್ಯಕ್ಷರ ಕೋರಿಕೆಯ ಮೇರೆ ಸಭೆ ನಡೆಸಲು ರಿಜಿಸ್ಟ್ರಾರ್ ಮಂಗಳಾ ನಾಯಕ್ ಅವರಿಗೆ ತಿಳಿಸಿದ ಹಿನ್ನೆಲೆಯಲ್ಲಿ ಅವರು ಒಂದು ಸಭೆಯನ್ನು ಕರೆದಿದ್ದರು. ಈ ಸಭೆ ನಡೆಯುವ ಮುನ್ನವೇ ಅಕಾಡೆಮಿಯ ಏಳು ಜನ ಸದಸ್ಯರು ಅಧ್ಯಕ್ಷ ಬಿ.ಎಸ್. ತಮ್ಮಯ್ಯನವರ ಸರ್ವಾಧಿಕಾರಿ ಧೋರಣೆಯ ವಿರುದ್ಧ ಪತ್ರಿಕಾಗೋಷ್ಠಿಯೊಂದನ್ನು ನಡೆಸಿ ಅಧ್ಯಕ್ಷರು ಸರ್ವಾಧಿಕಾರಿ ಧೋರಣೆಯನ್ನು ಕೈಬಿಡಬೇಕೆಂದು ಮತ್ತು ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸಬೇಕೆಂದು ಕೋರಿದರೆ ಅದಕ್ಕೂ ಉಡಾಫೆತನವನ್ನು ಅಧ್ಯಕ್ಷರು ತೋರಿದ್ದರಿಂದ ಈ ಏಳೂ ಜನ ಸದಸ್ಯರು ಸಭೆಗೆ ಗೈರುಹಾಜರಾಗುವ ಮೂಲಕ ಸಭೆ ಕೋರಂ ಇಲ್ಲದೆ ಮುಂದೂಡುವಂತೆ ಮಾಡಿದ್ದಾರೆ.

ಸಹೋದರರಿಂದ ಪುಕಾರು

ಒಂದು ಕಡೆ ಅಕಾಡೆಮಿ ಅಧ್ಯಕ್ಷ ಮತ್ತು ರಿಜಿಸ್ಟ್ರಾರ್‌ರವರ ನಡುವೆ ಯುದ್ಧ ನಡೆಯುತ್ತಿದ್ದರೆ, ಮತ್ತೊಂದು ಕಡೆ ಅಕಾಡೆಮಿಯ ಅಧ್ಯಕ್ಷರ ಸಹೋದರ ನಿವೃತ್ತ ಪೊಲೀಸ್ ಅಧಿಕಾರಿ ಬೆಳ್ಯಪ್ಪರವರು, ಅಕಾಡೆಮಿಯ ಅಧ್ಯಕ್ಷ ಸ್ಥಾನದಿಂದ ತಮ್ಮಯ್ಯರವರನ್ನು ವಜಾ ಮಾಡಬೇಕೆಂದು ಮುಖ್ಯಮಂತ್ರಿಗಳೂ ಸೇರಿದಂತೆ ಸುಮಾರು 12 ಮಂದಿಗೆ ಬೆಂಗಳೂರಿನ ವಕೀಲರಾದ ಎಂ.ಸಿ. ರವಿಕುಮಾರ್ ಮೂಲಕ ನೋಟಿಸನ್ನು ನೀಡಿದ್ದಾರೆ. ಈ ಸ್ಥಾನಕ್ಕೆ ಅವರನ್ನು ನೇಮಕ ಮಾಡಿರುವುದೇ ತಪ್ಪು; ಕೊಡಗಿನ ಗೌರವವನ್ನು ಹೆಚ್ಚಿಸಿರುವ ಜ। ತಿಮ್ಮಯ್ಯ ಹಾಗೂ ಫೀ। ಮಾ। ಕಾರ್ಯಪ್ಪರವರಂತಹವರ ನಡುವೆ ಇವರೊಂದು ಕಪ್ಪು ಕುರಿ ಎಂದು ಹೇಳಿದ್ದಾರೆ. ಹಾಗೆ ಅವರನ್ನು ನೇಮಕ ಮಾಡುವ ಮೂಲಕ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಗೌರವವನ್ನು ಕರ್ನಾಟಕ ರಾಜ್ಯ ಸರಕಾರ ಮಣ್ಣು ಪಾಲು ಮಾಡಿದೆ ಎಂದು ಆರೋಪಿಸಿದ್ದಾರೆ.

ಇವರ ಹೆಸರು ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಇಂದಿಗೂ ರೌಡಿಪಟ್ಟಿಯಲ್ಲಿ ಇದೆ ಎಂದು ತಮ್ಮ ನೋಟಿಸಿನಲ್ಲಿ ತಿಳಿಸಿರುವ ಅವರು, ಇಂತಹ ವ್ಯಕ್ತಿಯನ್ನು ಅಧ್ಯಕ್ಷ ಸ್ಥಾನಕ್ಕೆ ನೇಮಿಸಿರುವುದರ ಔಚಿತ್ಯವನ್ನು ಪ್ರಶ್ನಿಸಿದ್ದಾರೆ. ಅವರ ವಿರುದ್ಧ ಚೆಕ್ ಬೌನ್ಸ್ ಪ್ರಕರಣವೂ ಸೇರಿದಂತೆ ಹಲವು ಪ್ರಕರಣಗಳು ಇತ್ತು ಮತ್ತು ಒಂದು ಪ್ರಕರಣದಲ್ಲಿ ಅವರಿಗೆ ಶಿಕ್ಷೆಯನ್ನೂ ವಿಧಿಸಲಾಗಿತ್ತು. ಆದರೆ ಇದರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿ ಅವರು ಪಾರಾಗಿದ್ದರು. ಆದರೂ ಕೂಡ ಶಿಕ್ಷೆ ಜಾರಿಗೊಳಿಸಬೇಕಾಗಿದ್ದಂತಹ ಜವಾಬ್ದಾರಿ ನ್ಯಾಯಾಲಯದ ಮೇಲೆ ಇತ್ತು, ಆದರೆ ಇದನ್ನು ನ್ಯಾಯಾಲಯದ ಗಮನಕ್ಕೆ ತಾರದೇ ಇದ್ದ ಕಾರಣ ಶಿಕ್ಷೆ ಜಾರಿಯಾಗಲಿಲ್ಲ ಎಂದು ಹೇಳಿದ್ದಾರೆ. ಹಾಗಾಗಿ ಅವರನ್ನು ವಜಾಗೊಳಿಸಬೇಕು ಎಂದು ಒತ್ತಾಯಿಸಿರುವ ಅವರು, ಇಲ್ಲದಿದ್ದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ದೂರದ ಚಿಂತನೆಗಳು

ಎರಡೂ ಅಕಾಡೆಮಿಗಳು ಈಗ ಬಹುತೇಕ ನಿರ್ಜೀವ ಎನ್ನುವಂತೆ ಇದೆ. ಇದಕ್ಕೆ ಕಾರಣ ಸಭೆಗಳಿಗೆ ರಿಜಿಸ್ಟ್ರಾರ್‌ರವರು ಹೋಗದೇ ಇರುವುದು. ಅವರು ಸಭೆ ನಡೆಸದೇ ಇರುವುದರಿಂದ ಕಾರ್ಯಕ್ರಮಗಳನ್ನು ರೂಪಿಸಲು ಅಕಾಡೆಮಿಗೆ ಸಾಧ್ಯವಾಗುವುದಿಲ್ಲ, ತಾನು ರಿಜಿಸ್ಟ್ರಾರ್ ಆಗಿರುವಾಗ ತನ್ನ ಗಮನಕ್ಕೇ ತಾರದೆ ನಡೆದಂತಹ ಘಟನೆಗಳ ಬಗ್ಗೆ ತನಿಖೆ ನಡೆಯುವವರೆಗೆ, ಕೊಡವ ಸಾಹಿತ್ಯ ಅಕಾಡೆಮಿಯಲ್ಲಿ ಸಕ್ರಿಯವಾಗಿ ಇರುವುದಿಲ್ಲ ಎಂದು ಅವರು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ತಿಳಿಸಿದ್ದಾರೆ.

ಕೊನೆ ಗಳಿಗೆಯಲ್ಲಿ ಬಂದಿರುವ ಮಾಹಿತಿ ಎಂದರೆ ಅಕಾಡೆಮಿಯ ಅಧ್ಯಕ್ಷರನ್ನೇ ಬದಲಾಯಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಪ್ರಧಾನ ಕಾರ್ಯದರ್ಶಿಯವರಿಗೆ ಶಿಫಾರಸ್ಸು ಮಾಡಿದ್ದಾರೆ. ಈ ಶಿಫಾರಸ್ಸಿನಂತೆ ಅಧ್ಯಕ್ಷರ ಬದಲಾವಣೆ ಆಗುವುದು ಅಸಾಧ್ಯ ಕಾರಣ ಇದು ರಾಜಕೀಯ ನೇಮಕಾತಿ. ಇಷ್ಟೆಲ್ಲಾ ಆದ ನಂತರವಷ್ಟು ಬಿ.ಎಸ್. ತಮ್ಮಯ್ಯ ತಿದ್ದಿಕೊಳ್ಳುವುದಿಲ್ಲ ಎಂದರೆ ಈ ಅಕಾಡೆಮಿಯನ್ನು ರಕ್ಷಿಸಲು ಯಾರಿಂದಲೂ ಸಾಧ್ಯವಿಲ್ಲ, ಸರ್ಕಾರದ ಅನುದಾನ ಬಳಕೆಯಾಗದೆ ಹಿಂದಕ್ಕೆ ಹೋಗುವ ಸಾಧ್ಯತೆಗಳು ಇವೆ.

■ ಬಿ.ಎಸ್. ಮನುಶೆಟ್ಟಿ

ಅರ್ಥವಿಲ್ಲದ ಚಿಮೂ ತಕರಾರು

ಈಗಿನ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಮುದನೂರಿನಲ್ಲಿದ್ದು ನೇಯ್ಗೆಯ ಕಾಯಕದೊಂದಿಗೆ ಆದ್ಯ ವಚನಕಾರರಾಗಿ ಪ್ರಸಿದ್ಧರಾದವರು ಜೇಡರ ದಾಸಿಮಯ್ಯನವರು. ಅವರ ಆರಾಧ್ಯದೈವ ರಾಮನಾಥನ ದೇವಾಲಯ ಮುದನೂರಿನಲ್ಲಿದೆ. ಕಾಮಯ್ಯ ಶಂಕರಿಯರ ಮಗ ದಾಸಿಮಯ್ಯನವರ ಅನುರೂಪದ ಪತ್ನಿ ದುಗ್ಗಳೆ. ಕಲ್ಯಾಣ ಚಳವಳಿಯ ಸೆಲೆಯನ್ನು ದಾಸಿಮಯ್ಯನವರ ಸರಳ ಸುಂದರ ಕಾವ್ಯಾತ್ಮಕ ವಚನಗಳಲ್ಲಿ ಕಾಣಬಹುದು. ಇವೆಲ್ಲವುಗಳಿಗಿಂತ ಹೆಚ್ಚಾಗಿ ಅವರ ವಚನಗಳು ಸಾಂಸಾರಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಒಳಗೊಂಡಿವೆ. ದಾಂಪತ್ಯದ ಮಹತ್ವವನ್ನು ಸಾರುವ ಮತ್ತು ಬಡವರ ಪರವಾಗಿ ನಿಂತು ಆರಾಧ್ಯ ದೇವನನ್ನು ಎದುರಿಸುವ ಅವರ ವಚನಗಳಲ್ಲಿ ಮಾನವಸಂಬಂಧಗಳ ಸ್ಪಂದನವಿದೆ.


ದೇವರು ನಿರಾಕಾರನಾಗಿದ್ದಾನೆ. ಹಸಿವು ತೃಷೆಗಳು ಆತನ ಬಳಿ ಸುಳಿಯಲಾರವು. ಆದರೆ ಜನ ಲೌಕಿಕ ಜಗತ್ತಿನಲ್ಲಿದ್ದಾರೆ. ಅವರಿಗೆ ಹಸಿವು ನೀರಡಿಕೆಗಳಾಗುತ್ತವೆ. ಬಡವರಿಗಂತೂ ಹೊಟ್ಟೆ ತುಂಬಿಸಿಕೊಳ್ಳುವುದೇ ದೈನಂದಿನ ಸಮಸ್ಯೆಯಾಗಿ ರುತ್ತದೆ. ಹೊಟ್ಟೆಪಾಡಿಗಾಗಿ ಕೆಲವರು ಸುಳ್ಳು ಹೇಳುವುದು ಸಹಜವಾಗಿದೆ. ದಾಸಿಮಯ್ಯನವರು ಅಂಥ ನಿರ್ಗತಿಕರ ಪರವಾಗಿ ನಿಂತು ದೇವರ ಜೊತೆ ವಾಗ್ವಾದಕ್ಕೆ ಇಳಿಯುತ್ತಾರೆ. ಆ ಕಡುಬಡವರ ಧ್ವನಿಯಾಗಿ ದೇವರನ್ನು ಪ್ರಶ್ನಿಸುತ್ತಾರೆ. ನಾನು ಹಸಿಯುವ ದೇಹವುಳ್ಳವನೆಂದು ಗದರಿಸಿ ಮಾತನಾಡಬೇಡ ಎಂದು ದೇವರಿಗೆ ಎಚ್ಚರಿಕೆ ನೀಡುತ್ತಾರೆ. ನೀನೂ ನನ್ನ ಹಾಗೆ ಒಂದುಸಲವಾದರೂ ದೇಹವನ್ನು ಧರಿಸಿ ನೋಡು. ಆಗ ನಿನಗೆ ಹಸಿವಿನ ಅನುಭವವಾಗುತ್ತದೆ. ನೀನು ಕೂಡ ಸುಳ್ಳು ಹೇಳುವ ಪ್ರಸಂಗ ಬರುತ್ತದೆ. ಆಗ ದೇಹ ಹೊಂದಿದವರ ಸಮಸ್ಯೆಗಳ ಅರಿವಾಗುತ್ತದೆ ಎಂದು ದಾಸಿಮಯ್ಯನವರು ದೇವರಿಗೆ ಸವಾಲು ಹಾಕುತ್ತಾರೆ. ಹೀಗೆ ಅವರು ಬಡವರ ಪಕ್ಷ ವಹಿಸುತ್ತಾರೆ. ಬಡವರ ಅಸಹಾಯಕ ಬದುಕಿನ ಬಗ್ಗೆ ಅವರು ಸ್ಪಂದಿಸಿದ ಕ್ರಮ ಹೃದಯಸ್ಪರ್ಶಿಯಾಗಿದೆ. ದೇವರ ಪಕ್ಷಪಾತಿಯಾಗದೆ ಬಡವರ ಪಕ್ಷಪಾತಿಯಾಗುವ ಅವರ ವ್ಯಕ್ತಿತ್ವ ಅನನ್ಯವಾಗಿದೆ.

ದೇವರ ಜೊತೆ ಇಷ್ಟೊಂದು ತಕರಾರು ಮಾಡುವ ಜೇಡರ ದಾಸಿಮಯ್ಯನವರು "ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ. ಸುಳಿದು ಬೀಸುವ ವಾಯು ನಿಮ್ಮ ದಾನ" ಎಂದು ಇನ್ನೊಂದು ವಚನದಲ್ಲಿ ದೇವರನ್ನು ಕೊಂಡಾಡುತ್ತಾರೆ.

ನಮ್ಮ ದೈವನಂಬಿಕೆ, ಆಧ್ಯಾತ್ಮ, ಮೌಲ್ಯಗಳು ಮತ್ತು ಸಂಸ್ಕೃತಿ ಭೌತಿಕ ಜಗತ್ತಿನ ಸ್ಥಿತಿಗತಿಗಳ ಮೇಲೆ ನಿಂತಿರುತ್ತವೆ. ಹಸಿದವನಿಗೆ ರೊಟ್ಟಿಯೇ ಎಲ್ಲಕ್ಕಿಂತ ಮುಖ್ಯವಾಗುತ್ತದೆ. ಮನುಷ್ಯನ ಎಲ್ಲ ಬೇಡಿಕೆಗಳಲ್ಲಿ ಊಟ, ಬಟ್ಟೆ ಮತ್ತು ವಸತಿ ಬಹುಮುಖ್ಯವಾದುವು. ಈ ಭೂಮಿಯು ವೈವಿಧ್ಯಮಯವಾದ ಸಂಪನ್ಮೂಲಗಳಿಂದ ಕೂಡಿದ್ದು ಪ್ರತಿಯೊಂದು ಜೀವದ ಅವಶ್ಯಕತೆಯನ್ನು ಪೂರೈಸುವ ಶಕ್ತಿಯನ್ನು ಹೊಂದಿದೆ. ಆದರೆ ಶೋಷಕರ ಸ್ವಾರ್ಥದಿಂದಾಗಿ ಶೋಷಿತರು ಸಹಸ್ರ ಸಹಸ್ರ ವರ್ಷಗಳಿಂದ ಊಟ ಬಟ್ಟೆ ಮತ್ತು ವಸತಿಯಂಥ ಜೀವನಾವಶ್ಯಕ ವಸ್ತುಗಳ ಕೊರತೆಯಿಂದ ನರಳುತ್ತಲೇ ಸಾಗಿದ್ದಾರೆ. ಸೂಕ್ಷ್ಮಮತಿಯಾದ ಜೇಡರ ದಾಸಿಮಯ್ಯನವರು ಬಡವರ ಈ ದಯನೀಯ ಸ್ಥಿತಿಯನ್ನು ಗಮನಿಸಿದರು. ಈ ಕಾಯಕಜೀವಿಗಳೇಕೆ ಬಳಲಬೇಕು ಎಂಬುದು ಅವರ ಪ್ರಶ್ನೆಯಾಗಿತ್ತು. ದುಡಿಯುವ ವರ್ಗ ಎಲ್ಲ ಕೊರತೆಗಳಿಂದ ಬಳಲುತ್ತಿದೆ. ದುಡಿಯದ ವರ್ಗ ಸಕಲ ಸೌಕರ್ಯಗಳಿಂದ ಬದುಕುತ್ತಿದೆ. ಹಸಿಯುವ ವರ್ಗ ಮತ್ತು ಹಸಿವು ಏನೆಂಬುದು ಗೊತ್ತೇ ಇರದ ವರ್ಗದ ಮಧ್ಯದ ಅಂತರವನ್ನು ಅವರು ಅರಿತರು. ಬ್ರಾಹ್ಮಣರು, ರಾಜರು ಮತ್ತು ಶ್ರೀಮಂತರು ಭೂಸುರರೇ ಆಗಿದ್ದರು. ಹಸಿವಿನ ದೃಷ್ಟಿಯಿಂದ ಇವರೆಲ್ಲ 'ಒಡಲಿಲ್ಲದವರು' ಎಂಬ ರೀತಿಯಲ್ಲಿ ಊಟ, ಬಟ್ಟೆ ಮತ್ತು ವಸತಿಯ ಚಿಂತೆ ಇಲ್ಲದೆ ಬದುಕುತ್ತಿದ್ದರು. ಈ ಜನ ದೇವರ (ದೇವಸ್ಥಾನದ ವ್ಯವಸ್ಥೆ) ಜೊತೆ ಸದಾ ಸಲುಗೆಯಿಂದ ಇರುವವರಾಗಿದ್ದರು. ಬಡವರು ದೇವಸ್ಥಾನದಲ್ಲಿ ಬಿಟ್ಟಿ ಕೆಲಸ ಮಾಡುವ ಸ್ಥಿತಿ ಇತ್ತು. 'ಹಸಿವು' ಎಂದರೆ ಮರ್ಯಾದೆಯುತವಾಗಿ ಜೀವನ ಸಾಗಿಸಲು ಬೇಕಾದ ವಸ್ತುಗಳ ಕೊರತೆಯಿಂದಾಗಿ ಅವರು ಬಳಲುವಂಥ ಸ್ಥಿತಿಯನ್ನು ಮೇಲ್ವರ್ಗ ಮತ್ತು ಮೇಲ್ಜಾತಿಯ ಜನ ನಿರ್ಮಿಸಿದ್ದರು.

ಬದುಕಬೇಕಾದರೆ ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವುದು ಅನಿವಾರ್ಯ. ಈ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗದೆ ಇರುವವರೇ ಬಡವರು. ಇವರೇ ಈ ಭೂಮಿಯ ಮೇಲೆ ಬಹುಸಂಖ್ಯಾತರಾಗಿದ್ದಾರೆ. ಸಕಲ ಸೌಲಭ್ಯಗಳನ್ನು ಪಡೆದ ಉಳ್ಳವರು ಮತ್ತು ಪುರೋಹಿತಶಾಹಿಗಳು ಅಲ್ಪಸಂಖ್ಯಾತರಾಗಿದ್ದಾರೆ. ಬಡವರಿಗೆ ಇವರ ಬದುಕು ದೇವರ ಬದುಕಿನಂತೆಯೆ ಕಾಣುತ್ತಿದೆ. ಗುಡಿ ವ್ಯವಸ್ಥೆಯನ್ನು ರೂಪಿಸಿದವರೇ ಇವರು. ಈ ವ್ಯವಸ್ಥೆ ಶ್ರೀಮಂತರ ಮತ್ತು ವೈದಿಕರ ಪೋಷಣೆ ಮಾಡುತ್ತ ಬಡವರನ್ನು ನಿಯಂತ್ರಣದಲ್ಲಿಡುತ್ತ ಬಂದಿದೆ. ಅಂತೆಯೆ ಬಸವಣ್ಣನವರು 'ಉಳ್ಳವರು ಶಿವಾಲಯವ ಮಾಡಿಹರು' ಎಂದು ತಿಳಿಸಿದ್ದಾರೆ.

ದೇವರಿಗೇ ಸವಾಲು ಹಾಕುವ ದಾಸಿಮಯ್ಯನವರು



ಶ್ರೀಮಂತರನ್ನು ಬಿಟ್ಟಾರೆಯೆ. ಹೀಗೆ ಅವರು ದೇವರಿಗೆ ಹಾಕಿದ ಸವಾಲು, 'ದೇವ ದೇವ' ಎನ್ನುತ್ತಲೇ ಬಡವರ ಸುಲಿಗೆ ಮಾಡುವ ಮೇಲ್ಜಾತಿ, ಮೇಲ್ವರ್ಗದವರನ್ನು ಪರೋಕ್ಷವಾಗಿ ಪ್ರಶ್ನಿಸುವ ತೆರದಲ್ಲಿದೆ. ಇಡೀ ವಚನ ಚಳವಳಿಯ ಆಶಯದ ಮೂಲವನ್ನು ಜೇಡರ ದಾಸಿಮಯ್ಯನವರ ವಚನಗಳಲ್ಲಿ ಕಾಣಲು ಸಾಧ್ಯವಿದೆ. ದೀನದಲಿತರು ಮತ್ತು ಮಹಿಳೆಯರ ಪರವಾಗಿ ನಿಂತು ಸಾಮಾಜಿಕ ಸ್ವಾಸ್ಥ್ಯದೊಂದಿಗೆ ಕುಟುಂಬ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ದಾಸಿಮಯ್ಯ ಅವರ ಕ್ರಮ ಎಲ್ಲರಿಗೂ ಮಾರ್ಗದರ್ಶಿಯಾಗಿದೆ. ತ್ರಿಪದಿಯ ಅಂಶಗಳಿಂದ ಕೂಡಿದ ಅವರ ಅನೇಕ ವಚನಗಳು ಕುಟುಂಬ ಪರ, ಸ್ತ್ರೀಪರ ಮತ್ತು ದೀನದಲಿತರ ಪರ ನಿಲುವನ್ನು ಹೊಂದಿವೆ.

ಬಸವಣ್ಣನವರ ಹಿರಿಯ ಸಮಕಾಲೀನರಾದ ಜೇಡರ ದಾಸಿಮಯ್ಯನವರು ವಚನ ಸಾಹಿತ್ಯದ ಅರುಣೋದಯ ಕಾಲದಲ್ಲಿ ರಚಿಸಿದ ವಚನಗಳು ಸಾರ್ವಕಾಲಿಕವಾಗಿ ಅಸ್ತಿತ್ವದಲ್ಲಿರುವ ಶಕ್ತಿಯನ್ನು ಹೊಂದಿವೆ. ಅವು ವ್ಯಷ್ಟಿ ಪ್ರಜ್ಞೆಯಿಂದ ಸಮಷ್ಟಿ ಪ್ರಜ್ಞೆಯ ಕಡೆಗೆ ನಿಧಾನವಾಗಿ ಸಾಗುವ ಕ್ರಮ ಕಾವ್ಯದ ಗಂಭೀರತೆಯ ದ್ಯೋತಕವಾಗಿದೆ. ವಚನ ಸಾಹಿತ್ಯಕ್ಕೆ ಜನಪದ ಜೀವನ ವಿಧಾನ ಮತ್ತು ಜನಪದ ಕಾವ್ಯ ಪ್ರಮುಖ ಹಿನ್ನೆಲೆಯಾಗಿವೆ. ಜನಪದ ಮೌಲ್ಯಗಳು ವಚನ ಸಾಹಿತ್ಯದ ಮೂಲಾಧಾರಗಳಾಗಿವೆ. ವಚನಕಾರರ ನಡೆ ನುಡಿ ಸಿದ್ಧಾಂತ ಕೂಡ ನಮ್ಮ ಹಳ್ಳಿಗಾಡಿನ ಸುಸಂಸ್ಕೃತ ಜನರ ಜೀವನಕ್ರಮಕ್ಕೆ ಅನುಗುಣವಾಗಿಯೇ ಇದೆ.

ಜೇಡರ ದಾಸಿಮಯ್ಯನವರು ಬಸವಣ್ಣನವರ ಹಿರಿಯ ಸಮಕಾಲೀನರು ಎನ್ನುವುದಕ್ಕೆ ದುಗ್ಗಳೆಯ ಸಿಕ್ಕ ಎರಡು ವಚನಗಳೇ ಸಾಕ್ಷಿಯಾಗಿವೆ. ಆಕೆ ತನ್ನ ವಚನಗಳಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಮರುಳಶಂಕರದೇವ, ಸಿದ್ಧರಾಮಯ್ಯ, ಅಜಗಣ್ಣ ಅವರನ್ನು ಸ್ಮರಿಸಿದ್ದಾಳೆ.

ಚಿಮೂ ತಕರಾರು ಏನು?

ಜೇಡರ ದಾಸಿಮಯ್ಯ ಅವರನ್ನು 'ದೇವರ ದಾಸಿಮಯ್ಯ' ಎಂದು ಕರೆಯುವುದಕ್ಕೆ, ಸಂಶೋಧಕರಾದ ಡಾ.ಎಂ.ಚಿದಾನಂದಮೂರ್ತಿ ಅವರು ಅನೇಕ ವರ್ಷಗಳಿಂದ ತಮ್ಮ ಅಸಮಾಧಾನವನ್ನು ಬರವಣಿಗೆ ಮೂಲಕ ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಮಾರ್ಚ್ 25ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸರ್ಕಾರದ ವತಿಯಿಂದ ಆಯೋಜಿಸಿದ್ದ 'ಆದ್ಯ ವಚನಕಾರ ದೇವರ ದಾಸಿಮಯ್ಯ ಜಯಂತಿ' ಕಾರ್ಯಕ್ರಮದಲ್ಲಿ ಅವರ ಈ ಅಸಮಾಧಾನ ಅತಿರೇಕಕ್ಕೆ ಹೋಗಿ ಅಸಹ್ಯ ಪ್ರತಿಭಟನೆಗೆ ಇಳಿದದ್ದು, ಅವರು ಔಚಿತ್ಯಪ್ರಜ್ಞೆ ಕಳೆದುಕೊಂಡದ್ದರ ಪರಿಣಾಮವಾಗಿದೆ. 'ದೇವರ ದಾಸಿಮಯ್ಯ ವಚನಕಾರನೇ ಅಲ್ಲ; ಜೇಡರ ದಾಸಿಮಯ್ಯ ಆದ್ಯ ವಚನಕಾರ' ಎಂದು ಅವರು ಮತ್ತು ಅವರ ಜೊತೆಗಾರರು ಗಲಾಟೆ ಮಾಡಿದಾಗ ಪೊಲೀಸರು ಅವರನ್ನು ಸಭಾಂಗಣದ ಹೊರಗೆ ಒಯ್ದಿದ್ದಾರೆ. ಅವರ ಈ ವರ್ತನೆ ಸಾರಸ್ವತಲೋಕದವರನ್ನು ತಲೆತಗ್ಗಿಸುವಂತೆ ಮಾಡಿದೆ.

ಆ ಬಗ್ಗೆ ಪ್ರತಿಕ್ರಿಯೆ ನೀಡಿದ ಸಚಿವೆ ಉಮಾಶ್ರೀ 'ದೇವರ ದಾಸಿಮಯ್ಯ ವಚನಕಾರನೇ ಅಲ್ಲ ಎಂದು ಚಿದಾನಂದಮೂರ್ತಿ ಹೇಳುತ್ತಿದ್ದಾರೆ. ಕೆಲ ಸಾಹಿತಿಗಳು ಆತನೆ ಆದ್ಯ ವಚನಕಾರ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ವಿಕಾವಿಕಿ ತೀರ್ಮಾನ ಮಾಡುವಂತಿಲ್ಲ, ತಜ್ಞರಿಂದ ಪರಿಶೀಲನೆ ನಡೆಸಲಾಗುವುದು. ಬಹುಸಂಖ್ಯಾತ ನೇಕಾರರ ಬಹು ದಿನದ ಬೇಡಿಕೆಯಂತೆ ಸರ್ಕಾರ ಈ ಕಾರ್ಯಕ್ರಮ ಆಯೋಜಿಸಿದೆ. ಕಾರ್ಯಕ್ರಮದ ಬಗ್ಗೆ ಗೊಂದಲ ಸೃಷ್ಟಿಸುವುದು ಬೇಡ ಎಂದು ಚಿದಾನಂದಮೂರ್ತಿ ಅವರಲ್ಲಿ ಮನವಿ ಮಾಡಿಕೊಂಡಿದ್ದೆ, ಅವರು ಸಭಿಕರ ಸಾಲಿನಲ್ಲಿ ಕುಳಿತುಕೊಳ್ಳುವುದಾಗಿ ಹೇಳಿದ್ದರು. ಆದರೆ ಕಾರ್ಯಕ್ರಮದ ನಡುವೆ ಗೊಂದಲ ಉಂಟುಮಾಡಿದ ಕಾರಣ ಪೊಲೀಸರು ಕರೆದೊಯ್ದರು' ಎಂದು ಔಚಿತ್ಯಪೂರ್ಣವಾಗಿ ತಿಳಿಸಿದ್ದಾರೆ.

'ದುಗ್ಗಳೆ ಜೇಡರ ದಾಸಿಮಯ್ಯನ ಪತ್ನಿ, ಆಕೆಯನ್ನು ದೇವರ ದಾಸಿಮಯ್ಯನ ಪತ್ನಿ ಎಂದು ಬಿಂಬಿಸುತ್ತಿರುವುದು ಸ್ತ್ರೀ ಕುಲಕ್ಕೆ ಮಾಡುತ್ತಿರುವ ಅವಮಾನ' ಎಂದು ಜೊತೆಗಿದ್ದ ಹಿರಿಯ ವಕೀಲರಾದ ಪ್ರಮೀಳಾ ನೇಸರ್ಗಿ ಅವರು ಚಿದಾನಂದಮೂರ್ತಿ ಅವರನ್ನು ಬೆಂಬಲಿಸಿದ್ದಾರೆ. ಇದೇ ಮಾತನ್ನು ಚಿದಾನಂದಮೂರ್ತಿ ಅವರು ಈ ಹಿಂದೆ ಅನೇಕ ಬಾರಿ ಹೇಳಿದ್ದಾರೆ.

11ನೇ ಶತಮಾನದ ಶೈವಗುರು ದೇವರ ದಾಸಿಮಯ್ಯನ ಕಾಲಕ್ಕೆ ವಚನಕಾರರ ಚಳವಳಿಯೇ ಇರಲಿಲ್ಲ. ಆತ ಇಮ್ಮಡಿ ಜಯಸಿಂಹ(ಒಂದನೇ ಜಗದೇಕಮಲ್ಲ)ನ ಪಟ್ಟಮಹಿಷಿ ಸುಗ್ಗಲಾದೇವಿಗೆ ಶಿವದೀಕ್ಷೆ ನೀಡಿದ ಗುರು. ಆತ ಎಂದಿಗೂ ಆದ್ಯ ವಚನಕಾರ ಆಗಲಾರ. 'ಆದ್ಯ ವಚನಕಾರ ದೇವರ ದಾಸಿಮಯ್ಯ ಜಯಂತಿ' ಎಂದರೆ ಜೇಡರ ದಾಸಿಮಯ್ಯನವರ ಜಯಂತಿ ಎಂದು ತಿಳಿದುಕೊಳ್ಳುವಷ್ಟು ಜನ ಪ್ರಾಜ್ಞರಾಗಿದ್ದಾರೆ ಎಂಬುದನ್ನು ಈ ಸಂಶೋಧಕರು ಅರಿತುಕೊಳ್ಳುವುದು ಅವಶ್ಯವಾಗಿದೆ. 'ಆದ್ಯ ವಚನಕಾರ' ಎಂಬುದನ್ನು ಬಿಟ್ಟು ಕೇವಲ 'ದೇವರ ದಾಸಿಮಯ್ಯ ಜಯಂತಿ' ಎಂದು ಕರೆದಿದ್ದರೆ ಗೊಂದಲವಾಗುತ್ತದೆ ಎಂದು ಹೇಳಬಹುದಿತ್ತು, ಅಂಥ ಪ್ರಸಂಗದಲ್ಲಿ ದುಗ್ಗಳೆಯ ಬಗ್ಗೆ ಪ್ರಮೀಳಾ ನೇಸರ್ಗಿ ಅವರು ಕನಿಕರ ತೋರಬಹುದಿತ್ತು.

"ಮೂದೇವರ ಮೂಲಸ್ಥಾನವಯ್ಯಾ ಬಸವಣ್ಣನು" ಎಂದು ಅಕ್ಕಮಹಾದೇವಿ ಹೇಳಿದ್ದಾಳೆ. ಈ ವಾಕ್ಯವನ್ನೇ ಜಾಲಾಡಿಸುತ್ತ 'ಹಾಗಾದರೆ ಚನ್ನಮಲ್ಲಿಕಾರ್ಜುನ ಎಲ್ಲಿ ಹೋದ' ಎಂದು ಕೇಳಿದಂತೆ ಇವರ ವಾದ. ಹರಿಹರ 'ಬಸವರಾಜದೇವರ ರಗಳೆ' ಎಂದು ಏಕೆ ಬರೆದ? ಬಸವಣ್ಣನವರು ರಾಜರಾಗಿದ್ದರೆ? ದೇವರು ಆಗಿದ್ದರೆ? ಎಂದು ಪ್ರಶ್ನಿಸಿದಂತಿದೆ ಇವರ ತಕರಾರು.

ಬಸವ ಸಮಾಜವಾದ 'ಶರಣಸಂಕುಲ'ದಲ್ಲಿ ಜೇಡರ, ಸಮಗಾರ, ಮಾದಾರ ಮುಂತಾದ ಪದಗಳು ಜಾತಿ ಸೂಚಕವಾಗಿರದೆ ಕಾಯಕ ಸೂಚಕಗಳಾಗಿದ್ದವು. ಆದರೆ ಇಂದಿನ ಮನುವಾದಿ ಸಮಾಜದಲ್ಲಿ ಅವು ಜಾತಿಸೂಚಕಗಳಾಗಿವೆ. ಅಗಸ, ಹಜಾಮ, ಜೇಡರ, ಸಮಗಾರ, ಹೊಲೆಯ, ಮಾದಿಗ ಮುಂತಾದ ಜಾತಿ ಸೂಚಕ ಪದಗಳ ಮೂಲಕ ತಿವಿದಾಗ ಆಯಾ ಸಮಾಜದವರಿಗೆ ಆಗುವ ನೋವಿನ ಬಗ್ಗೆ ಸಂವೇದನೆ ಇಲ್ಲದವರು ಚಿದಾನಂದ ಮೂರ್ತಿಗಳಂಥ ಔಚಿತ್ಯವಿಲ್ಲದ ಸಂಶೋಧಕರಾಗುತ್ತಾರೆ.

ಬಡವರ ಪಕ್ಷಪಾತಿಯಾಗಿದ್ದ ಜೇಡರ ದಾಸಿಮಯ್ಯನವರು ಬಡವರ ಮತ್ತು ಅಪಮಾನಕ್ಕೊಳಗಾದವರ ದೃಷ್ಟಿಯಲ್ಲಿ ನಡೆದಾಡುವ ದೇವರೇ ಆಗಿದ್ದರು. ತಮಗಾಗಿ ದೇವರನ್ನೇ ಪ್ರಶ್ನಿಸುವವರನ್ನು ಬಡವರು ದೇವರಂತೆಯೆ ಕಾಣುತ್ತಾರೆ. ಆದ್ದರಿಂದ ಕಷ್ಟಜೀವಿಗಳಾದ ನೇಕಾರರ ದೃಷ್ಟಿಯಲ್ಲಿ ಜೇಡರ ದಾಸಿಮಯ್ಯನವರು 'ಆದ್ಯ ವಚನಕಾರ ದೇವರ ದಾಸಿಮಯ್ಯ' ಆಗದೆ ಇನ್ನೇನಾಗುತ್ತಾರೆ? 'ದೇವರ ದಾಸಿಮಯ್ಯ ಬೇರೆ, ಆದ್ಯ ವಚನಕಾರ ದೇವರ ದಾಸಿಮಯ್ಯ ಬೇರೆ' ಎಂದು ಹೇಳುವಷ್ಟು ಸೌಜನ್ಯವಿಲ್ಲವೆ ನಮ್ಮ ಸಂಶೋಧಕರಲ್ಲಿ?

ಡಾ. ಫ.ಗು. ಹಳಕಟ್ಟಿಯವರು ದೇವರ ದಾಸಿಮಯ್ಯ ಎಂದೇ ಬರೆದಿದ್ದಾರೆ. ಜೇಡರ ದಾಸಿಮಯ್ಯನಿಗೆ ದಾಸ, ದಾಸಿಮ, ದಾಸಿಮಾರ್ಯ, ದೇವರದಾಸ, ಜೇಡರದಾಸ, ದೇವರ ದಾಸಿಮಯ್ಯ ಮೊದಲಾದ ಹೆಸರುಗಳು ಇದ್ದುದು ಕಂಡುಬರುತ್ತವೆ ಎಂದು ಸಂಶೋಧಕ ಎಸ್.ಬಸವಾರಾಧ್ಯ ಅವರು ತಿಳಿಸಿದ್ದಾರೆ. ಎಚ್. ದೇವೀರಪ್ಪ ಅವರು ಸಕಲ ಪುರಾತನರ ವಚನ ಕಟ್ಟಿನ ಮೂಲಕ ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಬೇರೆ ಎಂಬುದನ್ನು ಎತ್ತಿ ತೋರಿಸಿದರು.

ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರದಲ್ಲಿ, ದೇವರದಾಸಯ್ಯಗಳೆಂಬ ಶರಣರು ಹೊಟ್ಟಲಕೆರೆಯಲ್ಲಿ ಸುಗ್ಗಲದೇವಿಯರಿಗೆ ಗುರುವಾಗಿದ್ದರು ಮತ್ತು ಮುದನೂರಿನಲ್ಲಿದ್ದ ನೈಗೆಯ ಸಂಕಣ್ಣ ಶಿವದೇವಿಯ ಮಗಳು ದುಗ್ಗಮ್ಮನನ್ನು ಮದುವೆಯಾದರು ಎಂಬ ವಿಚಾರ ಬರುತ್ತದೆ. ಆದರೆ ಸುಗ್ಗಲದೇವಿಯ ಕುರಿತು 1029ರ ವಿಜಾಪುರ ಜಿಲ್ಲೆಯ ದೇವೂರಿನ ಶಾಸನ ತಿಳಿಸುವುದರಿಂದ ಈ ಕಥೆ ಗೊಂದಲದಿಂದ ಕೂಡಿದೆ ಎಂಬುದು ಮೇಲ್ನೋಟಕ್ಕೇ ಸಾಬೀತಾಗುತ್ತದೆ.


ಇಷ್ಟೆಲ್ಲ ಗೊಂದಲಗಳು ಹಿಂದಿನ ಶತಮಾನಗಳ ಕವಿಗಳಲ್ಲಿ ಮತ್ತು 20ನೇ ಶತಮಾನದ ಸಂಶೋಧಕರಲ್ಲಿ ಇರುವಾಗ ಜನಸಾಮಾನ್ಯರ ಭಾವನೆಗಳಿಗೆ ಧಕ್ಕೆಯಾಗುವಂತೆ ನಡೆದುಕೊಳ್ಳುವ ಸಂಶೋಧಕರಿಗೆ ವ್ಯವಹಾರ ಜ್ಞಾನ ಇಲ್ಲ ಎಂದೇ ಹೇಳಬೇಕಾಗುತ್ತದೆ.

ಶೈವಗುರು ದೇವರ ದಾಸಿಮಯ್ಯ ಬೇರೆ ಮತ್ತು 'ಆದ್ಯ ವಚನಕಾರ ದೇವರ ದಾಸಿಮಯ್ಯ' ಎಂದು ಜನರು ಭಾವಪೂರ್ಣವಾಗಿ ಕರೆಯುವ ಜೇಡರ ದಾಸಿಮಯ್ಯನವರು ಬೇರೆ ಎಂದು ಹೇಳಿದರೆ ಸಾಕಲ್ಲವೆ?

■ ರಂಜಾನ್ ದರ್ಗಾ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಸಾವಿನಲ್ಲೂ ಜಾತಿ ಸೋರಗಿದ ಪ್ರೀತಿ





ಬೀದಿಗಿಳಿದ ಆರ್. ಅಶೋಕ್, ಸಂಸದ ಡಿ.ಕೆ. ಸುರೇಶ್, ಎಸ್.ಎಂ. ಕೃಷ್ಣ, ಅಪ್ಪಾಜಿ ಗೌಡ

ದುರಂತನಾಯಕ ಡಿ.ಕೆ. ರವಿಯವರ ಜಾತಿ ನೋಡಿಯೇ ಜನ ಅವರ ಸಾವಿನ ವಿರುದ್ಧ ಬೀದಿಗಿಳಿದರೆ? ಹಾಗಾದರೆ ಅವರ ಪ್ರಾಮಾಣಿಕತೆ, ದಕ್ಷತೆ, ಜನಕಾಳಜಿಗೆ ಯಾವುದೇ ಬೆಲೆಯಿಲ್ಲವೆ? ಜನ ಅವರ ಪರಿಶ್ರಮ ಮತ್ತು ಫಲಕ್ಕಾಗಿ ಈ ಪಾಟಿ ಪ್ರೀತಿ ತೋರಿಸಿದ್ದೇ ಆಗಿದ್ದರೆ ಮತ್ತೇಕೆ ಜಾತಿ ತಲೆ ಹಾಕಿತು? ಇಲ್ಲಿ ಜಾತಿ ಮುಖ್ಯವೋ ಅಥವಾ ಪ್ರಾಮಾಣಿಕ ಅಧಿಕಾರಿಯೊಬ್ಬನ ವ್ಯಕ್ತಿತ್ವ ಮುಖ್ಯವೋ?

ಇದು ಒಬ್ಬಿಬ್ಬರ ಪ್ರಶ್ನೆಯಲ್ಲ, ಇವತ್ತು ಬೆಂಗಳೂರಿನ ಗಲ್ಲಿಗಲ್ಲಿಗಳಲ್ಲಿ ರವಿ ಸಾವಿನ ತನಿಖೆಯಾಗುವಂತೆ ಒತ್ತಾಯಿಸಿ ರಾಜ್ಯ ಒಕ್ಕಲಿಗರ ಸಂಘದ ಫ್ಲೆಕ್ಸ್-ಬ್ಯಾನರ್‌ಗಳು ಪ್ರಶ್ನಾರ್ಥಕವೆಂಬಂತೆಯೇ ಕಣ್ಣು ಕುಕ್ಕತೊಡಗಿವೆ. ಬಹುಶಃ ಒಕ್ಕಲಿಗರ ಸಂಘ ಸಿಬಿಐ ತನಿಖೆಗೆ ಒತ್ತಾಯಿಸಿ ಇದೇ ಮಾರ್ಚ್ 20ರ ಶುಕ್ರವಾರ ಬೀದಿಗಿಳಿಯದೇ ಹೋಗಿದ್ದರೆ, ಅದಕ್ಕೂ ಮುನ್ನ ಪತ್ರಿಕೆಗಳಲ್ಲಿ ಸಂಘದ ಹೆಸರಲ್ಲೇ ಜಾಹಿರಾತುಗಳು ಪ್ರಕಟಗೊಳ್ಳದೇ ಇದ್ದಿದ್ದರೆ, ಸಂಘವೇ ಅಧಿಕೃತವಾಗಿ ರವಿ ಭಾವಚಿತ್ರ ಹೊತ್ತ ಕಟೌಟು, ಬ್ಯಾನರ್‌ಗಳ ಅಭಿಯಾನಕ್ಕೆ ಕೈಹಾಕದೇ ಹೋಗಿದ್ದರೆ ರವಿ ಯಾವ ಜಾತಿ ಎಂದು ಯಾರಿಗೆ ತಾನೇ ಗೊತ್ತಿತ್ತು?

ಬಯಸಿಯೋ ಬಯಸದೆಯೋ ಅವರವರದ್ದೇ ಅನಿವಾರ್ಯತೆಯೆಂಬುದು ಯಾರ್ಯಾರನ್ನೋ ಯಾವ್ಯಾವುದೋ ಕಾರಣಕ್ಕೆ ಅಗಲಿಸುತ್ತದೆ, ಜೋಡಿಸುತ್ತದೆ ಮತ್ತು ನಿರ್ಲಿಪ್ತರನ್ನಾಗಿಸಿಬಿಡುತ್ತದೆ!

ಡಿ.ಕೆ. ರವಿ ಕರ್ನಾಟಕದ ಮಣ್ಣಿನ ಮಗ ನಿಜ. ಎಷ್ಟು ಪ್ರಾಮಾಣಿಕನೋ ಅಷ್ಟೇ ದಿಟ್ಟ. ಮದನ್ ಗೋಪಾಲ್, ವಿಜಯ್ ಕುಮಾರ್, ಜೈರಾಜ್, ಚಿರಂಜೀವಿ ಸಿಂಗ್, ಮಣಿವಣ್ಣನ್, ಅಶೋಕ್ ದಳವಾಯಿ, ಸದ್ಯ ಬೆಂಗಳೂರು ಭೂಗಳ್ಳರ ಪಾಲಿಗೆ ಸಿಂಹಸ್ವಪ್ನದಂತಿರುವ ನಗರ ಜಿಲ್ಲಾಧಿಕಾರಿ ಶಂಕರ್; ಇತ್ಯಾದಿ ಅನೇಕ ದಿಟ್ಟ ಐಎಎಸ್ ಅಧಿಕಾರಿಗಳ್ಯಾರೂ ಸಾಧಿಸದ ಜನಪ್ರಿಯತೆ ಮತ್ತು ಹೆಗ್ಗಳಿಕೆಯನ್ನು ಕೇವಲ ಮೂರ್‍ನಾಲ್ಕು ವರ್ಷಗಳಲ್ಲೇ ಸಾಧಿಸಿದ್ದೂ ಅಷ್ಟೇ ಸತ್ಯ. ಇಂಥಾ ದಿಟ್ಟನೊಬ್ಬನ ನಿಗೂಢ ಸಾವಿಗೆ ನಾಡಿಗೆ ನಾಡೇ ಬೀದಿಗಿಳಿಯಿತು: ರವಿ ಕೋಲಾರದಲ್ಲಿ ಕಾರ್ಯ ನಿರ್ವಹಿಸಿದ್ದು ಕೂಡ ದೊಡ್ಡ ಅವಧಿಯೇನಲ್ಲ, ಹೆಚ್ಚೆಂದರೆ ಒಂದೋ ಒಂದೂವರೆ ವರ್ಷವಿರಬಹುದು. ಅಷ್ಟಕ್ಕೇ ರವಿ ಸಾವಿನ ವಿರುದ್ಧ ಕೋಲಾರಕ್ಕೆ ಕೋಲಾರವೇ ಹೊತ್ತಿ ಉರಿಯಿತು.

ಆಂಧ್ರದ ಗಡಿಯ ಕನ್ನಡಿಗರೇ ಇಲ್ಲದ ಬಾಗೇಪಲ್ಲಿ, ಕೆಜಿಎಫ್, ಬಂಗಾರ ಪೇಟೆಯ ನೆಟ್ಟಗೆ ಕನ್ನಡ ಮಾತಾಡಲೂ ಬಾರದ ಊರುಗಳ ರೈತಾಪಿಗಳು ರವಿಗಾಗಿ ಮರುಗಿದ ರೀತಿಯೇ ಮನಕಲಕುವಂತಿತ್ತು. ಶೇ.92ರಷ್ಟು ಒಕ್ಕಲಿಗೇತರರೇ ತುಂಬಿರುವ ಕೋಲಾರ ಜಿಲ್ಲೆಯ ಜನ ಮಂಡ್ಯ, ಮೈಸೂರು, ಹಾಸನ, ಬೆಂಗಳೂರಿನಂಥ ಒಕ್ಕಲಿಗ ಬಾಹುಳ್ಯದ ಜಿಲ್ಲೆಗಳನ್ನೂ ಮೀರಿ ರವಿ ಬಗ್ಗೆ ತೋರಿದ ಪ್ರೀತಿಯಿತ್ತಲ್ಲ ಅದು ಅಪ್ಪಟ ಮನುಷ್ಯ ಸಹಜ ಪ್ರತಿಕ್ರಿಯೆಯಾಗಿತ್ತು, ಹಗಲಿರುಳೆನ್ನದೆ ಬೀದಿಗಿಳಿದು ಜನ ಪ್ರತಿಭಟಿಸುತ್ತಿದ್ದ ರೀತಿಯೇ ರವಿ ವ್ಯಕ್ತಿತ್ವವನ್ನು ಸಾರಿ ಹೇಳುತ್ತಿತ್ತು, ಅದೇ ರೀತಿ ಉತ್ತರ ಕರ್ನಾಟಕದ ಕೊಪ್ಪಳ, ಗುಲಬರ್ಗಾ, ಬೀದರ್‌ಗಳಲ್ಲೂ ಪ್ರಾಮಾಣಿಕ ಅಧಿಕಾರಿಯೊಬ್ಬನ ಸಾವಿನ ವಿರುದ್ಧ ಪ್ರಾಂತ, ಪಕ್ಷ, ಜಾತಿ ಮೀರಿದ ಪ್ರತಿಕ್ರಿಯಿಯಿತ್ತು, ಬಿಜೆಪಿಯ ಹೋರಾಟದ ಬಗ್ಗೆ ಜನ ಏನೇ ಪೂರ್ವಾಗ್ರಹವಿಟ್ಟುಕೊಂಡರೂ ಜೆಡಿಎಸ್ ನಾಯಕ ಕುಮಾರಸ್ವಾಮಿ ಬಗ್ಗೆಯಾಗಲಿ, ದೇವೇಗೌಡರ ಹಾಸಿಗೆ ಮೇಲಿನ ಹೇಳಿಕೆಗಳ ಕುರಿತಾಗಲಿ ಯಾರಲ್ಲೂ ಎರಡು ಮಾತಿರಲಿಲ್ಲ, ಇದು ಹೀಗೇ ಮುಂದುವರಿದಿದ್ದರೆ ಈ ಹೊತ್ತಿಗೆ ಕರ್ನಾಟಕದ ಪರಿಸ್ಥಿತಿ ಏನಾಗುತ್ತಿತ್ತೋ?


ಆದರೆ ಮಾರ್ಚ್ 19ರ ಗುರುವಾರದ ದಿನಪತ್ರಿಕೆಗಳಲ್ಲಿ ಅನಿರೀಕ್ಷಿತ, ಅನಪೇಕ್ಷಿತ ಅಸಹಜವೋ ಎಂಬಂತೆ ಕಾಣಿಸಿಕೊಂಡದ್ದು ರಾಜ್ಯ ಒಕ್ಕಲಿಗರ ಸಂಘದ ಜಾಹಿರಾತು. ಡಿ.ಕೆ. ರವಿ ಸಾವಿನ ಕುರಿತಂತೆ ಸಿಬಿಐ ತನಿಖೆಗೆ ಒತ್ತಾಯಿಸಿ ಮಾರ್ಚ್ 20 ಶುಕ್ರವಾರ ಹಮ್ಮಿಕೊಂಡಿದ್ದ ಮೆರವಣಿಗೆ ಮತ್ತು ಪ್ರತಿಭಟನಾ ರ್‍ಯಾಲಿಯ ಜಾಹಿರಾತದು. ಅಲ್ಲಿಯತನಕ ರವಿ ಯಾವ ಜಾತಿಯೆಂಬುದೇ ಯಾರಿಗೂ ಗೊತ್ತಿರಲಿಲ್ಲ, ಅನೇಕರಿಗೆ ಆತ. ಕರ್ನಾಟಕದ ಅಧಿಕಾರಿಯೆಂಬುದೂ ನಿಕ್ಕಿಯಿರಲಿಲ್ಲ. ಮರುದಿನ ಬೆಳಗ್ಗೆ ವಿ.ವಿ. ಪುರಂನ ಸಂಘದ



ಒಕ್ಕಲಿಗರ ಸಂಘದ ಪ್ರತಿಭಟನೆ



ರವಿ ತಾಯಿಯ ಪಕ್ಕ ಕುಮಾರಸ್ವಾಮಿ



ರವಿ ತಾಯಿಯ ಜೊತೆ ದೇವೇಗೌಡ,

...ದಿಂದ ಸಹಸ್ರಾರು ಒಕ್ಕಲಿಗರು ಫ್ರೀಡಂ ಪಾರ್ಕಿಗೆ ... ಮೆರವಣಿಗೆ ಅಭೂತಪೂರ್ವವಾಗೇ ಇತ್ತು. ...ಷ್ ನಾಯಕ ಕುಮಾರಸ್ವಾಮಿ, ಬಿಜೆಪಿಯ ಆರ್. ...ಕ್ ಸೇರಿದಂತೆ ಸಂಘದ ಅಧ್ಯಕ್ಷ ಡಾ. ಅಪ್ಪಾಜಿ ... ನಿರ್ದೇಶಕರಾದ ಮಂಜೇಗೌಡ, ಪ್ರೊ. ನಾಗರಾಜ್, ...ಕಾಳೇಗೌಡ, ಪೂಜಾರಿ ಪಾಳ್ಯ ಕೃಷ್ಣಮೂರ್ತಿ ಎಲ್ಲರೂ ...ಯಲ್ಲಿದ್ದರು. ಸಾಲದ್ದಕ್ಕೆ ನಂಜಾವಧೂತ ಸ್ವಾಮೀಜಿ ... ಕೆಂಗೇರಿಯ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ!

...ಂದು ಜಾತಿಯಾಗಿ ಸಮೂಹವಾಗಿ ಒಕ್ಕಲಿಗರ ಸಂಘ ...ಜಾತಿಗೆ ಸೇರಿದ ಪ್ರಾಮಾಣಿಕ ಅಧಿಕಾರಿಯೊಬ್ಬನ ... ಕುರಿತಂತೆ ಸಿಬಿಐ ತನಿಖೆಗೆ ಒತ್ತಾಯಿಸಿದ್ದರಲ್ಲಿ ...ಯವೇನಿರಲಿಲ್ಲ. ಹಾಗೆಯೇ ಮಾಜಿ ಡಿಸಿಎಂ ...ಯ ಅಶೋಕ್ ಮತ್ತು ಜೆಡಿಎಸ್ ನಾಯಕ ...ಾರಸ್ವಾಮಿ ಮಾಡಿದ ಭಾಷಣಗಳಲ್ಲೂ ಆಕ್ಷೇಪಾರ್ಹ ...ದ್ದೇನೂ ಕಾಣಿಸಲಿಲ್ಲ, ಆದರೆ ಪರಿಸ್ಥಿತಿಯಿತ್ತಲ್ಲ, ಇಡೀ ...ಟಕವೇ ದಿಟ್ಟ ಅಧಿಕಾರಿಯೊಬ್ಬನ ಪರವಾಗಿ ಆತನ ...ಹಿನ್ನೆಲೆ ಏನನ್ನೂ ಲೆಕ್ಕಿಸದೇ ಕೇವಲ ಆತನ ...ಾಣಿಕತೆ ಮತ್ತು ಜನ ಕಾಳಜಿಯ ಕಾರಣಕ್ಕಾಗೇ ...ಗುತ್ತಿರುವಾಗ ಒಕ್ಕಲಿಗರ ಸಂಘ ಜಾತಿಯ ಕಾರಣ ...ಮ ಬೀದಿಗಿಳಿಯುವ ಅನಿವಾರ್ಯತೆಯೇನಿತ್ತು?

...ವರನಟ ರಾಜ್‌ಕುಮಾರ್ ಅಪಹರಣವಾದಾಗಲೂ ..., ಆಸು ನೀಗಿದಾಗಲೂ ಅಷ್ಟೇ, ನಾಡಿಗೆ ನಾಡೇ ...ಸನಾತ್ಮಕವಾಗಿ ಬೀದಿಗಿಳಿದಿತ್ತು. ರಾಜ್ ನಂತರ ಜನ ...ಾದ್ದೊಂದು ಭಾವುಕತೆ ಮೆರೆದಿದ್ದು ರವಿಯ ವಿಷಯಕ್ಕೆ ...ಶ್ರ. ಆವತ್ತು ಈಡಿಗರ ಸಂಘವೇನಾದರೂ ರಾಜ್ ... ಜಾತಿಯೆಂದೋ ಆ ಕಾರಣಕ್ಕೇ ಬೀದಿಗಿಳಿಯುವ ...ತೋ ಮಾಡಿದ್ದರೆ ಅದು ರಾಜ್ ವ್ಯಕ್ತಿತ್ವಕ್ಕೇ ಮಾಡಿದ ...ಚಾರವಾಗುತ್ತಿತ್ತಲ್ಲವೇ?

...ಈಗ ಏಕಾಏಕಿ ಒಕ್ಕಲಿಗರ ಸಂಘ ರವಿ ವಿಷಯದಲ್ಲಿ ...ಗಿಳಿದಿದ್ದರ ಪರಿಣಾಮ ಬೇರೆಯದೇ ತಿರುವೊಂದಕ್ಕೆ ...ಣವಾಯಿತು. ಮೈಸೂರು, ಹಾಸನ, ಮಂಡ್ಯಗಳಲ್ಲಿ ...ಪುಟ್ಟ ಒಕ್ಕಲಿಗ ಸಂಘಟನೆಗಳೂ ರವಿ ಭಾವಚಿತ್ರ ...ತ್ತು ಬೀದಿಗಿಳಿದವು. ತುಮಕೂರಿನ ಕುಣಿಗಲ್, ...ಿಯೂರುದುರ್ಗ, ಗುಬ್ಬಿ, ಕೊರಟಗೆರೆಯಂಥ ...ಮಗಳಲ್ಲೂ ಒಕ್ಕಲಿಗರ ಸಂಘಟನೆಗಳೇ ಮುಂದೆ ನಿಂತು ...ಭಟಿಸಬೇಕಾಯಿತು. ಯುಗಾದಿಯ ಹೊತ್ತಿಗೆ ಡಿ.ಕೆ. ... ಓರ್ವ ಒಕ್ಕಲಿಗರೆಂದೂ ಜಾತಿಯ ಕಾರಣಕ್ಕಾಗೇ ...ಲಿಗರ ಸಂಘ, ಕುಮಾರಸ್ವಾಮಿ, ಆರ್. ಅಶೋಕ್, ...ೇಗೌಡ ಇತ್ಯಾದಿಗಳೆಲ್ಲ ಬೀದಿಗಿಳಿದಿದ್ದಾರೆಂದೂ ...ಸನಿತವಾಗಿ ಹೋಗಿತ್ತು.


ದಲಿತರ ಮನೇಲಿ ಉಂಡ ಕಾರಣಕ್ಕೇ ನಾವು ಬಹಿಷ್ಕಾರ ಹಾಕಬೇಕಿತ್ತೆ?

ಇದನ್ನೇ ದುರಂತ ಅನ್ನೋದು. ಮಂತ್ರಿ ಆಂಜನೇಯ ದಲಿತರ ಬಗ್ಗೆ ಭಾಷಣ ಬಿಗಿದರೆ, ಅಂಬೇಡ್ಕರ್ ವಾದದ ಕುರಿತಂತೆ ಡೈಲಾಗ್ ಹೊಡೆದರೆ ಅದನ್ನು ಮಹಾನ್ ಕ್ರಾಂತಿ ಎಂಬಂತೆ ಬಿಂಬಿಸುತ್ತಾರೆ. ಇನ್ನಾರೋ 'ಅಹಿಂದ' ಎಂದರೆ ಅದನ್ನು 'ಸಾಮಾಜಿಕ ನ್ಯಾಯ' ಎಂದು ಬಣ್ಣ ಕಟ್ಟುತ್ತಾರೆ. ಆದರೆ ಒಕ್ಕಲಿಗನೊಬ್ಬನಿಗೆ ಆದ ಅನ್ಯಾಯದ ವಿರುದ್ಧ ಮತ್ತೊಬ್ಬ ಒಕ್ಕಲಿಗ ದನಿ ಎತ್ತಿದ ಮಾತ್ರಕ್ಕೆ ಅದಕ್ಕೆ ಜಾತಿಯತೆಯ ಕಳಂಕ ತಟ್ಟುತ್ತದೆ. ಹಾಗಾದರೆ ದಲಿತ ಹೋರಾಟಗಾರನೊಬ್ಬ ಒಕ್ಕಲಿಗ ಮಹಿಳೆ ಮೇಲಾದ ದೌರ್ಜನ್ಯವನ್ನು ಕಂಡೂ ಕಾಣದಂತೆ ಇರಬೇಕೆಂದೇ ಅರ್ಥ.....?

ಅಹಿಂದ ನಾಯಕನೊಬ್ಬ ಬಡ ಒಕ್ಕಲಿಗನೊಬ್ಬನ ದುರ್ಗತಿಗೆ ಮರುಗುವುದು ಈ ವ್ಯವಸ್ಥೆಯಲ್ಲಿ ಸಾಧ್ಯವೇ ಇಲ್ಲವೆ? ಡಿ.ಕೆ. ರವಿ ನಮ್ಮ ಒಕ್ಕಲಿಗರ ಸಂಘದ ವಿದ್ಯಾರ್ಥಿನಿಲಯದಲ್ಲಿದ್ದು ಓದಿದ ವಿದ್ಯಾರ್ಥಿ. ಅಂಥವನಿಗೆ ವ್ಯವಸ್ಥೆಯಿಂದ ಅನ್ಯಾಯವಾಗಿರಬಹುದು ಎಂಬ ಕಾರಣಕ್ಕಾಗೇ ಒಕ್ಕಲಿಗರ ಸಂಘ ಬೀದಿಗಿಳಿಯಬೇಕಾಗಿ ಬಂತೇ ಹೊರತು ಆತನಿಗೆ ಲಂಚ ಹೊಡೆಯಲು ಅವಕಾಶ ಕಲ್ಪಿಸಿ ಎಂದೋ ಆತನ ಮೇಲಿನ ಆರೋಪ ಕೈಬಿಡಿ ಅಥವಾ ಆಯಕಟ್ಟಿನ ಆಮದನಿಯಿರುವ ಹುದ್ದೆ ನೀಡಿ ಎಂದೋ ಸಂಘ ಬೀದಿಗಿಳಿದಿಲ್ಲ. ಕನಿಷ್ಠ ಆತನ ಸಾವಿಗೂ ದನಿಯೆತ್ತಬಾರದೆಂದರೆ ಅದ್ಯಾವ ನ್ಯಾಯ?

ಆಯ್ತು, ಆತನ ದುರಂತ ಕಂಡೂ ಒಕ್ಕಲಿಗರ ಸಂಘ ಕೈಕಟ್ಟಿ ಕೂತಿತ್ತೆಂದೇ ಭಾವಿಸೋಣ. ನಾಳೆ ಇನ್ನಾರೋ, ಪಾಪ ತಮ್ಮ ಜಾತಿಯವನನ್ನು ಕೊಂದರೂ ಸಂಘದ ಜನ ಆ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ, ಜಾತಿ ಹೆಸರಲ್ಲಿ ಲಾಭ ಮಾತ್ರ ಮಾಡಿಕೊಳ್ಳುತ್ತಾರೆ, ಅನ್ಯಾಯವಾದಾಗ ಹೇಡಿಗಳಂತೆ ಕೂತಿರುತ್ತಾರೆ ಎಂದು ದೂರುವುದಿಲ್ಲವೆ? ರವಿ ಯಾವತ್ತೂ ಜಾತಿಯಿಂದ ಗುರುತಿಸಿಕೊಂಡವರಲ್ಲ, ತಾನು ಯಾವ ಜಾತಿಗೆ ಸೇರಿದವನೆಂದು ಯಾರಿಗೂ ಹೇಳಿಕೊಂಡವರಲ್ಲ, ಜಾತಿ ನೋಡಿದ್ದರೆ ಪತ್ನಿ ಸಮೇತ ದಲಿತರ ಮನೆಗೆ ಹೋಗಿ ಊಟ ಮಾಡುತ್ತಿರಲಿಲ್ಲ, ಈಗ ಒಕ್ಕಲಿಗರ ಸಂಘವೇನಾದರೂ ಬೀದಿಗಿಳಿಯದೇ ಹೋಗಿದ್ದರೆ, ಯಾವ ಜನ ಇವತ್ತು ಸಂಘದ ಮೇಲೆ ಜಾತಿ ಲಾಬಿಯ ಕಳಂಕ ಹೊರಿಸುತ್ತಿದ್ದಾರೋ ಅದೇ ಜನ; ಪಾಪ ರವಿ ದಲಿತರ ಮನೆಗೆ ಹೋಗಿ ಊಟ ಮಾಡಿ ಜಾತಿ ಕೆಟ್ಟ ಕಾರಣಕ್ಕೇ ಒಕ್ಕಲಿಗರ ಸಂಘದವರು ಆತನಿಗಾದ ಅನ್ಯಾಯದ ವಿರುದ್ಧ ಚಕಾರವೆತ್ತುತ್ತಿಲ್ಲ ಎಂದೂ ದೂರುತ್ತಿರಲಿಲ್ಲವೆ?

ಜನ ಏನು ಮಾಡಿದರೂ ಅದಕ್ಕೊಂದು ಕೊಂಕು, ಕುಚೋದ್ಯ ಮಾಡುತ್ತಾರೆ. ಸುಮ್ಮನಿದ್ದರೆ ಕೊಂದವರ ಜೊತೆ ಕೈಜೋಡಿಸಿದ ಆರೋಪ, ಬೀದಿಗಿಳಿದರೆ ಜಾತಿಯ ಪಟ್ಟ. ನಾವು ಇನ್ನೇನು ಮಾಡಬೇಕಿತ್ತು ನೀವೇ ಹೇಳಿ. ರವಿ ಲೂಟಿ ಹೊಡೆಯಲು ಅವಕಾಶ ಕೊಡಿ ಎಂದೇನಾದರೂ ಸಂಘ ಬೀದಿಗಿಳಿದಿದೆಯಾ? ಆತನನ್ನು ಅನ್ಯಾಯವಾಗಿ ಕೊಂದಿರಬೇಕೆಂದು ಸಿಬಿಐ ತನಿಖೆಗೆ ಒತ್ತಾಯಿಸಿದ್ದೇ ನಮ್ಮ ತಪ್ಪು ಅನ್ನುವುದಾದರೆ ಆತ ದಲಿತರ ಮನೆಗೆ ಹೋಗಿ ಊಟ ಮಾಡಿದ ಎಂದು ಜಾತಿಯಿಂದ ಬಹಿಷ್ಕಾರ ಹಾಕಬೇಕಿತ್ತು ಅಂತಾನಾ ಅರ್ಥ? ಒಕ್ಕಲಿಗರಿಗೆ ಮನುಷ್ಯತ್ವವನ್ನು ಯಾರೂ ಕಲಿಸಬೇಕಿಲ್ಲ...!




-ಪ್ರೊ. ಎಂ. ನಾಗರಾಜ್

ಮಾಜಿ ಪ್ರಧಾನ ಕಾರ್ಯದರ್ಶಿ, ಹಾಲಿ ನಿರ್ದೇಶಕರು, ರಾಜ್ಯ ಒಕ್ಕಲಿಗರ ಸಂಘ

ಬಹುಶಃ ಯಾರಾದರೂ ಸೂಕ್ಷ್ಮವಾಗಿ ಗಮನಿಸಿದ್ದರೆ ಕೇವಲ ಒಂದು ವಾರದಲ್ಲಿ ರವಿ ಸಾವಿನ ಕುರಿತಂತೆ ನಡೆಯುತ್ತಿದ್ದ ಪ್ರತಿಭಟನೆ, ಹೋರಾಟಗಳಲ್ಲಿ ಸೂಕ್ಷ್ಮ ಬದಲಾವಣೆಯೊಂದು ಗೋಚರಿಸುತ್ತಿತ್ತು. ಕೋಲಾರದ ಮಟ್ಟಿಗಂತೂ ಅದು ನಿಚ್ಚಳವಾಗೇ ಇತ್ತು, ಆತನಕ ಹೋರಾಟದ ಮುಂಚೂಣಿಯಲ್ಲಿದ್ದ ದಲಿತ ಸಮೂಹ ಕಾಲಕ್ರಮೇಣ ಹಿಂಜರಿದಿತ್ತು. ಕೋಲಾರದ ಶೇ.92ರಷ್ಟಿದ್ದ ಒಕ್ಕಲಿಗೇತರರ ಪೈಕಿ ಬಲಿಜ, ಕುರುಬ, ದಲಿತ, ಮುಸ್ಲಿಂ ಇತ್ಯಾದಿ ಸಮೂಹಗಳೆಲ್ಲ ಪ್ರತಿಭಟನಾ ದೃಶ್ಯದಿಂದ ಸದ್ದಿಲ್ಲದೆ ಕಣ್ಮರೆಯಾದವು. ಮಿಕ್ಕಂತೆ ರವಿ ಸಾವಿನ ಬಗ್ಗೆ ಸಿಬಿಐ ತನಿಖೆಗೆ ಒತ್ತಾಯಿಸಿ ನಡೆಯುತ್ತಿದ್ದ ಪ್ರತಿಭಟನೆಗಳಲ್ಲಿ ಬಿಜೆಪಿ, ಜೆಡಿಎಸ್ ಮತ್ತು ಒಕ್ಕಲಿಗ ಸಂಘಟನೆಗಳಷ್ಟೇ ಕಾಣಿಸುತ್ತಿದ್ದವು.

ಇದು ಒಕ್ಕಲಿಗರ ಸಂಘದ ದುಡುಕಿನಿಂದಾದ ಅಡ್ಡ ಪರಿಣಾಮ. ನಂದಿತಾ ಸಾವನ್ನು ರಾಜಕೀಯಕ್ಕೆಳೆದು ಈ ಹೊತ್ತಿಗಾಗಲೇ ಮಲೆನಾಡಿನಲ್ಲಿ ಮುಖಭಂಗಕ್ಕೀಡಾಗಿದ್ದ ಬಿಜೆಪಿಗೆ ರವಿ ಸಾವು ಕೂಡ ರಾಜಕೀಯ ದಾಳವಾಗೇ ಬಳಕೆಯಾಗಿದ್ದು ಜನಕ್ಕೆ ಗೊತ್ತಿತ್ತು. ದೇವೇಗೌಡ, ಕುಮಾರಸ್ವಾಮಿಗೆ ಜಾತಿಯಿಲ್ಲದೆ ಬೇಳೆ ಬೇಯುವುದು ಕಷ್ಟವೆಂಬುದು ರಹಸ್ಯವೇನಲ್ಲ, ಆದರೆ ಒಕ್ಕಲಿಗರ ಸಂಘ ಮತ್ತು ಆದಿಚುಂಚನಗಿರಿ ಮಠಗಳು ಹಾಗಲ್ಲ, ರಾಜಕಾರಣವನ್ನು ಮೀರಿದ ಸಾಮಾಜಿಕ ಅಸ್ತಿತ್ವ ಅವುಗಳಿಗಿದೆ. ಈ ನಿಟ್ಟಿನಲ್ಲಿ ನಿರ್ಮಲನಾಥ ಸ್ವಾಮೀಜಿ ದುಡುಕಲಿಲ್ಲ, ಏಕೆಂದರೆ ಜಾತಿ ಮೀರಿದ ಜನಪ್ರಿಯತೆ ರವಿಗಿದ್ದದ್ದು ಮತ್ತು ಜಾತಿ ಮೂಗು ತೂರಿತೆಂದರೆ ಅದರ ಅಪಾಯದ ಅರಿವಿದ್ದದ್ದು.

ಒಕ್ಕಲಿಗರ ಸಂಘ ಬೀದಿಗಿಳಿದ ಫಲವೋ ಎಂಬಂತೆ ಮಾರ್ಚ್ 20ರ ನಂತರ ಪ್ರಕರಣಕ್ಕೆ ಬೇರೆಯದೇ ಆಯಾಮವೊಂದು ಸೃಷ್ಟಿಗೊಂಡಿತ್ತು, ಎಲ್ಲಿ ಅಪ್ಪ ಮಕ್ಕಳೇ ಇದರ ಲಾಭ ಪಡೆಯುತ್ತಾರೋ ಎಂದು ಎಸ್.ಎಂ. ಕೃಷ್ಣರ ರಂಗಪ್ರವೇಶವಾಯಿತು. ರವಿ ತಂದೆತಾಯಿಗಳನ್ನು ಭಾರೀ ಪ್ರಚಾರದೊಂದಿಗೇ ಭೇಟಿ ಮಾಡಿದ ಕೃಷ್ಣ ಇತ್ತ ಬೆಂಗಳೂರಿಗೆ ಬಂದು ರವಿ ಮಾವ ಹನುಮಂತರಾಯಪ್ಪರನ್ನು ಸಂತೈಸುವ 'ಏಕಾಂಕ' ನಟಿಸಬೇಕಾಯಿತು. ಒಂದೆಡೆ ಡೀಕೆ, ಸಿದ್ದು ಜೊತೆ ಕೂತು ಸರ್ಕಾರದ ಸಮರ್ಥನೆಗಿಳಿದರೆ ಮತ್ತೊಂದೆಡೆ ಅವರ ತಮ್ಮ ಸಂಸದ ಸುರೇಶ್ ಸರ್ಕಾರಕ್ಕೇ ಸೆಡ್ಡು ಹೊಡೆದು ಸಿಬಿಐ ತನಿಖೆಗೆ ಒತ್ತಾಯಿಸಬೇಕಾಯಿತು. ಇನ್ನು ಅಂಬಿ ಪೈಪೋಟಿಗೆ ಬಿದ್ದು ಬಿಜೆಪಿ-ಜೆಡಿಎಸ್‌ಗಳ ರಾಗಕ್ಕೇ ತಾಳ ತಟ್ಟುತ್ತಿದ್ದರೆ ಅತ್ತ ತುಮಕೂರಿನ ಸಂಸದ ಮುದ್ದಹನುಮೇಗೌಡರೇ ಪತ್ರಿಕಾಗೋಷ್ಠಿ ಕರೆದು ಸಿಬಿಐ ತನಿಖೆಗೆ ದನಿಗೂಡಿಸಿದ್ದರು.



ಸಂಘದ ಜಾಹಿರಾತಿನಲ್ಲಿ ರವಿಗೆ ಅಪಚಾರ

ಕಾಂಗ್ರೆಸ್‌ನ ಒಕ್ಕಲಿಗ ಶಾಸಕರು, ಮಂತ್ರಿಗಳೇ ಸಿಬಿಐ ತನಿಖೆಗೆ ಒತ್ತಾಯಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದ್ದು ಒಕ್ಕಲಿಗರ ಸಂಘದ ದುಡುಕಿನ ಪರಿಣಾಮವಾಗಿತ್ತು. ಒಂದು ಹಂತದಲ್ಲಿ ಮಾರ್ಚ್ 28ಕ್ಕೆ ಕನ್ನಡ ಪರ ಸಂಘಟನೆಗಳೆಲ್ಲ ಕರ್ನಾಟಕ ಬಂದ್‌ಗೆ ಕರೆಕೊಟ್ಟಿದ್ದು ಕಾಲಕ್ರಮೇಣ ತಣ್ಣಗಾಗುತ್ತಿತ್ತು. ದಲಿತ ಸಂಘಟನೆಗಳ್ಯಾವುವೂ ಹಿಂದಿನ ಆವೇಶದಲ್ಲಿರಲಿಲ್ಲ. ಕಾರ್ಮಿಕ ಸಂಘಟನೆಗಳೂ ಕಾಲಕ್ರಮೇಣ ನಿರ್ಲಿಪ್ತಗೊಂಡವು. ಬಹುಶಃ ಮುಖ್ಯಮಂತ್ರಿ ಸಿದ್ದು ಮಾರ್ಚ್ 23ರ ಸೋಮವಾರ ಸರ್ಕಾರದ ನಿರ್ಧಾರ ಪ್ರಕಟಿಸುವ ಘೋಷಣೆ ಮಾಡದೇ ಹೋಗಿದ್ದರೆ ಆ ಹೊತ್ತಿಗೆ ಜನಸಾಮಾನ್ಯರ ಆಕ್ರೋಶ, ಪ್ರಮಾಣ ಯಾವ ಮಟ್ಟಕ್ಕಿರುತ್ತಿತ್ತೋ ಗೊತ್ತಿಲ್ಲ. ಆದರೆ ಜೆಡಿಎಸ್-ಬಿಜೆಪಿಗಳ ಹೊರತಾಗಿ ನಡೆಯುತ್ತಿದ್ದ ಹೋರಾಟಗಳಿಗೆ ಹಿಂದಿನ ಕಾವಂತೂ ಇರಲಿಲ್ಲ.

ಸಾಮಾಜಿಕ ಆಯಾಮವೊಂದಕ್ಕೆ ಜಾತಿಯ ಸೋಂಕು ತಗುಲಿತೆಂದರೆ ಏನಾಗುತ್ತೋ ಅದೆಲ್ಲವೂ ರವಿ ಸಾವಿನ ವಿಷಯದಲ್ಲಿ ಸಂಭವಿಸಿತ್ತು. ಹಾಗೊಮ್ಮೆ ಒಕ್ಕಲಿಗನೆಂದು ರವಿ ಸಾವಿನ ವಿರುದ್ಧ ಸಂಘ ಬೀದಿಗಿಳಿಯಲೇ ಬೇಕಿದ್ದರೆ ಈ ಬಗ್ಗೆ ಮತ್ತಷ್ಟು ಸೂಕ್ಷ್ಮತಂತ್ರ ರೂಪಿಸಬಹುದಿತ್ತು. ತೆರೆಮರೆಯಲ್ಲಿ ಜನಪರ ಸಂಘಟನೆಗಳನ್ನೂ ಜನಸಾಮಾನ್ಯರನ್ನೂ ಮುಂದಿಟ್ಟುಕೊಂಡೇ ಜಾತಿ ಬಣ್ಣ ಬರದಂತೆ ಎಚ್ಚರಿಕೆ ವಹಿಸಿದ್ದರೆ ಕಾಲಕ್ರಮೇಣ ಅದು ಒಕ್ಕಲಿಗ ಸಮೂಹಕ್ಕೆ ಲಾಭವಾಗುತ್ತಿತ್ತು. ಆದರೆ ದೇವೇಗೌಡರ ಹಿಡಿತವಿತ್ತಲ್ಲ, ಜೆಡಿಎಸ್ ಪಕ್ಷದ ಅಧಿಕೃತ ಕಚೇರಿಯನ್ನೇ ಒಕ್ಕಲಿಗರ ಸಂಘದಲ್ಲಿ ನಡೆಸಲು ಬಹಿರಂಗವಾಗಿ ಕರೆಕೊಟ್ಟ ಸಂಘದ ಮುಖಂಡರ ಮೂರ್ಖತನ ರವಿ ವಿಷಯದಲ್ಲೂ ಮುಂದುವರೆಯಿತು.

ಇದರ ಪರಿಣಾಮವೋ ಎಂಬಂತೆ ರವಿ ಬಗೆಗಿನ ಜನಸಾಮಾನ್ಯರ ದೃಷ್ಟಿಕೋನವಿಂದು ಬದಲಾಗಿದೆ. ರವಿ ಓರ್ವ ದಿಟ್ಟ, ಪ್ರಾಮಾಣಿಕ ಅಧಿಕಾರಿ ಎಂಬುದಕ್ಕಿಂತಲೂ ಜಾತಿಯಲ್ಲಿ ಆತ ಒಕ್ಕಲಿಗನಾಗಿದ್ದ ಎಂಬುದೇ ಹೆಚ್ಚು ಚರ್ಚೆಯಾಗುತ್ತಿದೆ. ಒಕ್ಕಲಿಗರ ಹೊರತಾಗಿ ಬೇರೆಲ್ಲ ಜನಸಮೂಹಗಳಿಗಿದ್ದ ಪ್ರೀತಿ ಮರುಕ ಕ್ಷೀಣಿಸಿದೆ. ಹಾಗೊಮ್ಮೆ ಜಾತಿ ಮೀರಿದ ಮಾನವೀಯತೆಯಿಂದ ಯಾರಾದರೂ ರವಿ ಕುಟುಂಬಕ್ಕೇನಾದರೂ ನೆರವಾದರೆಂದರೆ ಅಂಥವರನ್ನೂ ಜಾತಿ ದೃಷ್ಟಿಕೋನದಿಂದಲೇ ನೋಡುವಂತಾಗಿದೆ. ಒಬ್ಬ ಜನಪರ ಅಧಿಕಾರಿಯ ಸಾವಿನ ವಿರುದ್ಧ ವ್ಯಕ್ತವಾಗುವ ಆಕ್ರೋಶ, ಸಿಟ್ಟು, ದುಃಖ, ಕಣ್ಣೀರನ್ನೂ ಗುಮಾನಿಯಿಂದ, ಜಾತಿಯ ಅನುಮಾನದಿಂದ ನೋಡುವಂತಹ ಪರಿಸ್ಥಿತಿಯನ್ನು ತಂದಿಟ್ಟವರು ಯಾರು?

ಜಾತಿ ನೋಡಿ ರವಿ ಜನಸಾಮಾನ್ಯರ ಸಂಕಷ್ಟಕ್ಕೆ ಮರುಗಲಿಲ್ಲ, ಹಾಗೆಯೇ ಜಾತಿಕಾರಣಕ್ಕೆ ಜನ ರವಿ ಪರವಾಗಿ ಬೀದಿಗಿಳಿದವರಲ್ಲ, ನಿಷ್ಠೆ ಪ್ರಾಮಾಣಿಕತೆ, ದಿಟ್ಟತನಕ್ಕೂ ಜಾತಿಯ [illegible]?

■ ರಾ. ಸೋಮನಾಥ್

...ದು ಮೀಡಿಯಾ ಮಸಾಲಾ!

ರವಿ ಸಾವಿನ ಕುರಿತಂತೆ ನಡೆದ ಜಾತಿರಾಜಕಾರಣಕ್ಕೂ ನ್ಯೂಸ್ ಚಾನಲ್ಲುಗಳು ...ದ ಕಣ್ಣಾಮುಚ್ಚಾಲೆಗೂ ಹೆಚ್ಚು ವ್ಯತ್ಯಾಸವಿರಲಿಲ್ಲ. ಸುದ್ದಿ ಅಥವಾ ಪ್ರಕರಣವೊಂದರ ...ಗಾರಿಕೆಯಲ್ಲಿ ತೋರಬೇಕಾದ ಕನಿಷ್ಠ ಕಾಳಜಿ, ವಸ್ತುನಿಷ್ಠತೆ ಯಾವುದೂ ರವಿ ... ವಿಷಯದಲ್ಲಿ ಕನ್ನಡದ ನ್ಯೂಸ್ ಚಾನಲ್ಲುಗಳಿಗಿರಲಿಲ್ಲ. ಒಂದೆರಡು ಸುದ್ದಿವಾಹಿನಿಗಳನ್ನು ...ರೆ ಬಹುತೇಕ ಚಾನಲ್ಲುಗಳು ಜನರ ಆಕ್ರೋಶಕ್ಕೆ ತುಪ್ಪ ಸುರಿಯುವುದು ಬಿಟ್ಟರೆ ...ಯ ವಿವರಗಳತ್ತ ಕನಿಷ್ಠ ಗಮನವನ್ನೂ ಹರಿಸಲಿಲ್ಲ.

[illegible] 44 [illegible] 2009 [illegible] 44 [illegible]




ಮಹಾಶಯರಿಗೆ ತಾನು ಮಾಡಿದ ಮಿಥ್ಯಾರೋಪ ತಾನು ವಕಾಲತ್ತು ವಹಿಸುವ ಬಿಜೆಪಿಗೇ ಅಂಟುತ್ತದೆ ಎಂಬ ಪರಿವೆಯಿಲ್ಲ!

ಇದೇ ಹೊಣೆಗೇಡಿತನವನ್ನು ತಮ್ಮ ಚಾನಲ್ಲುಗಳ ಮೂಲಕ ಮುಂದುವರಿಸಿದ ಟೀವಿಕೋರರು ಸತ್ಯ ಗೊತ್ತಿದ್ದೂ ಕತೆ ಕಟ್ಟುತ್ತಿದ್ದರು. ಒಂದು ಚಾನಲ್ ರಕ್ತ ಬಿದ್ದಿತ್ತೆಂದು ಅದನ್ನು ಪತ್ನಿ ಕುಸುಮಾರೇ ಅಳಿಸಿದ್ದಾರೆಂದು ವರದಿ ಪ್ರಕಟಿಸಿದರೆ ಮತ್ತೊಂದು ಫ್ಯಾನಿಗೆ ಬಿಗಿದಿದ್ದ ನೇಣಿನ ಕತೆ, ನೆಲಕ್ಕೆ ಹಾಕಿದ್ದ ಸ್ಟೂಲು ಹಾಗೇ ಇದ್ದ ಕತೆ, ಕುತ್ತಿಗೆಗೆ ಬಿಗಿದಿದ್ದ ಕುಣಿಕೆಯ ಕತೆ, ನೆಲಕ್ಕೂ ಸೀಲಿಂಗಿಗೂ ನಡುವಿನ ಎತ್ತರದ ಕತೆ, ರವಿ ವಾಣಿಜ್ಯ ತೆರಿಗೆ ವಸೂಲಿಯಲ್ಲಿ ಯಾವ್ಯಾವ ಕಂಪೆನಿಗೆ ಕಾಟ ಕೊಟ್ಟರೆಂಬ ಕತೆ- ಹೀಗೆ ಒಂದೊಂದು ದಿನಕ್ಕೆ ಒಂದೊಂದು ಕತೆ ಹೆಣೆಯುವುದರಲ್ಲೇ ಟೀವಿಗಳು ಆಸಕ್ತಿ ವಹಿಸಿದವು.

ಏಕೆಂದರೆ ಯಾರಿಗೂ ಸತ್ಯ ಬೇಕಿರಲಿಲ್ಲ ಅಥವಾ ಇಷ್ಟವಿರಲಿಲ್ಲ. ಸತ್ಯ ಗೊತ್ತಿದ್ದರೂ ಜನ ಬೀದಿಗಿಳಿದು ಪ್ರತಿಭಟಿಸುವುದನ್ನು ಪ್ರಚೋದಿಸುವತ್ತಲೇ ಟೀವಿಗಳ ಕಾಳಜಿ ವ್ಯಕ್ತವಾಗುತ್ತಿತ್ತು. ಸಣ್ಣಪುಟ್ಟ ಪ್ರತಿಭಟನೆಗಳನ್ನೂ ಗಂಟೆಗಟ್ಟಲೆ ತೋರಿಸುತ್ತಾರೆಂಬುದು ಗೊತ್ತಾಗಿದ್ದೇ ತಡ ಅಸ್ತಿತ್ವವನ್ನೇ ಕಳಕೊಂಡಿದ್ದ ಸಂಘಟನೆಗಳೂ ಬೀದಿಗಿಳಿಯಲು ಅಣಿಯಾದವು. ಆತ್ಮಹತ್ಯೆಗಿಂತಲೂ ಅದೊಂದು ಕೊಲೆ ಎಂಬುದಕ್ಕೇ ಹೆಚ್ಚು ಒತ್ತು ಕೊಡಲಾಯಿತು. ಬೆಂಕಿ ಹಾಕಿದ್ದು, ಜನ ದೊಣ್ಣೆ ಹಿಡಿದದ್ದು, ಭೂತ ಸುಟ್ಟದ್ದೇ ಟೀವಿಗಳಿಗೆ ಹೆಚ್ಚು ಪ್ರಿಯವಾಯಿತು. ಯಾರೋ ಮುಸ್ಲಿಂ ಕ್ರಿಶ್ಚಿಯನ್ ಅಥವಾ ದಲಿತ ಅಧಿಕಾರಿಯಾಗಿದ್ದರೆ ಟೀವಿಗಳಿಗೆ ಇಷ್ಟೇ ಕಾಳಜಿಯಿರುತ್ತಿತ್ತಾ ಆ ಮಾತು ಬೇರೆ. ಕನಿಷ್ಠ ಸುದ್ದಿ ವಾಹಿನಿಗಳಿಗೂ ಮನರಂಜನಾ ಚಾನಲ್ಲುಗಳಿಗೂ ನಡುವೆ ವ್ಯತ್ಯಾಸವಾದರೂ ಬೇಡವೇ?

ಕಂಪನಿ ಸರ್ಕಾರವೋ? ಜನರ ಸರ್ಕಾರವೋ?



ಜನವರಿ 11ರಂದು ದೆಹಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಲಂಡನ್‌ಗೆ ಹೊರಡಬೇಕಿದ್ದ ವಿಮಾನ ಏರಲು ಸರದಿಯಲ್ಲಿ ಕಾಯುತ್ತಿದ್ದ ಪ್ರಿಯಾ ಪಿಳ್ಳೆ ಎಂಬ ಮಹಿಳೆಯನ್ನು ಏರ್‌ಪೋರ್ಟ್ ಅಧಿಕಾರಿಗಳು ವಿಮಾನ ಏರದಂತೆ ತಡೆದರು. ಕಾರಣ ಕೇಳಲಾಗಿ ತಮಗೆ ಹೆಚ್ಚಿನ ಮಾಹಿತಿಯಿಲ್ಲವೆಂದು ತಮ್ಮ ಮೇಲಧಿಕಾರಿಯ ಬಳಿಗೆ ಕೊಂಡೊಯ್ದರು. ಆ ಅಧಿಕಾರಿ ನೀಡಿದ ವಿವರಣೆ ಪ್ರಕಾರ ದೇಶ ಬಿಟ್ಟು ಹೊರಹೋಗುವುದನ್ನು ನಿರ್ಬಂಧಿಸುವ ವ್ಯಕ್ತಿಗಳ ಪಟ್ಟಿಯಲ್ಲಿ ಆಕೆಯ ಹೆಸರಿದೆ; ಆದ್ದರಿಂದ ಆಕೆ ವಿಮಾನ ಏರುವಂತಿಲ್ಲ ಎಂಬುದು.

ಆಕೆಯ ಬಳಿ 6 ತಿಂಗಳ ವೀಸಾ, ಇನ್ನಿತರೆ ದಾಖಲಾತಿಗಳು ಸಕ್ರಮವಾಗಿದ್ದವು. ತನ್ನ ಬಳಿ ಕಾನೂನುಬದ್ಧವಾದ ಎಲ್ಲ ದಾಖಲೆಗಳು ಇವೆಯೆಂದು ಆಕೆ ಎಷ್ಟು ವಿವರಿಸಿದರೂ ಅಧಿಕಾರಿಗಳದು ಒಂದೇ ಉತ್ತರ. 'ಮೇಲಿನಿಂದ ಆದೇಶ ಬಂದಿದೆ, ನಾವೇನೂ ಮಾಡುವ ಸ್ಥಿತಿಯಲ್ಲಿಲ್ಲ' ಎಂಬುದು.

ಯಾರೀ ಮಹಿಳೆ? ಈ ದೇಶ ಬಿಟ್ಟುಹೋಗದಂತೆ ಆಕೆಯನ್ನು ನಿರ್ಬಂಧಿಸಬೇಕೆಂದರೆ ಆಕೆ ಇನ್ನೆಂಥಾ ಘೋರ ಅಪರಾಧ ಎಸಗಿರಬಹುದು? ಎಂದೆಲ್ಲಾ ನೀವು ಯೋಚಿಸುತ್ತಿರಬಹುದು. ಆದರೆ ಆಕೆಯ ಮೇಲೆ ಅಂಥಾ ಯಾವ ಆರೋಪವೂ ಇರಲಿಲ್ಲ. ಇದ್ದ ಒಂದೇ ಆರೋಪವೆಂದರೆ ಆಕೆ ಲಂಡನ್‌ಗೆ ಹೋಗಿ, ಅಲ್ಲಿ ಭಾಷಣ ಮಾಡುತ್ತಾಳೆ ಎಂಬುದಾಗಿತ್ತು.

ಇದು ಕಪೋಲಕಲ್ಪಿತ ಕಟ್ಟುಕತೆ ಎಂದುಕೊಳ್ಳಬೇಡಿ. ಇದು ಸತ್ಯ ಘಟನೆ. 37 ವರ್ಷದ ಆ ಮಹಿಳೆಯ ಹೆಸರು ಪ್ರಿಯಾ ಪಿಳ್ಳೆ 'ಗ್ರೀನ್‌ಪೀಸ್' ಎಂಬ ಸ್ವಯಂಸೇವಾ ಸಂಸ್ಥೆಯ ಕಾರ್ಯಕರ್ತೆ. ಜನವರಿ 13ರಂದು ಇಂಗ್ಲೆಂಡ್‌ನ ಕೆಲವು ಸಂಸದರನ್ನು ಉದ್ದೇಶಿಸಿ ಆಕೆ ಭಾಷಣ ಮಾಡಬೇಕಿತ್ತು. ಅದು ಮಾಮೂಲಿ ಭಾಷಣವಾಗಿರಲಿಲ್ಲ. ಪ್ರಧಾನಿ ಮೋದಿಯ ಆಪ್ತ ವಲಯದಲ್ಲಿರುವ ಎಸ್ಸಾರ್ ಕಂಪನಿ ನಡೆಸುತ್ತಿರುವ ಗಣಿಗಾರಿಕೆಯ ಅಕ್ರಮಗಳಿಂದಾಗಿ ಆದಿವಾಸಿ ಸಮುದಾಯದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮದ ಬಗೆಗಿನ ಭಾಷಣ ಅದು.

ತನ್ನ ಆಪ್ತ ಮಿತ್ರರ ವಿರುದ್ಧ ಪ್ರಚಾರ ಮಾಡುವವರನ್ನು ಸಹಿಸಿಕೊಂಡು ಕೂರಲು ಮನಮೋಹನ್ ಸಿಂಗ್‌ರಂತೆ ಮೋದಿ ದುರ್ಬಲ ಪ್ರಧಾನಿಯೇನಲ್ಲ, 56 ಇಂಚಿನ ಎದೆಯುಳ್ಳ ಬಲಿಷ್ಠ ಪ್ರಧಾನಿ. ಆದ್ದರಿಂದಲೇ ಇಂಥಾ ಬಲಿಷ್ಠ ಕ್ರಮ!

ಆದರೆ ಎಲ್ಲವೂ ಮೋದಿ ಬಯಸಿದಂತೆ ನಡೆಯುತ್ತಿಲ್ಲ. ಈ ದೇಶದಲ್ಲಿ ಇನ್ನೂ ಕೋರ್ಟು, ಕಚೇರಿಗಳಿವೆ. ಸಂವಿಧಾನ, ವಾಕ್‌ಸ್ವಾತಂತ್ರ ಇನ್ನೂ ಏನೇನೋ ಇವೆ. ಎಲ್ಲಕ್ಕಿಂತ ಹೆಚ್ಚಾಗಿ ಮೋದಿಯ ಮಾದರಿಯ ಬಲಿಷ್ಠ ನಡೆಗಳನ್ನು ಪ್ರಶ್ನಿಸುವ ಜನರಿದ್ದಾರೆ. ಹೀಗಾಗಿ ಈ ಪ್ರಕರಣ ದೆಹಲಿ ಹೈಕೋರ್ಟ್ ಮೆಟ್ಟಿಲೇರಿತು. ಸಂವಿಧಾನದತ್ತ ಹಕ್ಕನ್ನು ಎತ್ತಿಹಿಡಿದಿರುವ ಹೈಕೋರ್ಟ್ ಮೋದಿ ಸರ್ಕಾರದ ಕ್ರಮವನ್ನು ಖಂಡಿಸಿ, ಮೋದಿಯ ಇಂಟೆಲಿಜೆನ್ಸ್ ಬ್ಯೂರೋ ಹೊರಡಿಸಿದ್ದ ಲುಕ್ ಔಟ್ ಸರ್ಕುಲರ್(ಎಲ್‌ಒಸಿ)ನ್ನು ರದ್ದು ಮಾಡಿ ಇದೇ ಮಾರ್ಚ್ 12ರಂದು ಆದೇಶ ಹೊರಡಿಸಿದೆ. ಇದರಿಂದ 'ಬಲಿಷ್ಠ' ಪ್ರಧಾನಿಗೆ ಮುಖಭಂಗವಾಗಿದೆ. ಆದರೂ ಚಿಂತೆಯಿಲ್ಲ; ಈ ದೇಶದ ಕಾನೂನು ಆಡಳಿತ ಹಾಗೂ ಸಂವಿಧಾನಗಳ ಬಗ್ಗೆ ವಿಶ್ವಾಸವಿಟ್ಟುಕೊಂಡಿರುವ ಕೋಟ್ಯಾನುಕೋಟಿ ಜನರಿಗೆ ಸಂತೋಷವನ್ನುಂಟು ಮಾಡಿದೆ.

ಈ ಪ್ರಕರಣದ ಹಿನ್ನೆಲೆ

ಈ ಪ್ರಿಯಾ ಪಿಳ್ಳೆಗೆ ಭಾಷಣ ಮಾಡಲು ಇಂಗ್ಲೆಂಡ್‌ಗೇ ಹೋಗಬೇಕಿತ್ತೆ? ಇಷ್ಟು ವಿಶಾಲವಾದ ದೇಶದಲ್ಲಿ ಜಾಗವಿರಲಿಲ್ಲವೆ? ಎಂಬ ಪ್ರಶ್ನೆ ಮೂಡುವುದು ಸಹಜ. ಎಸ್ಸಾರ್ ಕಂಪನಿಯ ಅಸಲಿಯತ್ತು ಅಡಗಿರುವುದೇ ಅಲ್ಲಿ.

ಈ ದೇಶದ ಸಂಪನ್ಮೂಲಗಳನ್ನು ಹೀರಿ ಬೆಳೆದ ಈ ಎಸ್ಸಾರ್ ಕಂಪನಿಯ ಕೇಂದ್ರ ಕಚೇರಿ ಭಾರತದ ನೆಲದಲ್ಲಿಲ್ಲ. ಇದರ ಹೆಡ್ ಆಫೀಸ್ ಆಫ್ರಿಕಾ ಖಂಡದ ಒಂದು ದ್ವೀಪ ರಾಷ್ಟ್ರ ಮಾರಿಷಸ್‌ನಲ್ಲಿದೆ. ಇದರ ರಿಜಿಸ್ಟರ್ಡ್ ಆಫೀಸ್ ಲಂಡನ್‌ನ ಬರ್ಕ್‌ಲಿ ಸ್ಕ್ವೇರ್‌ನಲ್ಲಿದೆ. ಈ ಕಂಪನಿ ಲಂಡನ್ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ನೋಂದಾಯಿಸಲ್ಪಟ್ಟಿದ್ದು ಲಂಡನ್‌ನ ಕಾನೂನುಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತಿದೆ.

ಆದ್ದರಿಂದಲೇ ಪ್ರಿಯಾ ಪಿಳ್ಳೆಗೆ ಲಂಡನ್‌ನಲ್ಲಿ ಭಾಷಣ ಮಾಡುವ ಅನಿವಾರ್ಯತೆ ಬಂದಿದ್ದು. ಅದೂ ಲಂಡನ್ ಜನಸಾಮಾನ್ಯರನ್ನು ಉದ್ದೇಶಿಸಿ ಅಲ್ಲ, ಅಲ್ಲಿನ ಸಂಸತ್ ಸದಸ್ಯರನ್ನು ಉದ್ದೇಶಿಸಿದ ಭಾಷಣವದು.

ಇಂಗ್ಲೆಂಡ್ ಪಾರ್ಲಿಮೆಂಟ್‌ನ ಕೆಲವು ಸದಸ್ಯರು ಸೇರಿ ಪಕ್ಷಾತೀತವಾಗಿ ಆಲ್ ಪಾರ್ಟಿ ಪಾರ್ಲಿಮೆಂಟರಿ ಗ್ರೂಪ್ (ಎಪಿಪಿಜಿ) ಎಂಬ ಒಂದು ಗುಂಪನ್ನು ರಚಿಸಿಕೊಂಡಿದ್ದಾರೆ. ಈ ಗುಂಪು ಶಿಕ್ಷಣಕ್ಕೆ ಸಂಬಂಧಿಸಿ, ಹಿರಿಯ ನಾಗರಿಕರ ಯೋಗಕ್ಷೇಮಕ್ಕೆ ಸಂಬಂಧಿಸಿ, ಮಾನವ ಹಕ್ಕು ರಕ್ಷಣೆ, ಪರಿಸರ ರಕ್ಷಣೆ ಇತ್ಯಾದಿಗಳಿಗೆ ಸಂಬಂಧಿಸಿ ಆಗಾಗ್ಗೆ ಸಭೆ ಸೇರಿ ಚರ್ಚಿಸುತ್ತದೆ. ಇಂಥಾ ಸಭೆಗಳಿಗೆ ಬೇರೆಬೇರೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಉಪನ್ಯಾಸ ಏರ್ಪಡಿಸುವ ವಾಡಿಕೆಯೂ ಇದೆ. ಕಳೆದ ವರ್ಷ ಪ್ರಧಾನಿ ನರೇಂದ್ರ ಮೋದಿಯನ್ನೂ ತಮ್ಮ ಸಭೆಯಲ್ಲಿ ಉಪನ್ಯಾಸ ನೀಡಲು ಆಹ್ವಾನಿಸಿದ್ದರು. ಆದರೆ ಮೋದಿ ಆ ಸಭೆಗೆ ಹೋಗಲಿಲ್ಲ ಅಷ್ಟೆ. ಬಹುಶಃ ಆದಿವಾಸಿಗಳ ಹಕ್ಕು, ಪರಿಸರ ರಕ್ಷಣೆಯ ಕಾಳಜಿ ಇತ್ಯಾದಿಗಳ ಬಗ್ಗೆ ಈ ಗುಂಪಿನ ಆಸಕ್ತಿ ಕಂಡು ಮಾನ್ಯ ಮೋದಿಯವರಿಗೆ ನಿರಾಸಕ್ತಿ ಮೂಡಿರಲಿಕ್ಕೂ ಸಾಕು.


ಈ ಸಂಸದರ ಗುಂಪು ತಮ್ಮ ಒತ್ತಾಯವನ್ನು ಸಂಸತ್ತಿನಲ್ಲಿ ಮಂಡಿಸಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯ ಹಾಕುತ್ತದೆ. ವಿದೇಶಿ ನೆಲದಿಂದ ವ್ಯವಹರಿಸುತ್ತಿರುವ ಎಸ್ಸಾರ್ ಕಂಪನಿ ಮಧ್ಯಪ್ರದೇಶದ ಮಹಾನ್ ಎಂಬಲ್ಲಿ ಕಲ್ಲಿದ್ದಲು ಗಣಿಗಾರಿಕೆ ನಡೆಸಿ ಅಲ್ಲಿನ ಆದಿವಾಸಿಗಳ ಮೇಲೆ, ಪರಿಸರದ ಮೇಲೆ ನಡೆಸುತ್ತಿರುವ ಅಕ್ರಮಗಳನ್ನು ಸಂಸದರಿಗೆ ಮನವರಿಕೆ ಮಾಡಿಕೊಡುವುದು ಪ್ರಿಯಾ ಪಿಳ್ಳೆಯ ಉದ್ದೇಶ. ಆ ಮೂಲಕ ಎಸ್ಸಾರ್‌ನ ಅಕ್ರಮಗಳಿಗೆ ಒಂದಷ್ಟು ಕಡಿ...
ಹಾಕಬಹುದು ಎಂಬುದು ಅವರ ನಿರೀಕ್ಷೆ.

ಇಂಥಾ ಒಂದು ಸಂಸತ್ ಸದಸ್ಯರ ಗುಂಪಿನ ಮ...
ಮಾತಾಡಿಬಿಟ್ಟರೆ 'ರಾಷ್ಟ್ರೀಯ ಹಿತಾಸಕ್ತಿಗೆ ಮಾರಕ'ವಾ...
ಎಂದು ವಾದಿಸುತ್ತಿರುವ ಮೋದಿ ಪಟಾಲಂನ ಹಿ...
ರಾಷ್ಟ್ರೀಯ ಹಿತಾಸಕ್ತಿಯಂತೂ ಅಲ್ಲ, ಮೋದಿ ಮಿತ್ರ ...
ಕಂಪನಿಯ ಹಿತಾಸಕ್ತಿಯಲ್ಲದೆ ಬೇರೇನಲ್ಲ.

ಹಾಗೆ ನೋಡಿದರೆ ಎಸ್ಸಾರ್ - ಬಿಜೆಪಿ ಕೂಟ...
ಅಕ್ರಮಗಳ ವಿರುದ್ಧ ದನಿಯೆತ್ತುತ್ತಿರುವ ಗ್ರೀನ್...
ಸಂಸ್ಥೆಯನ್ನು ಮಟ್ಟಹಾಕಲು ಪ್ರಯತ್ನಿಸಿದ್ದು ಇದೇ ಮ...
ಬಾರಿಯೇನಲ್ಲ, ಅದಕ್ಕೆ ಸುದೀರ್ಘ ಇತಿಹಾಸವೇ...
ಎಸ್ಸಾರ್ ಪವರ್ ಕಂಪನಿ ಮಧ್ಯಪ್ರದೇಶದ ಮ...
ಎಂಬಲ್ಲಿ ಕಲ್ಲಿದ್ದಲು ನಿಕ್ಷೇಪಗಳ ಗುತ್ತಿಗೆಯ...
ಗಿಟ್ಟಿಸಿಕೊಂಡಿತ್ತು. ನಾನಾ ಅಕ್ರಮಗಳನ್ನು ...
ಕೋಲ್‌ಗೇಟ್ ಹಗರಣದಲ್ಲಿ ಸಿಕ್ಕಿಬಿದ್ದ ಪ್ರ...
ಕಂಪನಿಗಳಲ್ಲಿ ಎಸ್ಸಾರ್ ಕೂಡ ಒಂದು. ಪರಿಣಾಮ...
ಸುಪ್ರೀಂಕೋರ್ಟ್ ಇದರ ಹಂಚಿಕೆಯನ್ನು ರದ್ದುಪಡಿ...
ಇದೀಗ ಎಸ್ಸಾರ್ ಪವರ್ ಮತ್ತು ಬಿರ್ಲಾ ಒಡೆ...
ಹಿಂಡಾಲ್ಕೊ ಕಂಪನಿಗಳು ಜಂಟಿಯಾಗಿ ಮಹಾನ್ ಕೋ...
ಲಿಮಿಟೆಡ್ ಎಂಬ ಹೊಸದೊಂದು ಕಂಪನಿ...
ಹುಟ್ಟುಹಾಕಿವೆ. ಈಗ ಮತ್ತೆ ಅದೇ ಮಹಾನ್ ಪ್ರದ...
ಕಲ್ಲಿದ್ದಲು ಗಣಿಗಳನ್ನು 'ಮಹಾನ್ ಕೋಲ್ ಮ...
ಎಂಬ ಹೆಸರಿನಲ್ಲಿ ಗುತ್ತಿಗೆ ಹಿಡಿದಿವೆ. ಸಮೀಪದಲ...
ಎಸ್ಸಾರ್‌ನ ಶಾಖೋತ್ಪನ್ನ ವಿದ್ಯುತ್ ಕಂಪನಿಗೆ ...
ಹಿಂಡಾಲ್ಕೋನ ಅಲ್ಯುಮಿನಿಯಂ ಕಂಪನಿಗಳೆರ...
ಕಲ್ಲಿದ್ದಲು ಸರಬರಾಜಾಗುವುದು ಇಲ್ಲಿಂದಲೇ.

ಈ ದೇಶದಲ್ಲಿ ಗಣಿಗಾರಿಕೆ ಎಂದರೆ ಸ್ಥಳೀಯ...
ಅದರ ದುಷ್ಪರಿಣಾಮ ಕಟ್ಟಿಟ್ಟ ಬುತ್ತಿ, ಮಹಾನ್ ಫಾಸ...
54 ಹಳ್ಳಿಗಳ 50 ಸಾವಿರಕ್ಕೂ ಹೆಚ್ಚಿನ ಜನರ ಜ...
ನಾಶದ ಅಂಚಿಗೆ ಬಂದು ನಿಂತಿದೆ. ಎತ್ತಂಗಡಿಯಾ...
ಸಮಸ್ಯೆ ಮಾತ್ರವಲ್ಲ, ಆ ಪರಿಸರದಲ್ಲಿ ಭಾರೀ ಧ...
ಸ್ಫೋಟಕಗಳ ಅಡ್ಡಾದಿಡ್ಡಿ ಬಳಕೆ, ಸಾಗಾಣಿಕೆ ವಾಹನ...
ಉಂಟಾಗುತ್ತಿರುವ ಮಾಲಿನ್ಯ ಇತ್ಯಾದಿಗಳೂ ಸೇರಿಕೊ...
ಎಲ್ಲಕ್ಕಿಂತ ಮುಖ್ಯವಾಗಿ ಕಾಡನ್ನೇ ನಂಬಿ ಬದುಕ...
ಸ್ಥಳೀಯರ ಬಗ್ಗೆ ಕನಿಷ್ಠ ಕಾಳಜಿಯನ್ನೂ ತೋರಿಲ್ಲ. ಕಂಪ...
ಸಿಇಒ ರಮಾಕಂತ್ ತಿವಾರಿ ಪ್ರಕಾರ ಮಹಾನ್ ಕೋ...
ಮೈನ್ಸ್ ಪ್ರದೇಶದಲ್ಲಿ ಯಾವುದೇ ಆದಿವಾಸಿಗ...
ಎಂದಮೇಲೆ ಪುನರ್ವಸತಿ ಮತ್ತು ಪರಿಹಾರದ ವ...
ಎಲ್ಲಿಂದ ಬಂತು?

ತಮ್ಮ ಹಕ್ಕುಗಳ ರಕ್ಷಣೆಗಾಗಿ 'ಮಹಾನ್ ಸಂಘ...
ಸಮಿತಿ' ಎಂಬ ಸಂಘಟನೆ ಹುಟ್ಟಿಕೊಂಡಿದೆ. ಪ್ರತಿಭಟನೆ...
ಮಾತ್ರವಲ್ಲದೆ ಕಾನೂನು ಹೋರಾಟವನ್ನೂ ಈ ಸಂಘ...
ಕೈಗೆತ್ತಿಕೊಂಡಿದೆ. ಎಸ್ಸಾರ್ ಕಂಪನಿಯ ವಿರುದ್ಧ ದನಿ...



ಎಸ್ಸಾರ್‌ಗಳ ಮೋದಿ ನಂಟು

ಪ್ರಧಾನಿ ಮೋದಿಗೂ ಈ ಎಸ್ಸಾರ್ ಕೂಟಕ್ಕೂ ನಡುವಿನ ಸಂಬಂಧ ದಶಕಗಳಷ್ಟು ಹಳೆಯದು. ಎಸ್ಸಾರ್ ಕಂಪನಿಯ ವಹಿವಾಟಿನ ಬಹಪಾಲು ಗುಜರಾತ್‌ನಲ್ಲೇ ಕೇಂದ್ರೀಕೃತವಾಗಲು ಈ ನಂಟೇ ಕಾರಣ. ಈ ನಂಟಿನ ಕಾರಣಕ್ಕೆ ಇಬ್ಬರಿಗೂ ಲಾಭವಾಗಿದೆ. ಆದರೆ ನಷ್ಟವಾಗಿದ್ದು ಮಾತ್ರ ಗುಜರಾತ್ ರಾಜ್ಯದ ಜನತೆಗೆ ಹಾಗೂ ಇಡೀ ದೇಶವಾಸಿಗಳಿಗೆ.

ಕೆಲವೊಂದು ಉದಾಹರಣೆ ನೋಡೋಣ.

ಸೂರತ್ ಜಿಲ್ಲೆಯಲ್ಲಿ ನೂರಾರು ಎಕರೆ ಸರ್ಕಾರಿ ಜಮೀನನ್ನು ಎಸ್ಸಾರ್ ಸ್ಟೀಲ್ ಕಂಪನಿ ಅತಿಕ್ರಮಣ ಮಾಡಿಕೊಂಡಿತ್ತು, ಸಂಘಸಂಸ್ಥೆಗಳ ಹಾಗೂ ವಿರೋಧ ಪಕ್ಷಗಳು 2006-07ರ ಅವಧಿಯಲ್ಲಿ ಕಂಪನಿಯ ವಿರುದ್ಧ ಮೂರು ಕ್ರಿಮಿನಲ್ ಕೇಸುಗಳನ್ನು ದಾಖಲಿಸುವಲ್ಲಿ ಯಶಸ್ವಿಯಾದವು. ಪ್ರಕರಣ ಕೋರ್ಟ್ ಮೆಟ್ಟಿಲೇರಿತು. ಮೋದಿ ಸರ್ಕಾರಿ ಭೂಮಿಯ ಒತ್ತುವರಿ ತೆರವು ಮಾಡಿ, ಸಾರ್ವಜನಿಕ ಸ್ವತ್ತನ್ನು ರಕ್ಷಿಸುವ ಬದಲಿಗೆ ಮಾಡಿದ್ದೇನು ಗೊತ್ತೆ? ಬಡಿಗಾಸನ್ನು ಪಾವತಿಸಿಕೊಂಡಂತೆ ನಾಟಕವಾಡಿ ಅದೇ ಭೂಮಿಯನ್ನು ಎಸ್ಸಾರ್ ಕಂಪನಿಯ ಹೆಸರಿಗೆ ಕಾಯಂ ಮಾಡಿದ್ದು. ಹೀಗೆ 7,24,897 ಚದುರ ಮೀಟರ್ ಭೂಮಿಯನ್ನು ಎಸ್ಸಾರ್‌ಗೆ ಪರಭಾರೆ ಮಾಡಿದ್ದರಿಂದ ಸರ್ಕಾರಿ ಬೊಕ್ಕಸಕ್ಕೆ ಅಂದಾಜು 238.50 ಕೋಟಿ ನಷ್ಟವಾಗಿದೆ ಎಂದು 2013ರ ಸಿಎಜಿ ವರದಿಯಲ್ಲಿ ಉಲ್ಲೇಖಿಸಿದೆ.

ಎಸ್ಸಾರ್ ಆಯಿಲ್ ಕಂಪನಿ ಗುಜರಾತ್‌ನ ಪ್ರಮುಖ ಕಂಪನಿಗಳಲ್ಲೊಂದು. ಈ ಕಂಪನಿ ರಾಜ್ಯ ಸರ್ಕಾರಕ್ಕೆ 8000 ಕೋಟಿಗಳ ತೆರಿಗೆ ವಂಚಿಸಿ, ಗೋಲ್‌ಮಾಲ್ ಮಾಡಿಬಿಟ್ಟಿತ್ತು. ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿ, ನಂತರ ಸುಪ್ರೀಂಕೋರ್ಟ್‌ವರೆಗೂ ಮುಟ್ಟಿತು. ಸುಪ್ರೀಂಕೋರ್ಟಿನಿಂದ ನಿರ್ದೇಶನ ಬಂದ ನಂತರವೇ ದೇಶಭಕ್ತ ಮೋದಿ ಸರ್ಕಾರ ತೆರಿಗೆ ವಸೂಲಿ ಮಾಡಿದ್ದು.

ಎಸ್ಸಾರ್ ಭೂಸ್ವಾಧೀನದ ಬಗ್ಗೆ ರೈತರ ವಿರೋಧಕ್ಕೆ ಗುಜರಾತ್‌ನಲ್ಲಿ ಯಾವ ಬೆಲೆಯೂ ಇಲ್ಲ. ಎಸ್ಸಾರ್ ಸಮೂಹ ಲಕ್ಷಾಂತರ ಕೋಟಿಗಳ ವಹಿವಾಟು ನಡೆಸುತ್ತಿದೆ. ವಿಪರ್ಯಾಸವೆಂದರೆ ಈ ಕಂಪನಿಗಾಗಿ ಬೆವರು ಹರಿಸಿದ ಕಾರ್ಮಿಕರಿಗೆ ಮಾತ್ರ ಊಟಕ್ಕೂ ತತ್ವಾರ. ಎಸ್ಸಾರ್ ಸಮೂಹದ ಕೈಗಾರಿಕೆಗಳಲ್ಲಿ ಪದೇಪದೇ ನಡೆಯುವ ಮುಷ್ಕರಗಳೇ ಇದಕ್ಕೆ ಸಾಕ್ಷಿ. ಇಲ್ಲಿಗೆ ಒಂದು ವರ್ಷದ ಹಿಂದೆ ಎಸ್ಸಾರ್ ಪೋರ್ಟ್‌ನ ಕಾರ್ಮಿಕರು ಉಪವಾಸ ಮುಷ್ಕರ ನಡೆಸಿದ್ದರು. ಈ ಸಂದರ್ಭಗಳಲ್ಲಿ ಮೋದಿ ಸರ್ಕಾರ ಯಾರ ಪರ ನಿಂತಿತ್ತು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ.

ಎಸ್ಸಾರ್ ಗ್ಲೋಬಲ್ ಕ್ಯಾಪಿಟಲ್ ಎಂಬ ಕಂಪನಿಯ ಹೆಸರಿನಲ್ಲಿ ಅಪಾರ ಪ್ರಮಾಣದ ಕಪ್ಪುಹಣವನ್ನು ಚಲಾವಣೆ ನಡೆಯುತ್ತಿದೆ ಎಂಬ ಗುಮಾನಿಯನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ. ಅಂದಾಜಾಗಿ ಈ ಗ್ಲೋಬಲ್ ಕ್ಯಾಪಿಟಲ್‌ನ ವಾರ್ಷಿಕ ವಹಿವಾಟು 20 ಬಿಲಿಯನ್ ಡಾಲರ್‌ಗಳು, ಅಂದರೆ ಸುಮಾರು ಒಂದು ಲಕ್ಷದ 24 ಸಾವಿರ ಕೋಟಿಗಳು! ಕಪ್ಪು ಹಣದ ಬಗ್ಗೆ ಹೂಸು ಕೊಡುವ ಮೋದಿ ಸಿಎಂ ಆಗಿದ್ದಾಗಲೂ ಈ ಬಗ್ಗೆ ಚಕಾರವೆತ್ತಿಲ್ಲ. ಈಗಲೂ ಇಲ್ಲ. ಬದಲಿಗೆ ಎಸ್ಸಾರ್ ಜೊತೆಗಿನ ಚಕ್ಕಂದ ಈಗ ಮತ್ತಷ್ಟು ಹೆಚ್ಚಾಗಿದೆ.

ಐಬಿ ರಿಪೋರ್ಟ್-ಅಪ್ಪಟ ಗುಜರಾತ್ ಮಾದ...

ಆದಿವಾಸಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಎಸ್ಸಾರ್ ಕಂಪನಿಯ ಅಕ್ರಮಗಳ ಬಗ್ಗೆ ಕಾನೂನು ಹೋರಾಟವನ್ನೂ ಕೈಗೊಂಡಿದ್ದಾರೆ. ಪ್ರಕರಣ ಗ್ರೀನ್ ಟ್ರಿಬ್ಯುನಲ್‌ನ ಮುಂದೆ ವಿಚಾರಣೆಯಲ್ಲಿದೆ. ಈ ಮಧ್ಯೆ ಮಹಾನ್ ಕೋಲ್ ಲಿಮಿಟೆಡ್ ಕಂಪನಿಯು ಗ್ರೀನ್ ಟ್ರಿಬ್ಯುನಲ್‌ಗೆ ವಿಶಿಷ್ಟವಾದ ಒಂದು ದಾಖಲೆ ಸಲ್ಲಿಸಿದೆ. ಅದು ಬಹಳ ರಹಸ್ಯ ಎಂದು ಹೇಳಲಾಗುವ ಭಾರತದ ಬೇಹುಗಾರಿಕಾ ಸಂಸ್ಥೆ (ಐಬಿ)ಯ ವರದಿ.

ವರದಿಯ ಸಾರಾಂಶ ಇಷ್ಟು. ಕೆಲವು ಎನ್‌ಜಿಓಗಳು ವಿದೇಶಿ ಹಣ ಪಡೆದುಕೊಂಡು ದೇಶದ ಆರ್ಥಿಕ ಭದ್ರತೆಗೆ ಧಕ್ಕೆ ತರುತ್ತಿವೆ. ಅದರಲ್ಲಿ ಮಹಾನ್ ಸಂಘರ್ಷ ಸಮಿತಿ ಕೂಡ ಒಂದು. ಈ ಸಮಿತಿಗೆ ಗ್ರೀನ್‌ಪೀಸ್ ಸಂಸ್ಥೆಯಿಂದ ಹಣ ಬರುತ್ತದೆ. ಈ ಸಂಸ್ಥೆಗಳು ಜನರನ್ನು ಎತ್ತಿಕಟ್ಟುವ ಮೂಲಕ ಭಾರೀ ಯೋಜನೆಗಳು ಜಾರಿಯಾಗದಂತೆ ತಡೆಯುತ್ತವೆ. ಆ ಮೂಲಕ ಭಾರತದ ಆರ್ಥಿಕ ಭದ್ರತೆಯನ್ನು ನಾಶ ಮಾಡುತ್ತವೆ ಎಂಬುದು ಈ ವರದಿಯ ಸಾರಾಂಶ.

ಸತ್ಯವೋ, ಮಿಥ್ಯವೋ ಏನೇ ಆಗಿರಲಿ; ಅತ್ಯಂತ ರಹಸ್ಯವಾಗಿರಬೇಕಿದ್ದ ಬೇಹುಗಾರಿಕಾ ವರದಿ ಈ ಕಂಪನಿಯ ಕೈಸೇರಿದ್ದು ಹೇಗೆ ಎಂಬುದು ಮೊದಲ ಪ್ರಶ್ನೆ. ಇದಕ್ಕೆ ಕಂಪನಿ ಕೊಟ್ಟಿರುವ ಸಮಜಾಯಿಷಿ ಆ ಇಂಟೆಲಿಜೆನ್ಸ್ ರಿಪೋರ್ಟನ್ನು ಇಂಟರ್‌ನೆಟ್‌ನಿಂದ ಡೌನ್‌ಲೋಡ್ ಮಾಡಿಕೊಂಡಿದ್ದೇವೆ ಎಂದು.

ಶಹಬ್ಬಾಸ್! ದೇಶದ ಭದ್ರತೆಗೆ ಸಂಬಂಧಿಸಿ ಬೇಹುಗಾರಿಕೆ ನಡೆಸುವ ಸಂಸ್ಥೆಯ ವರದಿಗಳನ್ನು ಇಂಟರ್‌ನೆಟ್‌ನಿಂದ ಮಕ್ಕಳು ವಿಡಿಯೋ ಗೇಮ್ ಡೌನ್‌ಲೋಡ್ ಮಾಡಿದಂತೆ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದರೆ ಅದು ಯಾವ ದರ್ಜೆಯ ರಹಸ್ಯ ವರದಿ ಇರಬಹುದು? ಹೋಗಲಿ, ಏನೋ ಆಚಾತುರ್ಯ ಸಂಭವಿಸಿ ಸೋರಿಕೆಯಾಗಿಬಿಟ್ಟಿದೆ ಎಂದೇ ಭಾವಿಸೋಣ. ಈ ವರದಿಯನ್ನು ಎಸ್ಸಾರ್ ಹಾಗೂ ಬಿರ್ಲಾ ಕಂಪನಿಗಳು ತಮ್ಮನ್ನು ಸಮರ್ಥಿಸಿಕೊ...
ನ್ಯಾಯಮಂಡಳಿಗೆ ಸಲ್ಲಿಸುತ್ತವೆಯೆಂದರೆ ಏನರ್ಥ?

ಈ ಇಡೀ ಎಪಿಸೋಡ್ ಎಷ್ಟೊಂದು ನಾಟ...
ವಾಗಿದೆ ನೋಡಿ. ತಮ್ಮ ಬದುಕು ಬೀದಿಪಾಲಾಗುತ್ತಿರು...
ವಿರುದ್ಧ ಆದಿವಾಸಿಗಳು ಹಾಗೂ ರೈತರು ಪ್ರತಿಭ...
ಇಳಿಯುವುದು, ಕೆಲವು ಎನ್‌ಜಿಓಗಳು ಹ...
ಸಂಘ-ಸಂಸ್ಥೆಗಳು, ಸಾಮಾಜಿಕ ಕಾರ್ಯಕರ್ತರು ಆಮ...
ಜನರ ಬೆಂಬಲಕ್ಕೆ ನಿಲ್ಲುವುದು, ಆದಿವಾಸಿಗಳು ...
ಕಾರ್ಯಕರ್ತರ ಮೇಲೆ ಪೊಲೀಸರು ದೌರ್ಜನ್ಯ ...
ವುದು, ಐಬಿ ಸಂಸ್ಥೆ ಇಂಥಾ ವರದಿಗಳನ್ನು ತಯಾರಿಸು...
ಅದು ಸೋರಿಕೆಯಾಯ್ತು ಎಂದು ಹೇಳಿಕೊ...
ಕಾರ್ಪೊರೇಟ್ ಮಾಧ್ಯಮಗಳು ರಾತ್ರಿ ಹ...
ಹುಯಿಲೆಬ್ಬಿಸುವುದು, ಇದೇ ಆರೋಪಿತ ಕಂಪನಿ...
ರಿಪೋರ್ಟ್‌ನ್ನು "ಡೌನ್‌ಲೋಡ್" ಮಾಡಿ ಕೋ...
ಸಲ್ಲಿಸುವುದು. ಇನ್ನು ವಿವರಣೆಯ ಹೆಚ್ಚಿನ ವಿ...
ಅಗತ್ಯವಿದೆಯೆ?

ಈಗ ನಮ್ಮ ಮುಂದೆ ಒಂದು ಗುರುತರವಾದ...
ಬಾಕಿ ಉಳಿದಿದೆ. ರಿಪೋರ್ಟ್ ತಯಾರಿಸಿದ ಪ್ರಭೃತಿಗ...
ಸದರಿ ರಿಪೋರ್ಟ್‌ನ ಫಲಾನುಭವಿ ಕಾರ್ಪೊ...
ಕಂಪನಿಗಳಿಗೂ ನಡುವೆ ಯಾವ ರೀತಿಯ ಸಂಬಂ...
ಇಂಥಾ ಐಬಿ ವರದಿಗಳು ಸಾರ್ವಜನಿಕ ಹಿತಾ...
ರಕ್ಷಣೆಗಾಗಿಯೋ ಅಥವ ಖಾಸಗಿ ಕಂ...
ಹಿತಾಸಕ್ತಿಗಾಗಿಯೋ ಮುಂತಾದ ಅಂಶಗಳನ್ನು ಗ...
ತನಿಖೆಗೆ ಒಳಪಡಿಸಬೇಕಾದ್ದು ಈ ದೇಶದ ಪ್ರಜಾ...
ಉಳಿವಿನ ದೃಷ್ಟಿಯಿಂದ ತೀರಾ ತುರ್ತಿನ ವಿಚಾರ...

ಯಾಕೆಂದರೆ ಗುಜರಾತ್ ಮಾದರಿ ಆಡಳಿತದಲ್ಲಿ...
ವಿರೋಧಿಗಳನ್ನು ಮಣಿಸಲು ಇಂಥಾ 'ರಹಸ್ಯ' ವ...
ತಂತ್ರವನ್ನು ಯಥೇಚ್ಛವಾಗಿ ಬಳಸಿದ್ದು, ಈಗ ಈ...
ಇಡೀ ದೇಶಾದ್ಯಂತ ರಿಪೀಟ್ ಆಗುವ ಸಾಧ್ಯತೆ...

ಜೆಪಿಯ "ರಾಷ್ಟ್ರೀಯ ಹಿತಾಸಕ್ತಿ"!!

ಮೋದಿ ಸರ್ಕಾರ ಪ್ರಿಯಾ ಪಿಳ್ಳೈ ಪ್ರಕರಣದಲ್ಲಿ ...ನಲ್ಲಿ ಮಂಡಿಸಿದ ವಾದದ ಸಾರಾಂಶ 'ಪ್ರಿಯಾ ...ಟನ್‌ನಲ್ಲಿ ಸಂಸದರನ್ನುದ್ದೇಶಿಸಿ ಭಾಷಣ ಮಾಡಿದರೆ ...ಯ ಹಿತಾಸಕ್ತಿ" ಮಾರಕ ಪರಿಣಾಮ ಬೀರುತ್ತಿತ್ತು ...ಮ. ಮೋದಿ ಸರ್ಕಾರದ ಅಧಿಕೃತ ನಿಲುವು ಇದೇ



. ಬಿಜೆಪಿ ವಕ್ತಾರರು ಈ ಬಗ್ಗೆ ಎಲ್ಲೆಡೆ ಬೊಂಬಡಾ ...ಸುತ್ತಿದ್ದಾರೆ. ಕೆಲ ವಾರಗಳ ಹಿಂದೆ ಟೈಮ್ಸ್ ನೌ ...ನಲ್ಲಿ ಅರ್ನಾಬ್ ಗೋಸ್ವಾಮಿ ನಡೆಸಿಕೊಡುವ ನ್ಯೂಸ್ ... ಎಂಬ ನೇರ ಚರ್ಚೆ ಕಾರ್ಯಕ್ರಮದ ಹೆಡ್ಡಿಂಗ್ ...ತ್ತು - "ಆಕ್ಟಿವಿಸಂ ಆರ್ ಆಂಟಿ-ನ್ಯಾಷನಲಿಸಂ"! ...ೋದಿ ಸರ್ಕಾರ ಹಾಗೂ ಎಸ್ಸಾರ್ ಕಂಪನಿಯ ...ಗಿ ಬ್ಯಾಟಿಂಗ್ ಮಾಡಲಿಕ್ಕಾಗಿ ಅಲ್ಲಿ ಮೂರು ...ಯ ಸಮಾಗಮವಾಗಿತ್ತು. ಬಿಜೆಪಿಯ ವಕ್ತಾರ ಸಂಬಿತ್ ... ರಹಸ್ಯ ಬೇಹುಗಾರಿಕಾ ಸಂಸ್ಥೆಯಾದ ಆರ್‌ಎಡಬ್ಲ್ಯು ... ಅಧಿಕಾರಿ ಆರ್‌ಎಸ್‌ಎನ್ ಸಿಂಗ್ ಮತ್ತು ಮೂರನೇ ...ಸ್ವತಃ ಅರ್ನಾಬ್ ಗೋಸ್ವಾಮಿ! ಬಿಜೆಪಿ - ಪೊಲೀಸ್ ...ಮಾಧ್ಯಮ ಈ ಮೂರರ ಸಾಂಕೇತಿಕ ಪ್ರತಿನಿಧಿಗಳಂತಿದ್ದ ...ಂದಿ ಒಬ್ಬ ಮಹಿಳಾ ಕಾರ್ಯಕರ್ತೆಯ ಭಾಷಣದಿಂದ ...ದೇಶದ ಆರ್ಥಿಕತೆ ಮುಳುಗೇಬಿಡುತ್ತಿತ್ತು ಎಂಬಂತೆ ...ದರು. 'ರಾ' ಅಧಿಕಾರಿಯಂತೂ ಹಿಟ್ಲರ್‌ನ ...ವತಾರವೆಂಬಂತೆ ಅರಚಾಡುತ್ತಿದ್ದ.

ಗ್ರೀನ್‌ಪೀಸ್‌ನ ಪರವಾಗಿ ವಿನುತಾ ಗೋಪಾಲ್, ಸಾಮಾಜಿಕ ಕಾರ್ಯಕರ್ತೆ ಕವಿತಾ ಕೃಷ್ಣನ್, ಆದಿವಾಸಿ ಹೋರಾಟಗಾರ ಸತ್ಯನಾಥ್ ಸಾರಂಗಿ ಮುಂತಾದವರನ್ನು ಈ ಚರ್ಚೆಗೆ ಕರೆದಿದ್ದರೂ ಅವರ ಯಾವೊಂದು ಮಾತನ್ನೂ ಕೇಳಿಸಿಕೊಳ್ಳದ ಗೋಸ್ವಾಮಿ ಪ್ರೇಕ್ಷಕರು ಏನೆಂದುಕೊಂಡಾರು ಎಂಬ ಕನಿಷ್ಠ ಪ್ರಜ್ಞೆಯೂ ಇಲ್ಲದೆ ಮತಿಭ್ರಮಣೆಗೊಳಗಾದವನಂತೆ ವಿಚಿತ್ರವಾಗಿ ವರ್ತಿಸುತ್ತಿದ್ದ. ಈ ಕೂಟದ 'ರಾಷ್ಟ್ರೀಯ ಹಿತಾಸಕ್ತಿ'ಯ ಆಬ್ಬರಕ್ಕೆ ಮರ್ಮಾಘಾತ ಕೊಡುವಂತಹ ಉದಾಹರಣೆಯೊಂದನ್ನು ಕಾರ್ಯಕರ್ತರೊಬ್ಬರು ಪ್ರಸ್ತಾಪಿಸಿದರು. ಮಾನ್ಯ ನರೇಂದ್ರ ಮೋದಿಯ ಆರ್ಥಿಕ ಸಲಹೆಗಾರ ಹುದ್ದೆಗೆ ಅರವಿಂದ್ ಸುಬ್ರಮಣ್ಯನ್ ಎಂಬ ಐಎಂಎಫ್ ಅಧಿಕಾರಿಯನ್ನು ನೇಮಿಸಿ ಕೊಂಡಿರುವ ವಿಚಾರ. ಈ ಆಸಾಮಿ ಭಾರತದ ಹಿತಾಸಕ್ತಿಗೆ ವಿರುದ್ಧವಾಗಿ ಅಮೆರಿಕದ ಬೇಯರ್ ಕಂಪನಿಯ ಪರವಾಗಿ ಲಾಬಿ ಮಾಡಿದ್ದ ಮನುಷ್ಯ!!

ಇಲ್ಲಿಗೆ ಒಂದೆರಡು ವರ್ಷಗಳ ಹಿಂದೆ ಅಮೆರಿಕದ ಫಾರ್ಮಸ್ಯೂಟಿಕಲ್ ಕಂಪನಿ ಕ್ಯಾನ್ಸರ್, ಕಿಡ್ನಿ ವೈಫಲ್ಯ ಮುಂತಾದ ಮಾರಕ ರೋಗಗಳಿಗೆ ಕೊಡುವ ಔಷಧಿಯನ್ನು ಪೇಟೆಂಟ್ ಮಾಡಿಕೊಳ್ಳಲು ಹವಣಿಸಿತ್ತು. ಈ ವಿದೇಶಿ ಕಂಪನಿಯ ಹುನ್ನಾರವನ್ನು ಭಾರತ ವಿರೋಧಿಸಿತ್ತು. ವಿವಾದ ಸುಪ್ರೀಂಕೋರ್ಟ್ ಮೆಟ್ಟಿಲೇರಿ, ವ್ಯಾಪಕ ಬಳಕೆಯಲ್ಲಿರುವ ಈ ಜನರಿಕ್ ಔಷಧಿಯನ್ನು ಪೇಟೆಂಟ್ ಮಾಡಿಕೊಂಡರೆ ಔಷಧಿಯ ಬೆಲೆ ಗಗನಕ್ಕೇರಿ ಬಡಪಾಯಿ ರೋಗಿಗಳಿಗೆ ಮಾರಕವಾಗುತ್ತದೆ ಎಂಬುದನ್ನು ಮನಗಂಡು ಪೇಟೆಂಟ್ ವಿರುದ್ಧ ಕೋರ್ಟ್ ತೀರ್ಪು ನೀಡಿತ್ತು. ಆಗ ಅಮೆರಿಕ ಕಂಪನಿಯ ಪರ ವಹಿಸಿದ್ದ ಈ ಮಹಾನುಭಾವ ವಿಶ್ವ ವಾಣಿಜ್ಯ ಸಂಸ್ಥೆಯಲ್ಲಿ ಭಾರತದ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದ್ದ! ಈಗ ಅದೇ ವ್ಯಕ್ತಿಯನ್ನು ಮೋದಿಯವರು ತಮ್ಮ ಆರ್ಥಿಕ ಸಲಹೆಗಾರರನ್ನಾಗಿ ನೇಮಿಸಿಕೊಂಡಿದ್ದಾರೆ. ಇದೇ ಇವರ "ರಾಷ್ಟ್ರೀಯ ಹಿತಾಸಕ್ತಿ"ಯ ಒಳಹೂರಣ!

...ಮವಾಗಿ ಆದಿವಾಸಿಗಳು ಮತ್ತು ಸಾಮಾಜಿಕ ...ರ್ತರ ಮೇಲೆ ಪೊಲೀಸ್ ಕಿರುಕುಳ ಮತ್ತು ...ಡಾಗಳ ದೌರ್ಜನ್ಯ ವ್ಯಾಪಕವಾಗಿದೆ.


...ಮಹಾನ್ ಕಲ್ಲಿದ್ದಲು ಗಣಿ ಪ್ರದೇಶದ ವ್ಯಾಪ್ತಿಯಲ್ಲಿ ... ಗಣಿಗಾರಿಕೆ ವಿರುದ್ಧ ಹೇಳಿಕೆ ನೀಡುವುದು, ...ನೆಗಳನ್ನು ತರುವುದು, ಎಲೆಕ್ಟ್ರಾನಿಕ್ ಅಥವ ಮುದ್ರಣ ...ಧ್ಯಮಗಳಲ್ಲಿ ಅಥವ ಸಾಮಾಜಿಕ ಜಾಲತಾಣಗಳಲ್ಲಿ ...ರ ಮಾಡುವುದು, ಕರಪತ್ರ ಹಂಚುವುದು, ಬ್ಯಾನರ್ ...ವುದು ಮುಂತಾದ ಚಟುವಟಿಕೆಗಳನ್ನು ನಿರ್ಬಂಧಿಸು... ಕೋರಿ ಸಿಂಗ್ರೋಲಿ ಜಿಲ್ಲಾ ನ್ಯಾಯಾಲಯದಲ್ಲಿ ...ರ್ ಕಂಪನಿ ಮೊಕದ್ದಮೆ ಹೂಡಿತ್ತು. ಅದೃಷ್ಟವಶಾತ್ ಕೋರ್ಟು ಇಂಥಾ ಅಸಂವಿಧಾನಿಕ ಬೇಡಿಕೆಯನ್ನು ತಿರಸ್ಕರಿಸಿ ಕಳೆದ ವಾರ ತೀರ್ಪು ನೀಡಿದೆ.

ಎಸ್ಸಾರ್‌ನ ಪರಾಕ್ರಮ ಇಲ್ಲಿಗೆ ಮುಗಿಯುವುದಿಲ್ಲ. ಗ್ರೀನ್‌ಪೀಸ್ ಸಂಸ್ಥೆ ತನ್ನ ವಿರುದ್ಧ ಯಾವುದೇ ಪ್ರಚಾರ ಮಾಡುದಂತೆ ನಿರ್ಬಂಧಿಸಲು ಕಳೆದ ವರ್ಷ ಬಾಂಬೆ ಹೈಕೋರ್ಟ್‌ನಲ್ಲಿ 500 ಕೋಟಿಗಳ ಮಾನನಷ್ಟ ಮೊಕದ್ದಮೆ ಹೂಡಿದೆ. ಹೇಗಾದರೂ ಮಾಡಿ ತನ್ನ ಅಕ್ರಮಗಳ ವಿರುದ್ಧ ಮಾತಾಡುವವರ ಬಾಯಿ ಮುಚ್ಚಿಸಬೇಕೆಂಬುದು ಅದರ ಹುನ್ನಾರ. ಪ್ರಿಯಾ ಪಿಳ್ಳೆಯನ್ನು ವಿಮಾನ ಏರದಂತೆ ಮೋದಿ ಸರ್ಕಾರ ತಡೆದದ್ದೂ ಕೂಡ ಇದರ ಮುಂದುವರೆದ ಭಾಗವಷ್ಟೆ.

ಎಸ್ಸಾರ್ ಸಂಕ್ಷಿಪ್ತ ಬಯೋಡಾಟ

ಎಸ್ಸಾರ್ ಕಂಪನಿಯ ಮಾಲಿಕರಾದ ಶಶಿಕಾಂತ್ ರುಯ್ಯ ಮತ್ತು ರವಿಕಾಂತ್ ರುಯ್ಯ ಎಂಬ ಮಾರ್ವಾಡಿ ಸೋದರರು ಮೂಲತಃ ರಾಜಸ್ಥಾನದವರು. 1980ರ ದಶಕದಲ್ಲಿ ವ್ಯವಹಾರ ನಿಮಿತ್ತ ಮುಂಬೈಗೆ ವಲಸೆ ಬಂದವರು. ನಾನಾ ಅಕ್ರಮ ಮಾರ್ಗಗಳ ಮೂಲಕ ಭಾರತ ದೇಶದ ಸಂಪತ್ತನ್ನು ಹೀರಿ ಬೆಳೆದ ಎಸ್ಸಾರ್ ಈಗ ಒಂದು ಬಹುರಾಷ್ಟ್ರೀಯ ಕಂಪನಿಯಾಗಿದೆ. ಈಗ ಇದರ ಕೇಂದ್ರ ಕಚೇರಿಯಿರುವುದು ಮಾರಿಷಸ್‌ನಲ್ಲಿ, ಇತರೆ ಕಾರ್ಪೋರೇಟ್ ಕಚೇರಿಗಳು ಬಾಂಬೆ, ದೋಹಾ, ನ್ಯೂಯಾರ್ಕ್ ಮುಂತಾದ ಮಹಾನಗರಗಳಲ್ಲಿವೆ.

ಎಸ್ಸಾರ್ ಸಮೂಹ ಈಗ ಉಕ್ಕು, ಪೆಟ್ರೋಲಿಯಂ ಮತ್ತು ಗ್ಯಾಸ್, ವಿದ್ಯುತ್‌ಶಕ್ತಿ ದೂರಸಂಪರ್ಕ, ಗಣಿಗಾರಿಕೆ, ಮೂಲಸೌಕರ್ಯಗಳ ಗುತ್ತಿಗೆ, ಶಿಪ್ಪಿಂಗ್, ಬಂದರು, ರಿಯಲ್ ಎಸ್ಟೇಟ್, ಚಿಲ್ಲರೆ ವ್ಯಾಪಾರ ಹೀಗೆ ನಾನಾ ಕ್ಷೇತ್ರಗಳಲ್ಲಿ ಭಾರೀ ವ್ಯವಹಾರ ನಡೆಸುತ್ತಿದೆ. ಎಸ್ಸಾರ್ ಸ್ಟೀಲ್, ಎಸ್ಸಾರ್ ಆಯಿಲ್, ಎಸ್ಸಾರ್ ಶಿಪ್ಪಿಂಗ್, ಎಸ್ಸಾರ್ ಎನರ್ಜಿ, ಎಸ್ಸಾರ್ ಹೈಪರ್ ಮಾರ್ಟ್, ದಿ ಮೊಬೈಲ್ ಸ್ಟೋರ್ ಮುಂತಾದ





ಕಂಪನಿಗಳು ಈ ಸಮೂಹದಲ್ಲಿವೆ. ಕಳೆದ ಆರ್ಥಿಕ ವರ್ಷದಲ್ಲಿ ಅಧಿಕೃತವಾಗಿ ಘೋಷಣೆಯಾದ ಈ ಸಮೂಹದ ವಾರ್ಷಿಕ ವರಮಾನ 2,42,000 ಕೋಟಿಗಳು!

ವಿಚಿತ್ರ ಹೇಗಿದೆ ನೋಡಿ. ಲಕ್ಷಾಂತರ ಕೋಟಿಗಳ ವಹಿವಾಟು ನಡೆಸುವ ಕಂಪನಿಯ ಬಹುಪಾಲು ವಹಿವಾಟು ನಡೆಯುವುದು ಭಾರತದಲ್ಲಿ, ಇಂಗ್ಲೆಂಡ್, ಅಮೆರಿಕ, ಕೀನ್ಯಾ, ರಷ್ಯಾ ಒಳಗೊಂಡಂತೆ ಹತ್ತಾರು ದೇಶಗಳಲ್ಲಿ ಇದರ ವಹಿವಾಟಿದೆ. ಆದರೆ ಇದರ ಕೇಂದ್ರ ಕಚೇರಿ ಇರುವುದು ಮಾರಿಷಸ್ ಎಂಬ ಪುಟ್ಟ ದ್ವೀಪದಲ್ಲಿ! ಈ ಕಂಪನಿಯ ವ್ಯವಹಾರಗಳಿಗೂ ಈ ಪುಟ್ಟ ದೇಶಕ್ಕೂ ಅಂಥಾ ಯಾವ ಸಂಬಂಧವಿಲ್ಲ, ಇರುವುದೆಲ್ಲಾ ಒಂದೇ ಸಂಬಂಧ. ಅದು ಮಾರಿಷಸ್ ಎಂಬ ಪುಟ್ಟ ರಾಷ್ಟ್ರಕ್ಕೂ ಕಾರ್ಪೋರೇಟ್ ಅವ್ಯವಹಾರಗಳಿಗೂ ಇರುವ ಬಿಡಿಸಲಾಗದ ಸಂಬಂಧ.

ಮತ್ತೊಂದು ಆಶ್ಚರ್ಯಕರ ಸುದ್ದಿ ನೋಡಿ. ಭಾರತದಲ್ಲಿ ಹೂಡಿಕೆಯಾಗುವ ವಿದೇಶಿ ನೇರ ಹೂಡಿಕೆಯ ಹೆಚ್ಚಿನ ಪಾಲು ಎಲ್ಲಿಂದ ಬರುತ್ತದೆ? ಎಂದರೆ ನಮ್ಮ ಗಮನ ಸಹಜವಾಗಿ ಅಮೆರಿಕಾ, ಇಂಗ್ಲೆಂಡ್, ಜಪಾನ್ ಇತ್ಯಾದಿ ದೇಶಗಳತ್ತ ಹರಿಯುತ್ತದೆ. ಮೇಲಿನ ಉತ್ತರ ತಪ್ಪು ಎಂದರೆ ಸಹಜವಾಗಿ ಸದೃಢ ಆರ್ಥಿಕಶಕ್ತಿಯಾಗಿ ಹೊರಹೊಮ್ಮುತ್ತಿರುವ ಚೀನಾ ಇರಬಹುದೆ ಎಂಬ ಅನುಮಾನ ನಮ್ಮ ತಲೆಯಲ್ಲಿ ಸುಳಿಯುತ್ತದೆ.

ಆಶ್ಚರ್ಯಕರ ಸತ್ಯ ಸಂಗತಿಯೆಂದರೆ ನಮ್ಮ ದೇಶಕ್ಕೆ ಬರುವ 'ವಿದೇಶಿ ಬಂಡವಾಳದ' ಶೇಕಡ 42ರಷ್ಟು ಈ ಪುಟ್ಟ ಮಾರಿಷಸ್‌ನಿಂದ ಬರುತ್ತದೆ. ಈ ದೇಶದ ಒಟ್ಟು ಜನಸಂಖ್ಯೆ 12 ಲಕ್ಷದ 30 ಸಾವಿರ! ಅದರ ರಾಜಧಾನಿ ಪೋರ್ಟ್ ಲೂಯಿಸ್‌ನ ಜನಸಂಖ್ಯೆ ಒಂದೂವರೆ ಲಕ್ಷ ಮಾತ್ರ!

ತೆರಿಗೆರಹಿತ ವ್ಯವಹಾರಕ್ಕೆ ಮತ್ತು ಕಪ್ಪುಹಣದ ದಾಸ್ತಾನಿಗೆ ಭಾರತದ ಕಾರ್ಪೋರೇಟ್ ಕಂಪನಿಗಳು ಕಂಡುಹಿಡಿದಿರುವ ಸ್ವರ್ಗವೇ ಮಾರಿಷಸ್ ದ್ವೀಪ! ನಂಬಲು ಕಷ್ಟವಾದರೂ ಇದು ಸತ್ಯ. ದೇಶದ ಬಹುತೇಕ ಕಂಪನಿಗಳು ಮಾರಿಷಸ್‌ನಲ್ಲಿ ತನ್ನ ಪ್ರಾಕ್ಸಿ ಕಂಪನಿಗಳನ್ನು ಹುಟ್ಟುಹಾಕಿ ವ್ಯವಹಾರ ನಡೆಸುತ್ತಿದ್ದರೆ ಈ ಎಸ್ಸಾರ್ ಸೋದರರು ಎಲ್ಲರಿಗಿಂತ ಎರಡು ಹೆಜ್ಜೆ ಮುಂದೆ ಹೋಗಿ, ಈ ದೇಶ ತೊರೆದು ಮಾರಿಷಸ್‌ನಲ್ಲೇ ಕೇಂದ್ರ ಕಚೇರಿ ಸ್ಥಾಪಿಸಿದ್ದಾರೆ.

ಹಾಗೆಯೇ ದೇಶದಲ್ಲಿ ನಡೆದ ಬಹುತೇಕ ಎಲ್ಲ ಹಗರಣಗಳಲ್ಲೂ ಎಸ್ಸಾರ್ ಪಾತ್ರವಿದೆ. 2ಜಿ ಟೆಲಿಕಾಮ್ ಹಗರಣದಲ್ಲಿ ಲೂಪ್ ಟೆಲಿಕಾಮ್ ಎಂಬ ಪ್ರಾಕ್ಸಿ ಕಂಪನಿ ಹುಟ್ಟುಹಾಕಿ, ರುಯ್ಯ ಸೋದರಿ ಕಿರಣ್ ಖೇತಾನ್ ಎಂಬುವವಳ ಮೂಲಕ ಸಾವಿರಾರು ಕೋಟಿ ಕಳ್ಳ ಹಣ ಹೂಡಿ ಸಿಕ್ಕಿಬಿದ್ದಿದ್ದರು. ಈ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಕೇಸು ದಾಖಲಾಗಿದೆ. ಕೋಲ್‌ಗೇಟ್ ಹಗರಣದಲ್ಲೂ ಈ ಎಸ್ಸಾರ್‌ಗಳ ಕೈವಾಡವಿತ್ತು. ವಿಪರ್ಯಾಸವೆಂದರೆ ಇದೇ ಹಗರಣಗಳನ್ನು ತಮ್ಮ ಚುನಾವಣಾ ಪ್ರಚಾರವನ್ನಾಗಿಸಿಕೊಂಡ ಬಿಜೆಪಿ ಪಕ್ಷಕ್ಕೆ ಕಾರ್ಪೋರೇಟ್ ಧಣಿಗಳು ಹಣ ಹರಿಸಿದರು. ತಮ್ಮ ಅತ್ಯಂತ ಆಪ್ತ ಮಿತ್ರ ನರೇಂದ್ರ ಮೋದಿಯನ್ನು ಗದ್ದುಗೆಗೆ ತಂದು ಕೂರಿಸಿದರು.

ಇಂಥಾ ಕಂಪನಿ ಧಣಿಗಳ ಹಿತವನ್ನೇ ರಾಷ್ಟ್ರಹಿತವೆಂದು ಬಿಂಬಿಸಿ ನರೇಂದ್ರ ಮೋದಿಯವರು ರಾತ್ರಿ ಹಗಲು ತಮ್ಮ ಪ್ರಧಾನ ಸೇವೆ ಮಾಡುತ್ತಿದ್ದಾರೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಬಿಐ ಎಂದರೆ ಚೋರ್ ಬಚಾವ್ ಇನ್‌ಸ್ಟಿಟ್ಯೂಟ್

ಮುತಾತ್ಮನಾದ ರವಿಯವರ ಸಾವಿಗೆ ಕೋಲಾರ ... ಕಣ್ಣೀರಿನ ಕಾಲುವೆಯನ್ನೇ ಹರಿಸಿದೆ. ಜಿಲ್ಲಾಧಿಕಾರಿ ...ದ್ದ ರವಿ ದಕ್ಷ ಮತ್ತು ಮಾನವೀಯ ಗುಣದಿಂದ ...ಪದ ಅಧಿಕಾರಿಯಾಗಿದ್ದ. ಆತನ ಹಠಾತ್ ಸಾವನ್ನು ...ಕೊಳ್ಳಲಾರದ ಜನಸ್ತೋಮ ಕಂಬಾಲಪಲ್ಲಿಯಲ್ಲಿ ...0 ಮಾರ್ಚ್ ತಿಂಗಳಲ್ಲಿ ನಡೆದ ಏಳು ಜನರ ನರಹತ್ಯೆ ...ವನ್ನು ಜ್ಞಾಪಿಸಿತು. ಅಂದು ಹತ್ಯೆಗೊಂಡ ಜೀವಗಳು ...ರೆ ರವಿಯಂತೆಯೇ ಆಗುತ್ತಿದ್ದರು. ಅದಕ್ಕೆ ಏನೋ, ...ಿ ಬೆಂಕಿಯಲ್ಲಿ ಬೆಂದು ಹೋದ ಜೀವಗಳ ...ತೆಯನ್ನು ಸಹಿಸಲಾರದ ಜನ ಬೆಂಗಳೂರಿನವರೆಗೂ ... ಬಂದರಂತಲ್ಲಾ!

ಅವರನ್ನ ಎದುರುಗೊಂಡ ಕುಮಾರಸ್ವಾಮಿ, ಎಡೂರಪ್ಪ ..., ಶೋಭಾ, ಅಶೋಕ ಇತ್ಯಾದಿ ಮಾನವೀಯ ...ಯ ಹೋರಾಟಗಾರರು ಜಾಥಾ ಬಂದ ಜನರ ... ನೋಡಲಾರದೆ ತಾವೂ ಅತ್ತರಂತಲ್ಲಾ. ಅತ್ತು ಅತ್ತೂ ... ಅಂಬೇಡ್ಕರ್ ಪ್ರತಿಮೆ ಎದುರು ಅಂಗಾತ ಮಲಗಿ ... ದುಃಖವನ್ನು ಮುಗಿಲಿಗೆ ತಲುಪಿಸಿದರಂತಲ್ಲಾ, ಆಗ ...ಗನ ಅತ್ತನಂತಲ್ಲಾ.


...ತ್ತ ಅವಧೂತ ಸ್ವಾಮಿಯೊಬ್ಬ "ದಲಿತರನ್ನು ಸುಟ್ಟ... [illegible]" ಎಂದು ಉರಿಯುವ ಕರ್ಪೂರವನ್ನೇ ...ರಂತೆ. ಇತ್ತ ಚುಂಚನಗಿರಿ ಜಗದ್ಗುರುಗಳು "ಸ್ವಾಮಿಗ... ಅಳಬಾರದು" ಎಂದು ಎಷ್ಟೇ ನಿಯಂತ್ರಿಸಿ...ರೂ, ಕಡೆಗೂ ದುಃಖದ ಕಟ್ಟೆಯೊಡೆಸಿಕೊಂಡರಂತೆ. ... [illegible] ಕಾಲೇಜುಗಳೆಲ್ಲಾ ಒಂದಾಗಿ ವಿದ್ಯಾರ್ಥಿ... "[illegible]" ಎಂಬ ಘೋಷಣೆ ... [illegible].

... [illegible] ದೇಶೀ... "[illegible]" ... [illegible] ... ಅತ್ತು, ಅತ್ತು, ನನ್ನ ಕಣ್ಣೀರೇ

"ಬತ್ತಿಹೋಗಿವೆ" ಎಂದು ಅಳುತ್ತ ಪದ್ಮನಾಭನಗರದ ಮನೆಯ ಮೂಲೆಯಲ್ಲಿ ಧರಣಿ ಕುಳಿತುಬಿಟ್ಟರಂತೆ.

ಸಿದ್ದಗಂಗೆ ಸ್ವಾಮಿಗಳಂತೂ ಕೋಲಾರದವರೆಗೂ ಪಾದಯಾತ್ರೆ ಆರಂಭಿಸಿ ಕಾಲು ಸುಟ್ಟ ಕಾರಣಕ್ಕೆ ಎಡೂರಪ್ಪ ಕಳುಹಿಸಿದ ಹೊಸ ಕಾರಿನಲ್ಲಿ ವಾಪಸು ಮಠ ಸೇರಿಕೊಂಡರು. ರಮೇಶ್‌ಕುಮಾರನಂತೂ ಹುಚ್ಚನಂತೆ ಅಳುತ್ತಾ ಶ್ರೀನಿವಾಸಪುರದಲ್ಲೆಲ್ಲಾ ಓಡಾಡುತ್ತಿದ್ದರು.

ಪತ್ರಕರ್ತರಿಗಂತೂ ಕಂಬಾಲಪಲ್ಲಿ ಘಟನೆಯನ್ನು ವರ್ಣಿಸಲು ಪದಪುಂಜಗಳಿಗೇ ಅಭಾವ ಬಂದು



"ಸಂಪಾದಕೀಯ ಬರೆದುಬಿಡಿ ಸಾಕು" ಎಂದು ತಮ್ಮ ತಮ್ಮ ಮಾಲೀಕರ ಗೋಸ್ಟ್ ರೈಟರ್‌ಗಳಿಗೆ ಹೇಳಿಬಿಟ್ಟಿದ್ದರು.

ಇಡೀ ಕರ್ನಾಟಕದ ತುಂಬಾ ಇರುವ ಲೈಟ್ ಕಂಬಗಳಿಗೆಲ್ಲಾ ಬೆಂಕಿಯಲ್ಲಿ ದಹಿಸಿ ಹೋದ ಏಳು ಜನರ ಕಟೌಟ್ ಫ್ಲೆಕ್ಸ್‌ಗಳನ್ನು ನೇತು ಹಾಕಲಾಗಿತ್ತು. ದಲಿತರಿಗೆ ಈ ಗತಿ ಕಾಣಿಸಿದ ಕೊಲೆಗಡುಕರು ದೊಂದಿ ಹಿಡಿದೇ ತಿರುಗಾಡುತ್ತಿದ್ದರು. ಪೊಲೀಸರು ಹೋಗಿ ಅವರ ಕೈಯಿಂದ ಉರಿಯುವ ಪಂಜುಗಳನ್ನು ಕಿತ್ತುಕೊಳ್ಳಲಾಗದೆ ನಮಗೆ ಮೇಲಿನಿಂದ ಆಜ್ಞೆ ಬಂದಿಲ್ಲವೆಂದು ಅವರ ಜೊತೆಯೇ ತಿರುಗುತ್ತಿದ್ದರು.

ಕಡೆಗೂ ಕೇಸಾಯಿತು. ವಿಚಾರಣೆ ನಡೆಯಿತು. ಕೋರ್ಟು ಏಳು ಜೀವಕ್ಕೆ ಬೆಂಕಿ ಹಚ್ಚಿದ ಬೆಂಕಿಯನ್ನು ಪತ್ತೆಹಚ್ಚಲಾಗಲಿಲ್ಲ. ಕೇಸು ಖುಲಾಸೆಯಾಯ್ತು.

ಕೇಸು ಖುಲಾಸೆಗೊಂಡಾಗಲೂ ಅಷ್ಟೇ, ನಾಡಿನ ದುಃಖ ಮತ್ತೆ ಕಟ್ಟೆಯೊಡೆಯಿತು.

ಆ ಘಟನೆಯ ನಂತರ ಮತ್ತೆ ಅಂತದೇ ದುಃಖವನ್ನು ಕೋಲಾರ, ತುಮಕೂರು, ರಾಮನಗರ ಅನುಭವಿಸಿದವಂತಲ್ಲಾ. ಎಷ್ಟೇ ಆಗಲಿ, ಶ್ರೇಣೀಕೃತ ಸಮಾಜದ ಕಟ್ಟಕಡೆಯ ಸಾವುಗಳಿಗೂ, ಪ್ರಾಣಿಗಳ ಸಾವುಗಳಿಗೂ ಅಂತಹ ವ್ಯತ್ಯಾಸವಿಲ್ಲವೆಂಬುದು ಪ್ರಸ್ತುತ ಹೇಸಿಗೆ ರಾಜಕಾರಣದ ಕಣ್ಣೀರು ನೋಡಿದವರಿಗೆಲ್ಲ ಅನ್ನಿಸಿದೆಯಂತಲ್ಲಾ, ಥೂತ್ತೇರಿ!

******

ಎಸ್ಸೆಂ ಕೃಷ್ಣ ಅವರ ಕಾಲದಲ್ಲಿ ಒಬ್ಬ ಇಂಜಿನಿಯರ್ ಆತ್ಮಹತ್ಯೆ ಮಾಡಿಕೊಂಡನಂತಲ್ಲಾ, ಎಲ್ಲಾ ದಿನಪತ್ರಿಕೆಗಳೂ ಲೋಕಲ್ ಪತ್ರಿಕೆಯೊಡನೆ ಸ್ಪರ್ಧೆಗೆ ಬರುವುದರಿಂದ ಆ ಸುದ್ದಿ ಆಯಾ ಜಿಲ್ಲೆಯ ಎರಡನೇ ಪುಟದಲ್ಲಿ ಎರಡಿಂಚಿನ ನ್ಯೂಸಾಗಿತ್ತು. ಇಂಜಿನಿಯರ್ ಡೆತ್‌ನೋಟಿನಲ್ಲಿ "ಮುಖ್ಯಮಂತ್ರಿ ಕರೆದು ಸಭೆ ಮಾಡಬೇಕಿದೆ ಎಂದು ಶಾಸಕ ಹಣ ಕೇಳಿ ಹಿಂಸೆ ಕೊಡುತ್ತಿದ್ದಾನೆ. ಜೊತೆಗೆ ಒಂದು ಒಳ್ಳೆಯ

ಥೂತ್ತೇರಿ

▶ ಯಾಹೂ


ಮೊಬೈಲ್ ತೆಗೆದುಕೊಡು, ಇಲ್ಲಾಂದ್ರೆ ನಿನ್ನ ಅಕ್ರಮದ ಬಗ್ಗೆ ಬರೆಯುತ್ತೇನೆ ಎಂದು ಪತ್ರಕರ್ತನೊಬ್ಬ ಪೀಡಿಸುತ್ತಿದ್ದಾನೆ.... ಹೀಗೆ ತೊಂದರೆ ಕೊಟ್ಟವರ ಪಟ್ಟಿ ತಯಾರಿಸಿ ಇಂಜಿನಿಯರ್ ಇಹಲೋಕ ತ್ಯಜಿಸಿದ್ದನಂತಲ್ಲಾ. ಆ ಇಂಜಿನಿಯರ್‌ಗೆ ಮೊಬೈಲ್ ಕೊಡಿಸಲು ಗಂಟುಬಿದ್ದಿದ್ದ ಪತ್ರಕರ್ತನೆ "ರವಿ ಸಾವಿಗೆ ಸಿಬಿಐನಿಂದ ಮಾತ್ರ ನ್ಯಾಯ ಸಿಗುತ್ತೆ" ಎಂದು ಪ್ರತಿಭಟನೆ ಮಾಡಿದನಂತಲ್ಲಾ, ಇದಲ್ಲವೆ ಮಾಧ್ಯಮದವರ ಮರ್ಮ. ಥೂತ್ತೇರಿ!!

******

"ಸಿಬಿಐ ಎಂದರೇನು? ಚೋರ್ ಬಚಾವ್ ಇನ್‌ಸ್ಟಿಟ್ಯೂಷನ್" ಎಂದು ಹೊಸ ವ್ಯಾಖ್ಯಾನ ನೀಡಿದ್ದ ಮಾಜಿ ಪ್ರಧಾನಿಗಳಾದ ದೇವೇಗೌಡರು "ನಾನು ಹಾಗೆ ಹೇಳಿಯೇ ಇಲ್ಲ" ಎಂದು ವರಸೆ ಬದಲಿಸಿದ್ದಾರಂತಲ್ಲಾ. ಈ ಬದಲಾವಣೆಗೆ ಕಾರಣ ಕೇಂದ್ರದಲ್ಲಿ ಬದಲಾಗಿರುವ ಸರ್ಕಾರ. ಅದು ಬಂದು ಇಷ್ಟು ದಿನವಾದರೂ ಮೋದಿಯ ಮೋಸದ ಮಾತುಗಳಿಗೆ ಮೌನ ವಹಿಸಿರುವ ದೇವೇಗೌಡರು, ಲೋಕಸಭೆಯಲ್ಲಿ ಸಿಕ್ಕ ಅವಕಾಶದಲ್ಲಿ ಮಾತಾಡಿದ್ದು ತಾವೇ ಕರ್ನಾಟಕಕ್ಕೆ ತಂದು ಕೂರಿಸಿದ ಹೇಗೆಯ [illegible] ವ್ಯವಹಾರದ ಬಗ್ಗೆಯಂತಲ್ಲಾ. ಅದೇನಾದರಾಗಲಿ, ಕರ್ನಾಟಕದಲ್ಲಿ ಅವರು ನಿದ್ದೆ ಮಾಡದಂತೆ ಮಾಡಿರುವ "ಸಿದ್ದರಾಮಯ್ಯನನ್ನು ಗದ್ದುಗೆಯಿಂದ ಇಳಿಸದ ಹೊರತು ಮುದ್ದೆ ತಿಂದರೂ ಸುಖವಿರುವುದಿಲ್ಲ" ಎಂದು ಶಪಥವನ್ನು ಮಾಡಿದಂತಲ್ಲಾ. ಅದು ಕೇಳಿಸಿಕೊಂಡ ಬಲಿತ [illegible] [illegible] ಉಂಟು. ಹೇಡಿ ಹೋದ [illegible] [illegible] ಸುದ್ದಿ [illegible], ಥೂತ್ತೇರಿ!!!

ಪುಸ್ತಕ ಪರಿಚಯ

ಕಾಫ್ಕಾಲ್ಯಾಂಡ್ ಭಾರತ



"ಪ್ರಾಯಶಃ ಜೋಸೆಫ್.ಕೆ ವಿರುದ್ಧ ಯಾರೋ ಸುಳ್ಳು ಆರೋಪ ಹೊರಿಸಿರಬೇಕು; ಅವನು ಯಾವ ತಪ್ಪನ್ನೂ ಮಾಡಿರದಿದ್ದರೂ ಒಂದು ದಿನ ಬೆಳಗ್ಗೆ ಅವನನ್ನು ಬಂಧಿಸಲಾಯಿತು." ಇದು ಜರ್ಮನ್ ಲೇಖಕ ಫ್ರಾಂಜ್ ಕಾಫ್ಕನ ಲೋಕಖ್ಯಾತ ಕಾದಂಬರಿ 'ದ ಟ್ರಯಲ್'ನ ಮೊದಲ ಸಾಲು. 1915ರಲ್ಲಿ ಪ್ರಕಟವಾದ ಈ ಕಾದಂಬರಿ, ಶತಮಾನ ಕಳೆದರೂ ತನ್ನ ಸಮಕಾಲೀನತೆಯನ್ನು ಕಿಂಚಿತ್ತೂ ಕಳೆದುಕೊಂಡಿಲ್ಲ. ಕಾದಂಬರಿಯ ಮೊದಲ ಸಾಲನ್ನೆ ನೋಡಿ. ಯಾವ ಅಲಂಕಾರವೂ ಇಲ್ಲದ ಆ ಬೋಳು ಮಾತು ಎಲ್ಲ ಕಾಲದ ಎಲ್ಲ ದೇಶಗಳ ಯಜಮಾನಿಕೆ ಮತ್ತು ನ್ಯಾಯವ್ಯವಸ್ಥೆಯ ರೂಪಕವಾಗುವಷ್ಟು ಶಕ್ತಿಶಾಲಿಯಾಗಿದೆ. ಭಾರತದ ಜೈಲುಗಳಲ್ಲಿರುವ ಶಂಕಿತ ಮುಸ್ಲಿಮ್ ಭಯೋತ್ಪಾದಕರು ಮತ್ತು ಲಕ್ಷಾಂತರ ವಿಚಾರಣಾ ಪೂರ್ವ ಕೈದಿಗಳನ್ನು ಸಹ (ಇವರಲ್ಲಿಯೂ ಮುಸ್ಲಿಮರದ್ದೇ ಜಾಸ್ತಿ ಸಂಖ್ಯೆ) ಆ ವಾಕ್ಯ ಒಳಗೊಳ್ಳುವಂತಿದೆ.

ಈ ದೇಶದ ಕಾನೂನು ವ್ಯವಸ್ಥೆ ಇಲ್ಲಿನ ಅಲ್ಪಸಂಖ್ಯಾತರಿಗೆ, ದಲಿತರಿಗೆ, ಆದಿವಾಸಿಗಳಿಗೆ ಮತ್ತು "ಅಂಚಿನಲ್ಲಿರುವ" ಎಲ್ಲರಿಗೂ ಭೀಕರ ದುಃಸ್ವಪ್ನವಾಗಿದೆ. ಅವರು ಮುಸ್ಲಿಮರಾದರೆ ಭಯೋತ್ಪಾದಕರು ಎಂದು ಸಂದೇಹ ಪಡುವುದಕ್ಕೆ ಅವರ ಧರ್ಮವೇ ಕಾರಣವಾಗುತ್ತದೆ. ಅವರು ಆದಿವಾಸಿಗಳೋ ಎಡಪಂಥದ ಹೋರಾಟಗಾರರೋ ಆದರೆ ಅವರು "ಶಂಕಿತ ನಕ್ಸಲ"ರಾಗುತ್ತಾರೆ. ಅವರ ಕೈಯಲ್ಲಿ ಬೈಬಲ್ಲು ಇದ್ದರೆ ಅವರು "ಮತಾಂತರಿ"ಗಳಾಗುತ್ತಾರೆ. ಒಟ್ಟಿನಲ್ಲಿ "ಅನ್ಯಮತೀಯ" ಅಥವಾ "ಭಿನ್ನಮತೀಯ"ರಾಗಿರುವುದೇ ಭಾರತದಲ್ಲಿ ಈಗ ಅಪರಾಧವಾಗಿದೆ.

ಇಲ್ಲಿ ಎಲ್ಲವೂ ತಲೆಕೆಳಗಾಗಿದೆ; ಆದರೆ ಜನರು ಮಾತ್ರ ಮಾಮೂಲಿನಂತೆ ಬದುಕು ಸಾಗಿಸುತ್ತಿದ್ದಾರೆ. ಕಾಫ್ಕ ತನ್ನ ಕಾದಂಬರಿಯಲ್ಲಿ ನಿರೂಪಿಸುವುದು ಇಂತಹದ್ದೇ ಒಂದು ಅಸ್ವಸ್ಥ ಸ್ಥಿತಿಯನ್ನು. ಕಾದಂಬರಿಯ ನಾಯಕ ಜೋಸೆಫ್.ಕೆ ಕಾರಣವಿಲ್ಲದೆ ಕೋರ್ಟು ಕಚೇರಿ ಅಲೆಯಬೇಕಾಗುತ್ತದೆ; ಕಾರಣವಿಲ್ಲದೆ ಅವನನ್ನು ಬಂಧಿಸಲಾಗುತ್ತದೆ. ಅವನಿಗೆ ಅನ್ಯಾಯವಾಗುತ್ತಿದೆ; ಆದರೆ ಅದು ಕಾನೂನಿನ ಕ್ರಮಕ್ಕೆ ಸರಿಯಾಗಿ ಆಗುತ್ತಿದೆ. ಭಾರತದ ಜೈಲುಗಳಲ್ಲಿ ದಿನವೆಣಿಸುತ್ತಿರುವ ಅಸಂಖ್ಯ ನಿರಪರಾಧಿಗಳ ಪಾಡು ಕೂಡ ಅದೇ ಅಲ್ಲವೆ? ಇಲ್ಲಿ ಎಲ್ಲವೂ ಕಾನೂನುರೀತ್ಯಾ ನಡೆಯುತ್ತದೆ; ಆದರೆ ನ್ಯಾಯ ಮಾತ್ರ ನಾಪತ್ತೆ. ತನ್ನ ಕೃತಿಯನ್ನು ಮನೀಶಾ 'ಕಾಫ್ಕಾಲ್ಯಾಂಡ್' ಎಂದು ಕರೆದಿರುವುದು ಅತ್ಯಂತ ಸೂಕ್ತವಾಗಿದೆ; ಇಂದಿನ ಭಾರತವನ್ನು ವರ್ಣಿಸಲು ಅದಕ್ಕಿಂತ ಉತ್ತಮವಾದ ಪದ ಇನ್ನೊಂದಿಲ್ಲ.

ತನ್ನ ಕೃತಿಯ ಮೊದಲಿಗೇನೆ ಲೇಖಕಿ, ಭಾರತದಲ್ಲಿ ಎಂತಹ ಅಕ್ರಮವನ್ನಾದರೂ ಕಾನೂನುರೀತ್ಯಾ ಸಕ್ರಮಗೊಳಿಸುವುದಕ್ಕೆ ಒಂದು ಉದಾಹರಣೆ ಕೊಡುತ್ತಾರೆ. ಶಂಕಿತ ಭಯೋತ್ಪಾದಕ ಎಂಬ ಆರೋಪದ ಮೇಲೆ ಸಿಕ್ಕಸಿಕ್ಕ ಮುಸ್ಲಿಮರನ್ನು ಬಂಧಿಸಿ, ಹಲವು ದಿನಗಳ ಕಾಲ ಕಸ್ಟಡಿಯಲ್ಲಿ ಇರಿಸಿಕೊಂಡು ಅವರ ರಿಪೇರಿ ಮಾಡುವುದು, ಆ ನಂತರ ತಮಗೆ ಅನುಕೂಲ ಕಂಡಾಗ ಅವರನ್ನು ನ್ಯಾಯಾಧೀಶರ ಎದುರು ಹಾಜರುಪಡಿಸುವುದು ಪೊಲೀಸು ಠಾಣೆಗಳಲ್ಲಿ ಲಾಗಾಯ್ತಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಆದರೆ ಆರೋಪಿಯೊಬ್ಬನ ಬಂಧನವಾದ 24 ಗಂಟೆ ಒಳಗೆ ಅವನನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಬೇಕು ಎಂದು ಕಾನೂನು ಹೇಳುತ್ತದೆ. ಮನೀಶಾ ಮುಂಬಯಿಯ ಭಯೋತ್ಪಾದನಾ ನಿಗ್ರಹಪಡೆ (A.T.S)ನ ಅಧಿಕಾರಿಯೊಬ್ಬನನ್ನು "ನೀವು ಯಾಕೆ ಆರೋಪಿಗಳನ್ನು ಕಾನೂನುಬಾಹಿರವಾಗಿ ಕಸ್ಟಡಿಯಲ್ಲಿ ಇರಿಸುತ್ತೀರಿ?" ಎಂದು ಪ್ರಶ್ನಿಸಿದಾಗ ಅದರಿಂದ ತುಂಬ ನೊಂದುಕೊಂಡವನಂತೆ ಆತ "ಕಾನೂನುಬಾಹಿರ ಬಂಧನವೆ? ನಾವು ಯಾವತ್ತೂ ಹಾಗೆ ಮಾಡುವುದಿಲ್ಲ. ಆರೋಪಿಯನ್ನು ಬಂಧನವಾದ 23 ಗಂಟೆಗೆ ನಾವು ವಾಕ್ ಕರೆದುಕೊಂಡು ಹೋಗುತ್ತೇವೆ" ಎಂದು ಉತ್ತರಿಸಿದ! (ಪುಟ 2). 2008ರಲ್ಲಿ ಯು.ಪಿ.ಎ ಸರಕಾರ ಜಾರಿಗೆ ತಂದ ಅಪರಾಧ ನಿಯಂತ್ರಣ ಕಾನೂನಿನಲ್ಲಿ ಪೊಲೀಸರಿಗೆ ಈ ಕಿರಿಕಿರಿಯೂ ಇಲ್ಲ. ನ್ಯಾಯಾಧೀಶರ ಮುಂದೆ ಹಾಜರುಪಡಿಸದೆ ಯಾರನ್ನೇ ಆಗಲಿ 6 ತಿಂಗಳವರೆಗೆ ಬಂಧನದಲ್ಲಿಡುವ ಅಧಿಕಾರವನ್ನು ಪೊಲೀಸರಿಗೆ ಆ ಕಾನೂನು ನೀಡುತ್ತದೆ. ಈ ಬಗೆಯ "ಕಾನೂನಿನ ಆಳ್ವಿಕೆ"ಯಲ್ಲಿ ಯಾವ ತಪ್ಪೂ ಮಾಡದೆ ಕೆಲವರು ಯಾತನೆ ಪಡಬೇಕಾಗುತ್ತದೆ. ಇದು ನಮ್ಮ ಪ್ರಜಾಪ್ರಭುತ್ವಕ್ಕೇ ಒಂದು ಕಳಂಕ. ಆದರೆ ವಿಪರ್ಯಾಸವೆಂದರೆ ನ್ಯಾಯದ ಹೆಸರಿನಲ್ಲಿ ನಡೆಯುವ ಇಂತಹ ಅನ್ಯಾಯ ಪ್ರಜೆಗಳ ಗಮನಕ್ಕೆ ಬಂದರೆ ಮಾತ್ರ ಅವರು ಇದನ್ನು ಕಳಂಕವೆಂದು ಗುರುತಿಸಿಯಾರು. ನಿರಪರಾಧಿಗಳನ್ನು ಶಿಕ್ಷಿಸುವ ನಮ್ಮ ಪ್ರಭುತ್ವ ವ್ಯವಸ್ಥೆ ಅದನ್ನು ಮುಚ್ಚಿಹಾಕುವುದಕ್ಕೆ ಅಗತ್ಯವಾದ ಏರ್ಪಾಡುಗಳನ್ನು ಸಹ ಮಾಡಿಕೊಂಡಿದೆ. ಮನೀಶಾ ಸೇಥಿ ತಮ್ಮ ಪುಸ್ತಕದಲ್ಲಿ ಶಂಕಿತ ಭಯೋತ್ಪಾದಕರ ಕೆಲವು ಪ್ರಕರಣಗಳ ವಿಶ್ಲೇಷಣೆಯ ಮುಖಾಂತರ ಭಾರತದ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಹಕ್ಕುಗಳೇ ಊನಗೊಂಡಿರುವ ರೋಗಗ್ರಸ್ತ ಸ್ಥಿತಿಯನ್ನು ಮನಗಾಣಿಸುತ್ತಾರೆ.

ದೆಹಲಿಯ ಪ್ರತಿಷ್ಠಿತ ಜಮಿಯ ಮಿಲಿಯ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಿಕೆಯಾಗಿರುವ ಮನಿಶಾ, ಕಳೆದ ಹಲವು ವರ್ಷಗಳಿಂದ ಮಾನವ ಹಕ್ಕು ಹೋರಾಟದಲ್ಲಿ ತೀವ್ರವಾಗಿ ತೊಡಗಿಕೊಂಡಿರುವವರು. ಶಂಕಿತ ಭಯೋತ್ಪಾದಕರು ಎಂಬ ಆರೋಪದ ಮೇಲೆ ಬಂಧಿತರಾದ ಅಮಾಯಕ ಪ್ರಜೆಗಳಿಗೆ ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿರುವ ಜಮಿಯ ಮಿಲಿಯ ಅಧ್ಯಾಪಕರ ಸಂಘಟನೆಯಲ್ಲೂ ಮನಿಶಾ ಓರ್ವ ಸಕ್ರಿಯ ಕಾರ್ಯಕರ್ತೆಯಾಗಿದ್ದು ಪ್ರಸ್ತುತ ಕೃತಿಯಲ್ಲಿ ಅವರು ವರ್ಣಿಸುವ ಅಮಾಯಕ ಆರೋಪಿಗಳ ಯಮಯಾತನೆ ಸ್ವತಃ ಅವರೇ ಅನುಭವಿಸಿ ಬರೆದಂತಿದೆ.


ಭಯೋತ್ಪಾದಕರಿಂದ ಭಾರತ ಎದುರಿಸುತ್ತಿರುವ ಸವಾಲುಗಳ ಬಗ್ಗೆ ನಮ್ಮ ದೇಶದ ಪ್ರತಿಷ್ಠಿತ ಆಂತರಿಕ ಭದ್ರತಾ ತಜ್ಞರಿಗೆ ಏನು ಅನ್ನಿಸುತ್ತದೆ? ಮನೀಶಾ ಸೇಥಿಯವರ ಪುಸ್ತಕ ಈ ತಜ್ಞರ ಪೂರ್ವಗ್ರಹಗಳ ವಿಶ್ಲೇಷಣೆಯೊಂದಿಗೆ ಪ್ರಾರಂಭವಾಗುತ್ತದೆ. ಸೈನ್ಯ ಅಥವಾ ಪೊಲೀಸು ಇಲಾಖೆಯಲ್ಲಿ ದೀರ್ಘಕಾಲ ಹಿರಿಯ ಅಧಿಕಾರಿಗಳಾಗಿ "ಸೇವೆ" (ಸಂಬಳ ತೆಗೆದುಕೊಂಡು) ಸಲ್ಲಿಸಿ ಈಗ ನಿವೃತ್ತರಾಗಿರುವವರೇ ನಮ್ಮ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುವ ಈ 'ಆಂತರಿಕ ಭದ್ರತಾ ತಜ್ಞರು'. ಆದರೆ ಈ ತಜ್ಞರ ವಿದ್ವತ್ಪೂರ್ಣ ಕ್ಲೀಷೆಗಳ ಹಿಂದೆ ಇರುವುದು ಜನಸಾಮಾನ್ಯರ ಕಾಮನ್ ಸೆನ್ಸ್ ಮಟ್ಟದ ಪೂರ್ವಗ್ರಹಗಳು! ಇಂತಹ ಒಬ್ಬ ತಜ್ಞ ಇತ್ತೀಚೆಗೆ ಟೀವಿ ಕ್ಯಾಮರಗಳ ಮುಂದೆ, "ಇಸ್ಲಾಂನಲ್ಲಿ ಜಿಹಾದ್ ಧಾರ್ಮಿಕ ಕರ್ತವ್ಯವಾಗಿದೆ.... ಹಿಂದೂಗಳು ಹಿಂಸೆಗಿಳಿಯುವುದಿಲ್ಲ; ಅವರು ಕ್ರೂರಿಗಳಾಗುವುದು ಸಾಧ್ಯವೇ ಇಲ್ಲ" ಇತ್ಯಾದಿಯಾಗಿ ಬಡಬಡಿಸಿದ! (ಪುಟ 12). ಅವನ ಪ್ರಕಾರ ಅಸೀಮಾನಂದ, ಸಾಧ್ವೀ ಪ್ರಜ್ಞಾ ಮತ್ತು ಅಂತಹವರು ನಡೆಸಿದ ಬಾಂಬ್ ಸ್ಫೋಟಗಳು ಹಿಂಸೆಯಲ್ಲ; ಬದಲು ಅವು ಮುಸ್ಲಿಮ್ ಉಗ್ರವಾದಿಗಳ ಹಿಂಸೆಗೆ ಕೇವಲ ಪ್ರತಿಕ್ರಿಯೆ. 'ತಮ್ಮದೇ' ದೇಶದ ಮೇಲೆ ಹಿಂದೂಗಳು ಬಾಂಬ್ ಎಸೆಯಲು ಸಾಧ್ಯವೆ? ಎಂದು ಆತ ವಿಸ್ಮಯ ವ್ಯಕ್ತಪಡಿಸುತ್ತಾನೆ. (ಪುಟ 14). ಭಾರತ ಹಿಂದೂಗಳ ದೇಶ, ಇದು ಅವರ ಪಿತೃಭೂಮಿ ಮತ್ತು ಪುಣ್ಯ ಭೂಮಿ; ಮುಸ್ಲಿಮರಿಗೆ ಮತ್ತು ಕ್ರೈಸ್ತರಿಗೆ ಭಾರತ ಕೇವಲ ವಾಸಸ್ಥಳ ಎಂಬ ಸಾವರ್ಕರ್ ಸಿದ್ಧಾಂತವೇ ಅವನ ಅಭಿಪ್ರಾಯವನ್ನೂ ರೂಪಿಸಿದೆ!

ಇನ್ನೊಂದು ಉದಾಹರಣೆ ನೋಡಿ: 2006 ಜುಲೈ 11 ರಂದು ಮುಂಬಯಿಯ ಲೋಕಲ್ ಟ್ರೈನುಗಳಲ್ಲಿ 10 ನಿಮಿಷದ ಅವಧಿಯೊಳಗೆ 7 ಬಾಂಬ್ ಸ್ಫೋಟ ನಡೆದು; 200 ಜನ ಸಾವಿಗೀಡಾಗಿ ನೂರಾರು ಜನ ಗಾಯಗೊಳ್ಳುತ್ತಾರೆ. ಇದೊಂದು ಘೋರ ವಿಧ್ವಂಸಕ ಕೃತ್ಯವೆನ್ನುವುದು ಅದರಿಂದ ಉಂಟಾದ ಸಾವುನೋವಿನ ಅಗಾಧತೆಯಿಂದಲೇ ಗೊತ್ತಾಗುತ್ತದೆ. ನ್ಯೂಯಾರ್ಕ್‌ನ ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ 2001ರಲ್ಲಿ ನಡೆದ ಬಾಂಬ್ ದಾಳಿಯನ್ನು 9/11 ಎಂದು ಚುಟುಕುಗೊಳಿಸಿ ಹೇಳಿದಂತೆ, ಮುಂಬಯಿ ಬಾಂಬ್ ಸ್ಫೋಟದ ವರದಿಗಳನ್ನು ಇನ್ನಷ್ಟು ರೋಚಕಗೊಳಿಸಲು, ನಮ್ಮ ಮಾಧ್ಯಮಗಳು ಅದನ್ನು ಭಾರತದ 7/11 ಎಂದು ಕರೆದವು; ಅಂದರೆ 9/11ರ ಹಾಗೆ ಮುಂಬಯಿ ಸ್ಫೋಟದ ಒಳಸಂಚು ಕೂಡ ನಡೆದದ್ದು ಹೊರದೇಶವೊಂದರಲ್ಲಿ (ಪಾಕಿಸ್ತಾನ) ಮತ್ತು ಇದು ಮುಸ್ಲಿಮ್ ಭಯೋತ್ಪಾದಕರ ಕೃತ್ಯ ಎಂದು ಮಾಧ್ಯಮಗಳು ಮೊದಲೇ ತೀರ್ಮಾನಿಸಿಬಿಟ್ಟಿದ್ದವು. ವಿಚಾರಣಾಪೂರ್ವ ಕೈದಿಗಳ ಹಾಗೆ ವಿಚಾರಣಾಪೂರ್ವ ಅಭಿಪ್ರಾಯಗಳು! (ಪುಟ 14) ಇದೇ ಬಗೆಯ ಪೂರ್ವಗ್ರಹಪೀಡಿತ ಮನಸ್ಥಿತಿಯಲ್ಲಿ ಈ ಸರಣಿ ಬಾಂಬ್ ಸ್ಫೋಟದ ವಿಚಾರಣೆ ಕೈಗೆತ್ತಿಕೊಂಡ ಮುಂಬಯಿ A.T.S ತಂಡ ದೇಶದ ವಿವಿಧೆಡೆಗಳಲ್ಲಿ 13 ಮುಸ್ಲಿಮರನ್ನು ಬಂಧಿಸುತ್ತದೆ. ಇವರ ಬಗ್ಗೆ ಸಂದೇಹ ಪಡುವುದಕ್ಕೆ ಪೊಲೀಸರು ನೀಡಿದ ಎರಡೇ ಎರಡು ಆಧಾರಗಳೆಂದರೆ ಬಂಧಿತರ ಫೋನ್ ಕರೆಯ ದಾಖಲೆ ಮತ್ತು ಮಂಪರು ಪರೀಕ್ಷೆಯ ವರದಿ. ಆದರೆ ಪೊಲೀಸರು ಕೇಸಿನ ವಿಚಾರಣೆಯ ಯಾವ ಹಂತದಲ್ಲೂ ನ್ಯಾಯಾಲಯಕ್ಕೆ ತಮ್ಮ ಬಳಿ ಇರುವ ಫೋನ್ ದಾಖಲೆಗಳನ್ನು ಒದಗಿಸಲಿಲ್ಲ. ಯಾಕೆಂದರೆ ಅವರ ಬಳಿ ತಮ್ಮ ಆರೋಪ ರುಜುವಾತುಪಡಿಸುವ ಯಾವ ದಾಖಲೆಯೂ ಇರಲಿಲ್ಲ. ವಾಸ್ತವವಾಗಿ A.T.S ಪೊಲೀಸರು ವಶಪಡಿಸಿಕೊಂಡ ಆರೋಪಿಗಳ ಫೋನ್ ದಾಖಲೆಗಳು ಅವರ ನಿರಪರಾಧಿತ್ವವನ್ನು ಸಾಬೀತುಪಡಿಸುವಂತಿದ್ದವು.

ಪೊಲೀಸರು ಈ ಆರೋಪಿಗಳ ವಿಚಾರಣೆ ನಡೆಸಿದ ವಿಧಾನವಂತೂ ನೂರಕ್ಕೆ ನೂರು ಕಾನೂನುಬಾಹಿರವಾಗಿತ್ತು! ಆರೋಪಿಗಳನ್ನು ಕಂಬಕ್ಕೆ ಕಟ್ಟಿ, ಉಸಿರಾಡಲು ಬಿಡದಂತೆ ಪ್ರಜ್ಞೆ ಕಳೆದುಕೊಳ್ಳುವವರೆಗೆ ಮುಖಕ್ಕೆ ನೀರುಹಾಯಿಸುವುದು, ಕುರ್ಚಿಗೆ ಕಟ್ಟಿ ಹಾಕಿ ತಲೆಗೆ ಎಡೆಬಿಡದೆ ಬೊಟ್ಟು ಬೊಟ್ಟು ನೀರು ಬಿಟ್ಟು, ಕೆಲವು ಗಂಟೆಗಳ ನಂತರ ಆರೋಪಿಯ ದೇಹದ ಇಂಚು ಇಂಚು ಕೂಡ ನೋವಿನಲ್ಲಿ ನರಳುವಂತೆ ಮಾಡುವುದು, ಕಾಲು ಸೊಂಟಗಳನ್ನು 180 ಡಿಗ್ರಿ ಅಗಲಿಸುವುದು, ದೇಹದ ಖಾಸಗಿ ಜಾಗಗಳಿಗೆ ಎಲೆಕ್ಟ್ರಿಕ್ ಶಾಕ್ ಕೊಡುವುದು, ಹಿಟ್ಟಿನ ಮಿಲ್ಲಿನ ಬೆಲ್ಟುಗಳಿಂದ ಹೊಡೆಯುವುದು, ಆರೋಪಿಗಳ ಕಣ್ಣೆದುರೇ, ಅವ[ರ] ಮನೆಯವರನ್ನು ಬೆತ್ತಲುಗೊಳಿಸುವುದು- ಬಂಧಿತರ ಬಾಯಿ ಬಿಡಿಸಲು ಪೊಲೀಸರು ಅನುಸರಿಸುತ್ತಿದ್ದ ಕ್ರಮಗಳ ಒಂದು ಸ್ಯಾಂಪಲ್ ಇದು. ಮಹಾರಾಷ್ಟ್ರ ಅಪರಾಧ ನಿಯಂತ್ರಣ ಕಾಯ್ದೆ (1998) ಪ್ರಕಾರ ಪೊಲೀಸು ಕಸ್ಟಡಿಯಲ್ಲಿ ಆರೋಪಿಗಳು ಕೊಡುವ ತಪ್ಪೊಪ್ಪಿಗೆಯ ಹೇಳಿಕೆಯನ್ನು ಸಹ ನ್ಯಾಯಾಲಯ ಸಾಕ್ಷ್ಯ ಎಂದು ಪರಿಗಣಿಸುತ್ತದೆ! ಈ ಕುರಿತು ಆರೋಪಿಗಳು ಮನವಿ ಮಾಡಿಕೊಂಡರೂ ಕೆ[ಳ] ಹಂತದ ನ್ಯಾಯಾಲಯಗಳು ಅವುಗಳನ್ನು ತಳ್ಳಿಹಾಕಿ ಅವ[ರ] ಬಂಧನದ ಅವಧಿಯನ್ನು ಪದೇ ಪದೇ ವಿಸ್ತರಿಸುತ್ತಿದ್ದವು (ಪುಟ 18,19).

ಮುಂಬಯಿ ಹೈಕೋರ್ಟ್‌ನಲ್ಲಿ ಇವರ ಪರವಾ[ಗಿ] ವಾದಿಸಿದ ಖ್ಯಾತ ಮಾನವ ಹಕ್ಕು ವಕೀಲ ಶಹೀದ್ ಅಜ್ಮಿ, ನ್ಯಾಯಾಧೀಶರ ಕೋಮುದ್ವೇಷದ ನಿಲುವ[ನ್ನು] ಕತ್ತೆಯಂತೆ ವರ್ತಿಸುವ ಕಾನೂನು ಮುಂತಾದ[ವನ್ನು] ಧೈರ್ಯವಾಗಿ ಎದುರಿಸಿ ಪೊಲೀಸು ಕಸ್ಟಡಿಯಲ್ಲಿ ನಡೆಯು[ವ] ಈ ಚಿತ್ರಹಿಂಸೆಯ ವಿವರಗಳನ್ನು ಸಾರ್ವಜನಿಕರ ಗಮನ[ಕ್ಕೆ] ತಂದರು (ಪುಟ 19). ಶಹೀದ್ ಆಜ್ಮಿ ತನ್ನ ವಕೀ[ಲ] ವೃತ್ತಿಯ ಅಲ್ಪಾವಧಿಯಲ್ಲೇ 17 ಅಮಾಯಕ 'ಶಂಕಿ[ತ] ಭಯೋತ್ಪಾದಕ'ರ ಬಿಡುಗಡೆಗೆ ಕಾರಣರಾಗಿದ್ದರು. ಆದ[ರೆ] ಮುಂಬಯಿ ಬಾಂಬ್ ಸ್ಫೋಟದ ವಿಚಾರ[ಣೆ] ನಡೆಯುತ್ತಿದ್ದಾಗಲೇ ಅವರನ್ನು ಬಾಡಿಗೆ ಹಂತಕರಿಂದ ಕೊಲೆಮಾಡಿಸಲಾಯಿತು. 2012ರಲ್ಲಿ ತೆರೆಕಂಡ ಖ್ಯಾ[ತ] ಚಲಚ್ಚಿತ್ರ 'ಶಹೀದ್' (ನಿ.ಹನ್ಸಲ್ ಮೆಹ್ತಾ) ಶಹೀದ್ ಅಜ್ಮಿ ಅವರ ಧೀರೋದಾತ್ತ ಬದುಕನ್ನು ಆಧರಿಸಿದೆ.

ಮುಂಬೈ A.T.S ಪೊಲೀಸರು ಈ ಆರೋಪಿಗಳ ಶೇಪ್ ತೆಗೆದನಂತರ ಅವರನ್ನು ಮಂಪರು ಪರೀಕ್ಷೆಗಾಗಿ ಬೆಂಗಳೂರಿನ ಫೊರೆನ್ಸಿಕ್ ತಜ್ಞೆ ಡಾ.ಮಾಲಿನಿಯವರಿಗೆ ಒಪ್ಪಿಸಲಾಯಿತು. ದಾಖಲೆ ಪತ್ರಗಳ ಫೋರ್ಜರಿ ನಡೆಸಿದ್ದಕ್ಕಾ[ಗಿ] ಅವರನ್ನು ಈಗ ವಜಾಗೊಳಿಸಲಾಗಿದೆ. ಆರೋಪಿಗಳ ಒಪ್ಪಿಗೆ ಪಡೆಯದೆ ನಡೆಸು[ವ] ಮಂಪರು ಪರೀಕ್ಷೆಯ ವರದಿಗಳನ್ನು ನ್ಯಾಯಾಲಯ ಸಾಕ್ಷ್ಯಾಧಾರ ಎಂದು ಪರಿಗಣಿಸುವುದಿಲ್ಲ. ಆದರೂ ಮಂಪರು ಪರೀಕ್ಷೆ, ಪೊಲೀಸರು ಮತ್ತೆ ಮ[ತ್ತೆ] ಬಳಸುವ ಒಂದು ವಿಚಾರಣಾ ವಿಧಾನವಾಗಿದೆ. ಚಿತ್ರಹಿಂಸೆಯ ಹಾಗೆ ಮಂಪರುಪರೀಕ್ಷೆಯಿಂದಲೂ ಆರೋಪಿಯ ಬಾಯಿಂದ ಏನನ್ನು ಬೇಕಾದರೂ ಹೇಳಿಸಬಹುದು. ಆರೋಪಿ ಸಹಕರಿಸದಿದ್ದರೂ ಪೊಲೀಸರಿಗೆ ಬೇಕಾದ ವರದಿ ಕೊಡಲು ಡಾ.ಮಾಲಿನಿಯಂತಹವರು ಇರುತ್ತಾರೆ. ಉದಾಹರಣೆಗೆ ಆರೋಪಿಗೆ ಮಂಪರು ತರು[ವ] ಡ್ರಗ್ ಕೊಟ್ಟು "6ರ ನಂತರ ಬರುವ ಸಂಖ್ಯೆ ಯಾವುದು?" ಎಂದು ಪ್ರಶ್ನಿಸಲಾಗುತ್ತದೆ; ಆರೋಪಿ "7" ಎಂದು ಸತ್ಯವಾಗಿ ಮತ್ತು ಸರಿಯಾಗಿ ಉತ್ತರಿಸುತ್ತಾನೆ. ಆರೋಪಿ 7 ಬಾಂಬ್‌ಗಳನ್ನು ಸ್ಫೋಟಿಸಿರುವುದನ್ನು ಒಪ್ಪಿಕೊಂಡಿರುವುದಾಗಿ ಡಾ.ಮಾಲಿನಿ ವರದಿ ಮಾಡುತ್ತಾರೆ. ಪೊಲೀಸ[ರ] ಕಸ್ಟಡಿಯಲ್ಲಿ ಚಿತ್ರಹಿಂಸೆಗೆ ಒಳಗಾಗಿ ಆರೋಪಿಗಳ[ು] ಕೊಡುವ ಹೇಳಿಕೆಗಳು, ಅವುಗಳನ್ನು ಆಧರಿ[ಸಿ] ನ್ಯಾಯಾಲಯದ ಮುಂದೆ ಇರಿಸಲಾಗು[ವ] ಚಾರ್ಜ್‌ಶೀಟುಗಳು, ಅವುಗಳನ್ನೆ ಪರಮಸತ್ಯವೆಂದು ವರದಿ ಮಾಡು[ವ] ಮಾಧ್ಯಮಗಳು - ಇದು ನಮ್ಮ ದೇಶದ ನ್ಯಾಯವ್ಯವಸ್ಥೆ! ಕಡೆಯ ಪಕ್ಷ 2006ರ ಮಾಲೆಗಾವ್ ಮಸೀದಿ, 2007ರ ಹೈದರಾಬಾದಿನ ಮ[ಕ್ಕಾ] ಮಸೀದಿ ಮತ್ತು ಸಮ್ಝೋತ ಎಕ್ಸ್‌ಪ್ರೆಸ್ ರೈಲಿನ



ಕಾಫ್ಕಾಲ್ಯಾಂಡ್
ಲೇಖಕಿ: ಮನೀಶಾ ಸೇಥಿ
ಪ್ರಕಾಶಕರು: ತ್ರಿ ಎಸ್ಸೆಸ್, ಗುರ್‌ಗಾಂ, ದೆಹಲಿ


ಬಾಂಬ್ ಸ್ಫೋಟಗಳನ್ನು ನಡೆಸಿದ್ದು ಸ್ವಾಮಿ ...ನಂದ ಮತ್ತು ಇತರ ಹಿಂದೂ ಉಗ್ರವಾದಿಗಳು ...ಷ್ಟ ಬಹಿರಂಗಗೊಂಡ ಮೇಲಾದರೂ ನಮ್ಮ ...ಲಿಯ ಹಾಗೂ ಮಾಧ್ಯಮಗಳು ಹೆಚ್ಚು ಎಚ್ಚರದಿಂದ ಕರ್ತವ್ಯ ನಿರ್ವಹಿಸಬೇಕಾಗಿತ್ತು.

...ಂಬ್ ಸ್ಫೋಟ ನಡೆಸಿದ ಕ್ರಿಮಿನಲ್‌ಗಳು ...ವಾಗಿ ಓಡಾಡಿಕೊಂಡಿದ್ದು ಅಮಾಯಕ ಮುಸ್ಲಿಮರು ...ವಾಗಿ ಯಮಯಾತನೆ ಅನುಭವಿಸುವಂತಾಯಿತು ...ಸ್ಯವಾದರೂ ನಮ್ಮ ಪೊಲೀಸರು, ನ್ಯಾಯಾಧೀಶರು ... ಪತ್ರಕರ್ತರನ್ನು ಬಾಧಿಸಬೇಕಾಗಿತ್ತು. 2012ರಲ್ಲಿ ... ಪ್ರಮುಖ ವ್ಯಕ್ತಿಗಳನ್ನು ಕೊಲ್ಲಲು ಒಳಸಂಚು ...ಮ ಎಂಬ ಆರೋಪದಲ್ಲಿ ಡೆಕ್ಕನ್ ಹೆರಾಲ್ಡ್ ಪತ್ರಕರ್ತ ...ಮುರ್ ರಹಮಾನ್ ಸಿದ್ದಿಕಿ ಮತ್ತು ಇತರ 12 ... ಬೆಂಗಳೂರಿನಲ್ಲಿ ಬಂಧಿಸಲಾಯಿತು (ಪುಟ 114). ...ಗೆ ಪೊಲೀಸು ಅಧಿಕಾರಿಗಳು ನೀಡಿದ ಹೇಳಿಕೆಗಳನ್ನೇ ...ವಾಗಿ ಇರಿಸಿಕೊಂಡು ಸದ್ರಿ ಆರೋಪಿಗಳು ತಮ್ಮನ್ನೂ ...ಕೊಲ್ಲಲು ಯತ್ನಿಸಿದ್ದರು ಎಂದು ಕನ್ನಡದ ಇಬ್ಬರು ...ರು ಕಥೆ ಕಟ್ಟಿದರು. ಆದರೆ 6 ತಿಂಗಳ ನಂತರ ...ಯ ವಿಚಾರಣಾ ಪ್ರಾಧಿಕಾರ (ಎ.ಐ.ಎ) ಮುತಿಯುರ್ ...ನ್ ಸಿದ್ದಿಕಿ ನಿರ್ದೋಷಿ ಎಂದು ಸಾರಿದಾಗ ಈ ...ರಿಗೆ ತಮ್ಮ ಸಹ ಪತ್ರಕರ್ತನ ಕ್ಷಮೆ ಕೋರುವ ಸೌಜನ್ಯವೂ ಇರಲಿಲ್ಲ.

'ಎನ್‌ಕೌಂಟರ್' ಎಂಬ ಇಂಗ್ಲಿಷ್ ಶಬ್ದಕ್ಕೆ ...ಮುಖಿ, ಭೇಟಿ, ಮುಂತಾದವು ಶಬ್ದಕೋಶದ ...ಗಳು. ಆದರೆ ಈಗ ಭಾರತದಲ್ಲಿ ಶಂಕಿತ ...ತ್ಪಾದಕರು, ಶಂಕಿತ ನಕ್ಸಲರು ಅಥವಾ ಇದು ...ದೂ ಅಲ್ಲದ ಬರೇ ಕ್ರಿಮಿನಲ್‌ಗಳನ್ನು ಪೊಲೀಸರು ...ಕಿ ಕೊಂದು ಹಾಕುವುದನ್ನು ಎನ್‌ಕೌಂಟರ್ ಎಂದು ...ಲಾಗುತ್ತಿದೆ. ಈ ಶಬ್ದ ಇದೇ ಅರ್ಥದಲ್ಲಿ ದಿನನಿತ್ಯದ ...ಆಡುಮಾತಿನಲ್ಲೇ ಸೇರಿಕೊಂಡಿದೆ. ಅಂದರೆ ನಮ್ಮನ್ನು ...ಳಿಸಬೇಕಾಗಿದ್ದ ವಿದ್ಯಮಾನ ಈಗ ನಮ್ಮ ...ನ್‌ಸೆನ್ಸ್ ಆಗಿಬಿಟ್ಟಿದೆ. ಎನ್‌ಕೌಂಟರ್ ಮಾಡಿದ ...ೀಸು ಅಧಿಕಾರಿಗಳನ್ನು ನಮ್ಮ ನ್ಯಾಯಾಲಯಗಳು ...ಸೆಗೊಳಿಸುತ್ತವೆ; ನಮ್ಮ ಮಾಧ್ಯಮಗಳ ಸುದ್ದಿ ...ರು ಅವನ್ನು ಸಮರ್ಥಿಸುತ್ತಾರೆ. ಕಾನೂನನ್ನು ರಕ್ಷಿಸುವ ... ಹೊತ್ತವರೇ ಅದನ್ನು ಮುರಿಯುತ್ತಿದ್ದಾರೆ; ಮತ್ತು ... ಅವಶ್ಯ ಎಂದೂ ವಾದಿಸುತ್ತಿದ್ದಾರೆ. ಮನೀಶ ಸೇಥಿ ... ಪುಸ್ತಕದ ಡೆತ್ ಬೈ ಎನ್‌ಕೌಂಟರ್ ಎಂಬ ...ಯದಲ್ಲಿ ಈ ಕರಾಳ ವಿದ್ಯಮಾನವನ್ನು ನಿರೂಪಿಸುತ್ತಾರೆ. ... ಪ್ರಜಾಸತ್ತಾತ್ಮಕ ದೇಶಗಳಲ್ಲೂ ಆರೋಪಿಯನ್ನು ...ಧಿ ಎಂದು ತೀರ್ಮಾನಿಸುವುದಕ್ಕೆ ಕಾನೂನಿನ ವಿಧಿ ...ನಗಳಿವೆ; ಅಪರಾಧಿಗೆ ಕೊಡುವ ಶಿಕ್ಷೆಯ ಪ್ರಮಾಣ ಆತನ ಕೃತ್ಯಕ್ಕೆ ಅನುಗುಣವಾಗಿ ನಿಗದಿಯಾಗಿರುತ್ತದೆ. ... ಭಾರತದಲ್ಲಿ ಈಗ ಪೊಲೀಸರು ಮಾತ್ರವಲ್ಲ ...ಕ್ಷಮ ಪಂಡಿತರು ಸಹ ಎನ್‌ಕೌಂಟರ್ ಅಪರಾಧಿಗೆ ...ನೀಡುವ ಒಂದು ಶೀಘ್ರ ಹಾಗು ದಕ್ಷ ವಿಧಾನ ... ವಾದಿಸುತ್ತಾರೆ.

...ನ್‌ಕೌಂಟರ್‌ಗಳಿಗೆ ಹೆಸರು ಮಾಡಿರುವ ಪೊಲೀಸ್ ...ರಿಗಳ ಹೆಸರಿನಲ್ಲಿ ಬಾಲಿವುಡ್ ಸಿನಿಮಾಗಳು ಸಹ ...ವೆ. ಕಾಫ್ಕನ 'ದಿ ಟ್ರಯಲ್' ಕಾದಂಬರಿ ಥೇಟು ...ದ ಎನ್‌ಕೌಂಟರ್ ಕೊಲೆಗಳ ಹಾಗಿರುವ ಒಂದು ...ಯೊಂದಿಗೆ ಕೊನೆಗೊಳ್ಳುತ್ತದೆ. ಜೋಸೆಫ್.ಕೆಯನ್ನು ... ದಡಿಯರು ಊರ ಹೊರಗಿನ ಏಕಾಂತ ಸ್ಥಳಕ್ಕೆ ಕೊಂಡು ಹೋಗಿ ಚಾಕುವಿನಲ್ಲಿ ಇರಿದು ಕೊಲ್ಲುತ್ತಾರೆ ...ಂದು ನಾಯಿಯನ್ನು ಕೊಂದ ಹಾಗೆ', ಎಂದು ...ಸೆಫ್.ಕೆ ತನ್ನ ಅಂತಿಮ ಕ್ಷಣದಲ್ಲಿ ಉದ್ಗರಿಸುತ್ತಾನೆ. ...ದ ಎನ್‌ಕೌಂಟರ್ ಕೊಲೆಗಳು ಕಾಫ್ಕನ ಕಾದಂಬರಿಯ ...ಕಸ ಕೊಲೆಗಿಂತ ಯಾವ ರೀತಿಯಲ್ಲೂ ಬೇರೆಯಲ್ಲ. ...ದ ಕ್ರಿಮಿನಲ್ ಕಾಯ್ದೆಯ ಸೆಕ್ಷನ್ 46ರ ಪ್ರಕಾರ ...ಲ್ ಆರೋಪಿ ಬಂಧನದಿಂದ ತಪ್ಪಿಸಿಕೊಂಡು ಓಡಲು ...ತ್ನಿಸಿದರೆ ಅಥವಾ ಬಲ ಪ್ರಯೋಗಕ್ಕೆ ಮುಂದಾದರೆ ... ಪೊಲೀಸ್ ಎನ್‌ಕೌಂಟರ್‌ಗಳು ನ್ಯಾಯ ...ವಾಗುತ್ತವೆ. ಆದರೆ ಪೊಲೀಸರ ಈ ಕ್ರಮವನ್ನು ...ವವರು ಯಾರು? ಸಾಕ್ಷಿ ಹೇಳುವವರು ಯಾರು? ...ಂಟರ್‌ನ ಪ್ರಮುಖ ಸಾಕ್ಷಿಯೇ ಸಾವಿಗೀಡಾಗಿರುವಾಗ, ...ಸ ಮುಂದೆ ನಿಲ್ಲುವವರು ಯಾರು?

...ದಾಹರಣೆಗೆ 2004ರಲ್ಲಿ ಮುಂಬಯಿಯ ತರುಣಿ ... ಜಹಾನ್ ಮತ್ತು ಆಕೆಯ ಜೊತೆಗಿದ್ದ ... ಗುಜರಾತ್ ಪೊಲೀಸರು ನಡು ... ಎನ್‌ಕೌಂಟರ್ ... ...ದರು. 2005ರಲ್ಲಿ ಗುಜರಾತ್‌ನ ... ಎನ್‌ಕೌಂಟರ್ ... ಕೊಲೆಮಾಡಿ ... ಎನ್‌ಕೌಂಟರ್ ...



ಉಗ್ರವಾದಿ ಸಂಘಟನೆಯ ಜೊತೆ ಸಂಪರ್ಕವಿತ್ತು ಎಂದು ಪೊಲೀಸರು ತಮ್ಮ ಕರ್ತವ್ಯವನ್ನು ಸಮರ್ಥಿಸಿ ಕೊಂಡರು; ಸೊಹ್ರಾಬುದ್ದೀನ್ ಶೇಕ್ ಗುಜರಾತ್‌ನ ಆಗಿನ ಮುಖ್ಯಮಂತ್ರಿ ನರೇಂದ್ರ ಮೋದಿಯವರ ಹತ್ಯೆಗೆ ಒಳಸಂಚು ನಡೆಸಿದ್ದರು ಎಂದು ಆರೋಪಿಸಲಾಯಿತು. ಆದರೆ ಇಶ್ರತ್ ಜಹಾನ್, ಸೊಹ್ರಾಬುದ್ದೀನ್ ಶೇಕ್ ಮತ್ತು ಕೌಸರ್ ಬಿ ಮಾತ್ರವಲ್ಲ, ಪೊಲೀಸ್ ಎನ್‌ಕೌಂಟರ್‌ಗಳಲ್ಲಿ ಸಾವಿಗೀಡಾದ ಎಲ್ಲರ ಬಗೆಗೂ ಮರಣದಂಡನೆಯ ತೀರ್ಪು ನೀಡಿರುವುದು ನ್ಯಾಯಾಲಯಗಳಲ್ಲ; ಬದಲು ಪೊಲೀಸರು ಆರೋಪಿಗಳು ಎಂದು ಹೆಸರಿಸಿದವರನ್ನು ತಾವೇ ಅಪರಾಧಿಗಳು ಎಂದು ತೀರ್ಮಾನಿಸಿ ತಾವೇ ಶಿಕ್ಷೆ ಕೊಟ್ಟರು.


ಒಂದೊಮ್ಮೆ ಇಶ್ರತ್ ಜಹಾನ್, ಸೊಹ್ರಾಬುದ್ದೀನ್ ಶೇಕ್ ಮತ್ತು ಇತರರ ಮೇಲೆ ಹೊರಿಸಲಾಗಿರುವ ಆರೋಪಗಳು ನಿಜವಾಗಿದ್ದರೂ ಅವರನ್ನು ನಡುರಸ್ತೆಯಲ್ಲಿ 'ನಾಯಿಯನ್ನು ಕೊಂದ ಹಾಗೆ' ಕೊಲ್ಲುವುದು ನ್ಯಾಯವೇ? ಈ ತರಹದ ತಲೆತಿರುಕ ಪ್ರಶ್ನೆಗಳನ್ನು ಮಾನವಹಕ್ಕು ಹೋರಾಟಗಾರರು ಕೇಳುವುದನ್ನು ನಿಲ್ಲಿಸಿದರೆ ಈ ದೇಶ ಹೆಚ್ಚು ಸುರಕ್ಷಿತವಾಗಿರುತ್ತದೆ ಎಂದು ಈಗ ನಮ್ಮ ಪೊಲೀಸು ಅಧಿಕಾರಿಗಳ ಜೊತೆ ಪ್ರತಿಷ್ಠಿತ ಪತ್ರಕರ್ತರೂ ಹೇಳುತ್ತಿದ್ದಾರೆ! 2002ರಿಂದ 2006ರವರೆಗಿನ 4 ವರ್ಷಗಳ ಅವಧಿಯಲ್ಲಿ ಗುಜರಾತ್‌ನಲ್ಲಿ 21 ಎನ್‌ಕೌಂಟರ್ ಕೊಲೆಗಳು ನಡೆದವು. ಈ ಪ್ರಕರಣಗಳಲ್ಲಿ ಪ್ರಮುಖ ಆರೋಪಿಗಳಾಗಿರುವ ಗುಜರಾತ್‌ನ ಹಿರಿಯ ಪೊಲೀಸು ಅಧಿಕಾರಿಗಳಲ್ಲಿ ಕೆಲವರನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ; ಉಳಿದವರು ಜಾಮೀನಿನಲ್ಲಿ ಬಿಡುಗಡೆಗೊಂಡಿದ್ದಾರೆ. ಗುಜರಾತ್‌ನ ಗೃಹಮಂತ್ರಿಯಾಗಿದ್ದ ಅಮಿತ್ ಶಾರ ಮೇಲೆ ಎನ್‌ಕೌಂಟರ್‌ನ ಹಲವು ಆರೋಪಗಳಿದ್ದು ಅವರು 3 ತಿಂಗಳ ಜೈಲುವಾಸ ಕೂಡ ಅನುಭವಿಸಿದ್ದರು. 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಬಿ.ಜೆ.ಪಿ ಅಮಿತ್ ಶಾರನ್ನು ಪಕ್ಷದ ರಾಷ್ಟ್ರಾಧ್ಯಕ್ಷರನ್ನಾಗಿ ನೇಮಿಸಿತು! ಈಗ ನ್ಯಾಯಾಲಯ ಅವರ ಮೇಲಿನ ಕೇಸನ್ನು ವಜಾಗೊಳಿಸಿದೆ.

ಮನೀಶಾ ಸೇಥಿ ತನ್ನ ಕೃತಿಯ ಕೊನೆಯ ಅಧ್ಯಾಯದಲ್ಲಿ ದೇಶದ ರಕ್ಷಣೆ ಮತ್ತು ಆಂತರಿಕ ಭದ್ರತೆಗಳಿಗಾಗಿ ಸರಕಾರ ವೆಚ್ಚ ಮಾಡುವ ಹಣದ ಮೊತ್ತ ವರ್ಷದಿಂದ ವರ್ಷಕ್ಕೆ ವಿಪರೀತ ಹೆಚ್ಚುತ್ತಿರುವುದು ಹಾಗೂ ಆ ಕ್ಷೇತ್ರ ಹೆಚ್ಚು ಹೆಚ್ಚು ಖಾಸಗೀಕರಣಗೊಳ್ಳುತ್ತಿರುವ ವಿದ್ಯಮಾನವನ್ನು ವಿಶ್ಲೇಷಿಸುತ್ತಾರೆ. 2007-2008ರ ಸಾಲಿನಲ್ಲಿ ರೂ. 1,08,550.60 ಕೋಟಿ ಇದ್ದ ದೇಶದ ರಕ್ಷಣಾ ಬಜೆಟ್ 2013-14ರಲ್ಲಿ ರೂ. 2,53,345.91 ಕೋಟಿಗೆ ಏರಿತು. ಇದು ದೇಶದ ಒಟ್ಟು ಆಯವ್ಯಯದಲ್ಲಿ 15.21% ರಷ್ಟಾಗುತ್ತದೆ; ಆದರೆ ಇದೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಕೇವಲ 2%, ಪ್ರಾಥಮಿಕ ಶಿಕ್ಷಣಕ್ಕೆ 3.16 % ಮತ್ತು ಗ್ರಾಮೀಣ ಅಭಿವೃದ್ಧಿಗೆ 4.47% ರಷ್ಟನ್ನು ಮಾತ್ರ ಮೀಸಲಾಗಿಡಲಾಗಿತ್ತು. ಪಾಕಿಸ್ತಾನ ಮತ್ತು ಚೀನಗಳ ಅಪಾಯ, ಮುಸ್ಲಿಮ್ ಭಯೋತ್ಪಾದನೆ, ನಕ್ಸಲ್ ಹೋರಾಟ, ಕಾಶ್ಮೀರದ ಮತ್ತು ಈಶಾನ್ಯ ರಾಜ್ಯಗಳ ಸ್ಫೋಟಕ ಪರಿಸ್ಥಿತಿ ಮುಂತಾದ ಮೊದಲೇ ಉದ್ರೇಕಕಾರಿಯಾದ ವಿಷಯಗಳ ಬಗೆಗೆ ಜನರನ್ನು ಇನ್ನಷ್ಟು ಕೆರಳಿಸುವ ಆರ್.ಎಸ್.ಎಸ್‌ನಂತಹ ಸಂಘಟನೆಗಳು ಹಾಗೂ 24x7 ಟೀವಿ ಹೆಚ್ಚು ಹೆಚ್ಚು ಬೊಬ್ಬೆ ಹಾಕಿದಷ್ಟೂ ಬೇಹುಗಾರಿಕೆಯ ಉಪಕರಣ, ಶಸ್ತ್ರಾಸ್ತ್ರ, ಯುದ್ಧ ನೌಕೆ, ವಿಮಾನ ಮುಂತಾದವುಗಳಿಗೆ ಸರಕಾರದ ಬೇಡಿಕೆಯೂ ಜಾಸ್ತಿ ಆಗುತ್ತದೆ. ರಕ್ಷಣೆ ಮತ್ತು ಆಂತರಿಕ ಭದ್ರತೆಗಳಿಗಾಗಿ ಸರಕಾರ ತೊಡಗಿಸುತ್ತಿರುವ ಅಪಾರ ಮೊತ್ತದ ಹಣ ಅಂಬಾನಿ, ಟಾಟಾ, ಮಹೀಂದ್ರ ಮುಂತಾದ ದೇಶೀಯ ಬಂಡವಾಳಶಾಹಿಗಳನ್ನೂ; ಅಮೇರಿಕ, ಇಸ್ರೇಲ್ ಮುಂತಾದ ಹೊರದೇಶಗಳ ಶಸ್ತ್ರಾಸ್ತ್ರ ಉದ್ಯಮಿಗಳನ್ನೂ ಈಗ ಆಕರ್ಷಿಸುತ್ತಿದೆ.

ರಕ್ಷಣೆ ಮತ್ತು ಭದ್ರತಾ ಕ್ಷೇತ್ರದಲ್ಲಿ ತೊಡಗಿಸಿರುವ ಹಣದಲ್ಲಿ ಹೆಚ್ಚಳ, ಈ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಖಾಸಗೀಕರಣ ಮತ್ತು ಆರ್.ಎಸ್.ಎಸ್‌ನಂತಹ ಬಲಪಂಥೀಯ ಶಕ್ತಿಗಳು ಈಗ ದೇಶದಲ್ಲಿ ಸಾಧಿಸಿರುವ ಮೇಲುಗೈ - ಇವು ಪರಸ್ಪರ ಪೂರಕವಾದ ಬೆಳವಣಿಗೆಗಳು. ಆರೋಪಿಗಳನ್ನು ನಮ್ಮ ಕೋರ್ಟು ಮತ್ತು ಪೊಲೀಸು ಠಾಣೆಗಳು ನಡೆಸಿಕೊಳ್ಳುತ್ತಿರುವ ಕಾನೂನುಬಾಹಿರ ವಿಧಾನ, ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ಕಾನೂನುಗಳು, ರಕ್ಷಣೆ ಮತ್ತು ಭದ್ರತೆಯ ಕ್ಷೇತ್ರದಲ್ಲಿ ವಿನಿಯೋಗಿಸುವ ಹಣದಲ್ಲಿ ಆಗುತ್ತಿರುವ ಭಾರೀ ಹೆಚ್ಚಳ, ಆ ಕ್ಷೇತ್ರ ಖಾಸಗಿ ಬಂಡವಾಳಶಾಹಿಗಳಿಗೆ ಲಾಭದಾಯಕ ದಂಧೆಯಾಗುತ್ತಿರುವುದು ಮತ್ತು ಇದೆಲ್ಲದರ ನಡುವೆ ಯಾವ ತಪ್ಪೂ ಮಾಡದೆ, ಅಮಾಯಕ ಪ್ರಜೆಗಳು ಶಿಕ್ಷೆ ಅನುಭವಿಸುವುದು- ಇದು ಮನೀಶಾ ಸೇಥಿ ತನ್ನ ಕೃತಿಯಲ್ಲಿ ಚಿತ್ರಿಸುವ ಇಂದಿನ ಭಾರತ.

■ ಜಿ. ರಾಜಶೇಖರ

ಜನವಿರೋಧಿ ಮೋದಿ ಸರ್ಕಾರದ ಗೋಬೆಲ್ಸ್ ತಂತ್ರ



ಪ್ರಗತಿಪರರು ಮೋದಿ ಸರ್ಕಾರದ ಬಗ್ಗೆ ನುಡಿದಿದ್ದ ಭವಿಷ್ಯವಾಣಿ ನಿಜವಾಗುತ್ತಾ ಬರುತ್ತಿದೆ. ದಿಲ್ಲಿ ಗದ್ದುಗೆಯನ್ನೇರಿದ ನಂತರದ ದಿನಗಳಲ್ಲಿ ಅದು ಒಂದೊಂದಾಗಿ ತನ್ನ ಸರ್ವಾಧಿಕಾರಿ, ಫ್ಯಾಸಿಸ್ಟ್ ಗುಣಗಳನ್ನು ತೋರಲಾರಂಭಿಸಿದೆ. ಪರಿಣಾಮವಾಗಿ ಭಿನ್ನಾಭಿಪ್ರಾಯಗಳ ಹತ್ತಿಕ್ಕುವಿಕೆ, ವಿರೋಧಿಗಳ ದಮನ, ಅಲ್ಪಸಂಖ್ಯಾತರ ಬಗ್ಗುಬಡಿಯುವಿಕೆ, ಏಕಸಂಸ್ಕೃತಿ ಹೇರುವಿಕೆ ಮುಂತಾದ ಜನವಿರೋಧಿ ಚಟುವಟಿಕೆಗಳು ಎಲ್ಲಿಲ್ಲದ ವೇಗ ಪಡೆದುಕೊಂಡಿವೆ. ಉದಾಹರಣೆಗೆ ದ್ವೇಷಪೂರಿತ ಭಾಷಣಗಳು, ಲವ್ ಜಿಹಾದ್, ಚರ್ಚು ದಾಳಿ, ಗೋಹತ್ಯೆ ನಿಷೇಧ ಕಾಯ್ದೆ, ಸಂಸ್ಕೃತದ ಹೇರುವಿಕೆ, ಭಗವದ್ಗೀತೆ ಕಡ್ಡಾಯ, ಸೆನ್ಸಾರ್ ಮಂಡಳಿ, ಪಠ್ಯಪುಸ್ತಕಗಳ ಕೇಸರೀಕರಣ, ಸಬ್ಸಿಡಿ ಕಡಿತ, ಭೂಸ್ವಾಧೀನ ಮತ್ತಿತರ ಸುಗ್ರೀವಾಜ್ಞೆಗಳು, ನರೇಗಾ ಯೋಜನೆಯ ದುರ್ಬಲಗೊಳಿಸುವಿಕೆ ಇತ್ಯಾದಿ ಇತ್ಯಾದಿ.....

ಇಲ್ಲಿ ನರೇಗಾ ಯೋಜನೆ ಬಗ್ಗೆ ಒಂದೆರಡು ಮಾತುಗಳು. ಮೋದಿ ಸರ್ಕಾರ ಜನರಿಗೆ ಮಂಕುಬೂದಿ ಎರಚುವಲ್ಲಿ ನಿಸ್ಸೀಮ ಎಂಬುದಕ್ಕೆ ಈ ನರೇಗಾ ಯೋಜನೆಯ ನಿದರ್ಶನವೊಂದೇ ಸಾಕು. ತಾವು ಈ ಬಾರಿಯ ಬಜೆಟ್ಟಿನಲ್ಲಿ ನರೇಗಾ ಯೋಜನೆಗೆ ಮೀಸಲಿಟ್ಟಿರುವ 35,000 ಕೋಟಿ ರೂಪಾಯಿಗಳ ಮೊತ್ತ ಕಳೆದೆಲ್ಲ ವರ್ಷಗಳಿಗಿಂತಲೂ ಜಾಸ್ತಿ ಎಂದು ಮೋದಿ ಸರ್ಕಾರ ಕೊಚ್ಚಿಕೊಂಡಿತ್ತಲ್ಲವೇ. ಮೇಲುನೋಟಕ್ಕೆ ಇದು ನಿಜವೆನಿಸುವಂತಿದೆ. ಆದರೆ ಒಳಹೊಕ್ಕು ನೋಡಿದಾಗಷ್ಟೆ ಅಸಲಿಯತ್ತಿನ ಅರಿವಾಗುತ್ತದೆ!



ವಾಸ್ತವ ಏನೆಂದರೆ ಈ 35,000 ಕೋಟಿ ಮೊತ್ತದಲ್ಲಿ ಸುಮಾರು 6,000 ಕೋಟಿ ರೂಪಾಯಿಗಳಷ್ಟು ಹಣ ಕೇಂದ್ರ ಸರ್ಕಾರ ರಾಜ್ಯಗಳಿಗೆ ಚುಕ್ತಾ ಮಾಡಬೇಕಿರುವ ಕಳೆದ ವರ್ಷದ ಬಾಕಿ ಹಣವಾಗಿದೆ!!

ಮೋದಿ ಸರ್ಕಾರದ ಹದ್ದಿನ ಕಣ್ಣು ಈಗ ಸುಮಾರು ಒಂದು ದಶಕದಷ್ಟು ಹಳೆಯದಾದ ಮಾಹಿತಿ ಹಕ್ಕುಕಾಯ್ದೆಯ ಮೇಲೆ ಬಿದ್ದಿದ್ದು ಕಾಯ್ದೆಯನ್ನು ಹಳ್ಳಹಿಡಿಸಲು ಸಕಲ ಪ್ರಯತ್ನಗಳಾಗುತ್ತಿವೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ 2014ರಲ್ಲಿ ವಿಲೇವಾರಿಯಾದ ಅರ್ಜಿಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿರುವುದೇ ಇದಕ್ಕೆ ಸಾಕ್ಷಿ. ಇದಲ್ಲದೆ ಸರ್ಕಾರದ ಕಾರ್ಯನಿರ್ವಹಣೆಗೆ ಸಂಬಂಧಪಟ್ಟಂಥ ಅನೇಕ ಅರ್ಜಿಗಳು ತಿರಸ್ಕರಿಸಲ್ಪಟ್ಟಿವೆ. ಉದಾಹರಣೆಗೆ: ಈ ಬಾರಿಯ ಪದ್ಮಶ್ರೀ ಪ್ರಶಸ್ತಿ ವಿಜೇತರ ಆಯ್ಕೆಯಲ್ಲಿ ಅನುಸರಿಸಿದ ಮಾನದಂಡಗಳ ಕುರಿತ ಮಾಹಿತಿ, ಮೋದಿಯ ಪತ್ನಿ ತನ್ನ ಭದ್ರತೆ ಕುರಿತಂತೆ ಕೇಳಿದ ಮಾಹಿತಿ, 2002ರ ಗುಜರಾತ್ ಗಲಭೆಯ ಸಮಯದಲ್ಲಿ ವಾಜಪೇಯಿ ಮತ್ತು ಮೋದಿ ನಡುವಿನ ಪತ್ರವ್ಯವಹಾರದ ವಿವರಗಳು....ಇತ್ಯಾದಿ ಇತ್ಯಾದಿ.

ಮಾಹ ಆಯೋಗದಲ್ಲಿ ಐವರು ಆಯುಕ್ತರಿದ್ದು ಇತ್ತೀಚೆಗೆ ನಿವೃತ್ತರಾದ ಮೂವರು ಆಯುಕ್ತರ ಬದಲಿಗೆ ಹೊಸಬರ ನೇಮಕ ಆಗಿಲ್ಲ. ಇದುವರೆಗೆ ಒಂದೇ ಒಂದು ದಿನ ಕೂಡ ಖಾಲಿ ಇರದ ಪ್ರಧಾನ ಮಾಹಿತಿ ಆಯುಕ್ತರ ಹುದ್ದೆ ಸುಮಾರು ಏಳು ತಿಂಗಳುಗಳಿಂದ ಖಾಲಿಬಿದ್ದಿದೆ. ಹೀಗಾಗುತ್ತಿರುವುದು ಮಾಹ ಕಾಯ್ದೆಯ ಇತಿಹಾಸದಲ್ಲೇ ಮೊತ್ತಮೊದಲ ಬಾರಿ. ಪರಿಣಾಮವಾಗಿ ಪ್ರಧಾನಿ ಕಚೇರಿ, ವಿಜಿಲೆನ್ಸ್ ಆಯುಕ್ತರು, ಮುಖ್ಯ ಲೆಕ್ಕಾಧಿಕಾರಿ ಮತ್ತು ಇತರ 34 ಸಚಿವಾಲಯಗಳ ವಿರುದ್ಧದ ಸುಮಾರು 40,000 ದೂರುಗಳು ಇತ್ಯರ್ಥಕ್ಕೆ ಬಾಕಿಯಾಗಿವೆ. ಏಕೆಂದರೆ ಈ ದೂರುಗಳನ್ನು ಇತ್ಯರ್ಥಪಡಿಸುವ ಅಧಿಕಾರವಿರುವುದು ಕೇವಲ ಪ್ರಧಾನ ಮಾಹಿತಿ ಆಯುಕ್ತರಿಗೆ. ವಾಸ್ತವವಾಗಿ ಮೋದಿ ಸರ್ಕಾರ ಹೊಸ ಆಯುಕ್ತರ ನೇಮಕಾತಿ ವಿಚಾರವನ್ನು ಮೂಲೆಗೊತ್ತಿದೆಯಲ್ಲದೆ ಇದೇ ಮಾರ್ಚ್ 11ರಿಂದ ಆಯೋಗದ ಹಣಕಾಸು ವ್ಯವಹಾರಗಳ ಅಧಿಕಾರವನ್ನು ಸರ್ಕಾರದ ವತಿಯಿಂದ ನೇಮಿಸಲಾಗುವ ಆಯೋಗದ ಕಾರ್ಯದರ್ಶಿ ಕೈಗೆ ಹಸ್ತಾಂತರಿಸಿದೆ. ಇದರರ್ಥ ಇನ್ನುಮುಂದೆ ಆಯೋಗದ ಕಾರ್ಯಾಚರಣೆಗಳೇನಿದ್ದರೂ ಅವೆಲ್ಲ ಪ್ರಧಾನಿ ಕಚೇರಿಯ ಪರೋಕ್ಷ ನಿಯಂತ್ರಣದಡಿ ನಡೆಯಲಿವೆ. ಅಂದಹಾಗೆ ಸತ್ಯವನ್ನು ಮುಚ್ಚಿಟ್ಟು, ಸುಳ್ಳನ್ನು ನೂರು ಬಾರಿ ಪುನರುಚ್ಚರಿಸುವುದಕ್ಕೆ ಗೋಬೆಲ್ಸ್ ತಂತ್ರ ಅನ್ನುತ್ತಾರಲ್ಲವೇ?

ಮಾಹ ಕಾಯ್ದೆ ವಿಚಾರದಲ್ಲಿ ಯುಪಿಎ ಸರ್ಕಾರಕ್ಕೂ ಸ್ವಲ್ಪ ಅಸಮಾಧಾನವಿತ್ತು. 2ಜಿ ಹಗರಣದಲ್ಲಿ ಚಿದಂಬರಂ ಪಾತ್ರ ಬಯಲಾದದ್ದು ಇದೇ ಕಾಯಿದೆಯಿಂದಾಗಿ ಎಂಬುದನ್ನು ಜ್ಞಾಪಿಸಿಕೊಳ್ಳಬಹುದು. ಆದರೆ ಬಿಜೆಪಿಯ ದ್ವಂದ್ವ ನಿಲುವನ್ನು ಮೀರಿಸುವವರು ಮಾತ್ರ ಯಾರೂ ಇಲ್ಲ. ಅಂದಿನ ಪ್ರಧಾನಿ ಮನಮೋಹನ ಸಿಂಗ್ ಒಮ್ಮೆ ಮಾಹ ಕಾಯ್ದೆಯಿಂದ ಆಡಳಿತದ ಮೇಲಾಗುವ ಪರಿಣಾಮಗಳನ್ನು ತಿಳಿಯಲು ಕಾಯ್ದೆಯ ಮರುಪರಿಶೀಲನೆ ಅಗತ್ಯವಿದೆ ಎಂದಿದ್ದಕ್ಕೆ ಆಗ ಪ್ರತಿಪಕ್ಷದ ಸ್ಥಾನದಲ್ಲಿದ್ದ ಇದೇ ಬಿಜೆಪಿ ದೊಡ್ಡ ರಂಪ ಮಾಡಿ ಗಲಾಟೆ ಎಬ್ಬಿಸಿದುದನ್ನು ಮರೆಯಲು ಸಾಧ್ಯವೇ?

ದಾಖಲೆಗಳ ಪ್ರಕಾರ ಮಾಹ ಕಾಯ್ದೆಯನ್ನು ಅತಿ ಹೆಚ್ಚು ಬಳಕೆ ಮಾಡುವವರು ಬಡವರು ಮತ್ತು ಅಂಚಿನಲ್ಲಿರುವ ಜನ. ಇವರು ಕೇಳುವುದಾದರೂ ಏನನ್ನು? ಸರ್ಕಾರದ ವಿವಿಧ ಯೋಜನೆಗಳ ವಿವರಗಳು ಮತ್ತು ಅವುಗಳಿಂದ ಸಿಗುವ ಪ್ರಯೋಜನ ಇತ್ಯಾದಿಗಳ ಬಗ್ಗೆ ಮಾಹಿತಿ. ಇಂತಹ ಜನಪರ ಕಾಯ್ದೆಯನ್ನು ತೆಳುಗೊಳಿಸುತ್ತಿರುವ ಮೋದಿ ಸರ್ಕಾರವನ್ನು ಜನವಿರೋಧಿ ಎನ್ನದೆ ಇನ್ನೇನೆಂದು ಕರೆಯಬೇಕು?

(ಆಧಾರ: ಔಟ್‌ಲುಕ್, 30.3.2015)

ಪುರೋಹಿತಶಾಹಿಗಳ ಶಬ್ದಜಾಲ

"ವೇದಂಗಳ ಹಿಂದೆ ಹರಿಯದಿರು,
ಶಾಸ್ತ್ರಂಗಳ ಹಿಂದೆ ಸುಳಿಯದಿರು, ಸುಳಿಯದಿರು,
ಪುರಾಣಂಗಳ ಹಿಂದೆ ಬಳಸದಿರು, ಬಳಸದಿರು,
ಆಗಮಂಗಳ ಹಿಂದೆ ತೊಳಲದಿರು, ತೊಳಲದಿರು
ಸೌರಾಷ್ಟ್ರ ಸೋಮೇಶ್ವರನ ಕೃಪಿಡಿದು
ಶಬ್ದಜಾಲಂಗಳಿಗೆ ಬಳಲದಿರು, ಬಳಲದಿರು."

ಎಂದು ಶರಣ ಆದಯ್ಯನವರು 12ನೇ ಶತಮಾನದಲ್ಲೇ ಹೇಳಿದ್ದಾರೆ. ಬಸವಣ್ಣನವರ ಲಿಂಗವಂತ ಧರ್ಮ ಸೇರುವ ಮೊದಲು ಶೈವರಾಗಿದ್ದ ಇವರು ವೇದ, ಶಾಸ್ತ್ರ ಪುರಾಣ ಮತ್ತು ಆಗಮಗಳ ಹಿಂದೆ ಹರಿದಾಡಿ, ಸುಳಿದಾಡಿ, ತೊಳಲಿ, ಬಳಲಿ ಬಂದವರೇ ಆಗಿದ್ದಾರೆ. ಇವು 'ಶಬ್ದಜಾಲ' ಎಂದು ಸ್ವಾನುಭವದಿಂದ ಕರೆದಿದ್ದಾರೆ. ಮನುಷ್ಯರ ಮೆದುಳಿಗೆ ಶಬ್ದಗಳ ಮೂಲಕ ಜಾಲ ಬೀಸಿ ಬೌದ್ಧಿಕ ಗುಲಾಮಗಿರಿಗೆ ತಳ್ಳುವಂಥವು ಇವೆಲ್ಲ ಎಂಬುದನ್ನು ಸೂಚಿಸಿದ್ದಾರೆ.

"ವೇದದವರನೊಲ್ಲದೆ ನಮ್ಮ ಮಾದಾರ ಚೆನ್ನಯ್ಯಂಗೊಲಿದ. ಶಾಸ್ತ್ರದವರನೊಲ್ಲದೆ ನಮ್ಮ ಶಿವರಾತ್ರಿ ಸಂಕಣ್ಣಂಗೊಲಿದ, ಆಗಮದವರನೊಲ್ಲದೆ ತೆಲುಗು ಜೊಮ್ಮಯ್ಯಂಗೊಲಿದ" ಹೀಗೆ ಕೆಳಜಾತಿ, ಕೆಳವರ್ಗದವರಿಗೆ ಒಲಿದ ದೇವರು "ಹಾರುವಣ್ಣಗಳಿಗೆ ಹೇಸಿ ಕದವನಿಕ್ಕಿಕೊಂಡನು" ಎಂದು ಸೊಡ್ಡಳ ಬಾಚರಸ ಹೇಳುತ್ತಾರೆ.

"ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ, ಸಕಲ ವೇದಶಾಸ್ತ್ರವೆಂಬ ನೇಣ ಕಟ್ಟಿ ಹಿಡಿದು ತೂಗಿ ಜೋಗುಳವಾಡುತ್ತಾ ಇದ್ದಾಳೆ ಭ್ರಾಂತಿ ಎಂಬ ತಾಯಿ" ಎಂದು ಅಲ್ಲಮಪ್ರಭುಗಳು ವೇದಗಳು ಮತ್ತು ಮನುಸ್ಮೃತಿಯಂಥ ಶಾಸ್ತ್ರಗಳು ಹೇಗೆ ಅಜ್ಞಾನ ಮತ್ತು ಭ್ರಾಂತಿಯ ಜೊತೆಗಿವೆ ಎಂಬುದನ್ನು ಸೂಚಿಸಿದ್ದಾರೆ.

"ವೇದಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ?... ಡೊಂಬನೇನು ಕಿರಿಯನೆ?" ಎಂದು ಬಸವಣ್ಣನವರು ಪ್ರಶ್ನಿಸುತ್ತ ಜನಸಾಮಾನ್ಯರ ಅನುಭವಜನ್ಯ ಜ್ಞಾನವನ್ನು ಎತ್ತಿಹಿಡಿದಿದ್ದಾರೆ. "ಏನಯ್ಯಾ ವಿಪ್ರರು ನುಡಿದಂತೆ ನಡೆಯರು" ಎಂದು ಟೀಕಿಸಿದ್ದಾರೆ. "ವಿಪ್ರರು ಕೀಳು ನೋಡಾ ಜಗವೆಲ್ಲ ಅರಿಯಲು" ಎಂದು ಸಾರಿದ್ದಾರೆ.

"ವೇದ ನಡನಡುಗಿತ್ತು ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗುವಟ್ಟೆದ್ದಿತ್ತಯ್ಯಾ!
ಆಗಮ ಹೊರತೊಲಗಿ ಅಗಲಿದ್ದಿತ್ತಯ್ಯಾ!
ನಮ್ಮ ಕೂಡಲಸಂಗಯ್ಯನು ಮಾದಾರ ಚೆನ್ನಯ್ಯನ ಮನೆಯಲ್ಲುಂಡ ಕಾರಣ."

ಎಂದು ಬಸವಣ್ಣನವರು ವೈದಿಕರು ಸೃಷ್ಟಿಸಿದ ಅಮಾನವೀಯ ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಟೀಕಿಸುತ್ತಾರೆ. ಮನುವಾದಿ ಸಮಾಜದ ಕಟ್ಟಕಡೆಯ ಮಾದಾರ ಜಾತಿಯಿಂದ ಬಂದ ಮಾದಾರ ಚೆನ್ನಯ್ಯನವರ ಮನೆಯಲ್ಲಿ ಬಸವಣ್ಣನವರ ದೇವರು ಉಣ್ಣುವ ಮೂಲಕ ಇಡೀ ವರ್ಣ ಮತ್ತು ಜಾತಿ ವ್ಯವಸ್ಥೆಯನ್ನು ತಿರಸ್ಕರಿಸುತ್ತಾರೆ. "ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ, ನಿಮ್ಮಿಂದಧಿಕ ಕೂಡಲಸಂಗಮದೇವಾ" ಎಂದು ಹೇಳಿದ ಬಸವಣ್ಣನವರು ವ್ಯಕ್ತಿಯೊಬ್ಬ ತನ್ನ ಘನತೆಯಿಂದ ಉನ್ನತ ಸ್ಥಾನ ಹೊಂದುವನು ಹೊರತಾಗಿ ಮೇಲ್ಜಾತಿಯಲ್ಲಿ ಜನಿಸಿದ ಮಾತ್ರಕ್ಕೆ ದೊಡ್ಡವನಾಗುವುದಿಲ್ಲ ಎಂದು ಸೂಚಿಸಿದ್ದಾರೆ.

"ಧರ್ಮಸ್ಯ ಬ್ರಾಹ್ಮಣೋ ಮೂಲಂ।
ಬ್ರಾಹ್ಮಣಃ ಸಂಭವೇನಮ್ಮೈವ ದೇವಾನುನಾಮಪಿ ದೈವತಂ।
ಪ್ರಮಾಣ ಚೈವ ಲೋಕಸ್ಯ ಬ್ರಹ್ಮಾತ್ರೈವ ಹಿ ಕರಣಂ॥
-ಮನುಸ್ಮೃತಿ (11.83, 84)

(ಬ್ರಾಹ್ಮಣನೇ ಧರ್ಮದ ಮೂಲ. ತನ್ನ ಹುಟ್ಟಿನಿಂದಲೇ ಅವನು ದೇವತೆಗಳಿಗೂ ದೇವರಾಗಿದ್ದಾನೆ. ಅವನ ಮಾತು ಜನರಿಗೆ ಪ್ರಮಾಣೀಭೂತವಾದುದು.)

ಎಂಬ ಮನುವಾದಿಗಳ ಮಾತು ಬಸವಣ್ಣನವರ ನಿಲುವಿಗೆ ತದ್ವಿರುದ್ಧವಾದುದು. ಬಸವಾದಿ ಶರಣರು ಪ್ರತಿ ಹಂತದಲ್ಲೂ ವೇದ, ಆಗಮ ಮತ್ತು ಮನುಸ್ಮೃತಿಯನ್ನು ಅಲ್ಲಗಳೆಯುತ್ತ ಅವೈದಿಕವಾದವನ್ನು ಎತ್ತಿ ಹಿಡಿದಿದ್ದಾರೆ ಎಂಬ ಸತ್ಯವನ್ನು 'ಲಿಂಗಾಯತ, ವೀರಶೈವ ಮತ್ತು ಹಿಂದೂ' ಒಂದೇ ಎಂದು ಸಾಧಿಸಲು ಹೆಣಗುವ ಸಂಶೋಧಕ ಮಹಾಶಯರು ಅಲ್ಲಗಳೆಯಲು ಯಾವ ಕಾಲಕ್ಕೂ ಸಾಧ್ಯವಿಲ್ಲ.

ಕೆಲವರು ಭಗವದ್ಗೀತೆಯನ್ನು ರಾಷ್ಟ್ರಗ್ರಂಥ ಮಾಡಲು ಹೊರಟಿದ್ದಾರೆ. ಬಹುಧರ್ಮೀಯ ಮತ್ತು ಬಹುಸಂಸ್ಕೃತಿಯ ದೇಶದಲ್ಲಿ ಯಾವುದೇ ಒಂದು ಧರ್ಮದ ಗ್ರಂಥ ರಾಷ್ಟ್ರೀಯ ಗ್ರಂಥವಾಗಲಾರದು. ಸಂವಿಧಾನ ರಾಷ್ಟ್ರಗ್ರಂಥವಾಗಿರುವುದರಿಂದ ಎಲ್ಲ ಧರ್ಮ ಮತ್ತು ಧರ್ಮಗ್ರಂಥಗಳನ್ನು ರಕ್ಷಿಸುವ ಜವಾಬ್ದಾರಿ ಅದಕ್ಕಿದೆ. "ವೇದ ಶಾಸ್ತ್ರದವರ



ಹಿರಿಯರೆನ್ನೆ, ಮಾಯಾಭ್ರಾಂತಿ ಕವಿದ ಗೀತಜ್ಞರ ಹಿರಿಯರೆನ್ನೆ, ಇವರು ಹಿರಿಯರುಗಳೆ?" ಎಂದು ಬಸವಣ್ಣನವರು ವೇದ ಮತ್ತು ಗೀತೆಯ ಹಿರಿಮೆಯನ್ನು ಪ್ರಶ್ನಿಸಿದ್ದಾರೆ.

ವರ್ಣ, ಜಾತಿ ಮತ್ತು ಅಸ್ಪೃಶ್ಯತೆಗೆ ಜನ್ಮಜನ್ಮಾಂತರದ ಪುಣ್ಯಪಾಪಗಳೇ ಕಾರಣ ಎಂದು ಕರ್ಮಸಿದ್ಧಾಂತ ಹೇಳುತ್ತದೆ. ಈ ಕರ್ಮಸಿದ್ಧಾಂತವು ಮನುವಾದಿ ಹಿಂದೂ ಧರ್ಮದ ತಾಯಿಬೇರಾಗಿದೆ. "ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ? ಕೂಡಲಸಂಗಮ ದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೊ?" ಎಂದು ಬಸವಣ್ಣನವರು ಪ್ರಶ್ನಿಸುವ ಮೂಲಕ ಕರ್ಮಸಿದ್ಧಾಂತವನ್ನು ಕೊಚ್ಚಿಹಾಕಿದ್ದಾರೆ.

ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ,
ಗ್ರಹಣ ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ ವ್ಯತೀಪಾತದಿಂದ ವೆಗ್ಗಳ,
ಸೂಕ್ಷ್ಮ ಶಿವಪಥನರಿದಂಗೆ
ಹೋಮ, ನೇಮ, ಜಪ, ತಪದಿಂದ ವೆಗ್ಗಳ
ಕೂಡಲಸಂಗಮದೇವಾ ನಿಮ್ಮ ಮಾಣದೆ ನೆನೆವಂಗೆ.

ಎಂದು ಬಸವಣ್ಣನವರು ಕೂಡಲಸಂಗಮದೇವರನ್ನು ನಿರಂತರವಾಗಿ ನೆನೆಯುವುದು ಇವೆಲ್ಲವುಗಳಿಗಿಂತ ವೆಗ್ಗಳ (ಅಧಿಕ) ಎಂದು ಹೇಳಿದ್ದಾರೆ. ಹೀಗೆ ಬಸವಾದಿ ಶರಣರು ಪುರೋಹಿತಶಾಹಿಯ ಎಲ್ಲ ಅನಿಷ್ಟಗಳ ವಿರುದ್ಧ ಬಂಡೆದ್ದಿದ್ದಾರೆ. ಪಂಚಾಂಗದ ಗುಲಾಮರು ತಮ್ಮ ಉದ್ಧಾರಕ್ಕಾಗಿ ಬಸವಣ್ಣನವರ ಈ ಮಾತಿನ ಕಡೆಗೆ ಗಮನ ಹರಿಸುವುದು ಅವಶ್ಯವಾಗಿದೆ.

"ಬ್ರಾಹ್ಮಣ ಭಕ್ತನಾದರೇನಯ್ಯಾ? ಸೂತ ಪಾತಕಂಗಳ ಬಿಡ.
ಕ್ಷತ್ರಿಯ ಭಕ್ತನಾದರೇನಯ್ಯಾ? ಕ್ರೋಧವ ಬಿಡ.
ವೈಶ್ಯ ಭಕ್ತನಾದರೇನಯ್ಯಾ? ಕಪಟವ ಬಿಡ.
ಇಂತೀ ಜಾತಿ ಡಂಬರ ಮೆಚ್ಚುವನೆ ಕೂಡಲಚೆನ್ನಸಂಗಮದೇವ."

ಎಂದು ಚೆನ್ನಬಸವಣ್ಣನವರು ಸವರ್ಣೀಯರ ಬೂಟಾಟಿಕೆಯನ್ನು ಬಯಲಿಗೆಳೆದಿದ್ದಾರೆ.

"ಶಿವತಂತ್ರದಿಂದ ಸುಖದುಃಖಗಳು ಬರುತಿಹವೆಂದರಿಯದೆ
ನರಗುರಿಗಳಿಗೆ, ರೋಗ ದಾರಿದ್ರ್ಯ ಅಪಜಯಂಗಳು ಬರುತ್ತಿರಲು
ವಿಪ್ರಗೆ ಕೈಮುಗಿದು ಕಾಣಿಕೆಯನಿಕ್ಕಿ ತನ್ನ ಹೆಸರ ಹೇಳಿ
ಸೂರ್ಯಬಲ, ಚಂದ್ರಬಲ, ಬೃಹಸ್ಪತಿ ಬಲ, ನವಗ್ರಹ ಬಲವ
ಕೇಳುವವರಿಗೆ ಎಲ್ಲಿಹದೋ ಶಿವಭಕ್ತಿ?"

ಎಂದು ಚೆನ್ನಬಸವಣ್ಣನವರು ಪುರೋಹಿತಶಾಹಿಗಳ ಎಲ್ಲ ಕುತಂತ್ರಗಳನ್ನು ಬಯಲಿಗೆಳೆಯುವುದರ ಬಗ್ಗೆ ಅರಿವಿಲ್ಲವೆ ನಮ್ಮ ಕೆಲ ಪಂಡಿತರಿಗೆ?

"ಲಿಂಗಭಕ್ತನ ವಿವಾಹದಲ್ಲಿ ಶಿವಗಣಂಗಳಿಗೆ
ವಿಭೂತಿ ವೀಳೆಯವ ಕೊಟ್ಟು ಆರೋಗಣೆಯ ಮಾಡಿಸಿ
ಶಿವಗಣಂಗಳು ಸಾಕ್ಷಿಯಾಗಿ ಪ್ರಸಾದವನಿಕ್ಕುವುದೆ ಸದಾಚಾರವಲ್ಲದೆ
ವಾರ, ತಿಥಿ, ಸುಮುಹೂರ್ತವೆಂಬ ಲೌಕಿಕದ ಕರ್ಮವ ಮಾಡಿದಡೆ
ನಿಮ್ಮ ಸದ್ಭಕ್ತರಿಗೆ ದೂರವಯ್ಯಾ ಕೂಡಲಚೆನ್ನಸಂಗಮದೇವಾ."

ಎಂದು ಚೆನ್ನಬಸವಣ್ಣನವರು ಹೇಳುವ ಮೂಲಕ ಇಡೀ ಪಂಚಾಂಗ ವ್ಯವಸ್ಥೆಯನ್ನು ತಿರಸ್ಕರಿಸಿದ್ದಾರೆ.

"ಪಂಚಾಂಗ ಕೇಳಿದ ದಕ್ಷಬ್ರಹ್ಮನ ತಲೆಯೇಕೆ ಹೋಯಿತು? ಪಂಚಾಂಗ ಕೇಳಿದ ಪಂಚಪಾಂಡವರು ದೇಶಭ್ರಷ್ಟರಾದರೇಕೆ? ಪಂಚಾಂಗ ಕೇಳಿದ ಶ್ರೀರಾಮನ ಹೆಂಡತಿ ರಾವಣಗೆ ಸೆರೆಯಾದಳೇಕೆ?" ಎಂದು ಮುಂತಾಗಿ ನಿರಾಲಂಬ ಪ್ರಭುದೇವರು ಪಂಚಾಂಗದ ಅಸ್ತಿತ್ವವನ್ನೇ ಅಲ್ಲಗಳೆಯುತ್ತಾರೆ.

"ಸತ್ತು ಮಣ್ಣಾಗಿ ಹೋದ ಮಾತಾಪಿತರುಗಳು
ತಮ್ಮ ಸಂತಾನವಾಗಿ ಜನಿಸಿ ಬಂದರೆಂದು
ಹೆತ್ತು ಹೆಸರಿಟ್ಟು ಕರೆವರಯ್ಯಾ"

ಎಂದು ಮಡಿವಾಳ ಮಾಚಿದೇವರು ಪುನರ್ಜನ್ಮವಾದವನ್ನು ತಿರಸ್ಕರಿಸುತ್ತಾರೆ.

"ಉದಯ ಮಧ್ಯಾಹ್ನ ಸಂಧ್ಯಾಕಾಲವ ನೋಡಿ
ಮಾಡುವ ಕರ್ಮಿ ನೀ ಕೇಳಾ:
... .
ಮಹಾಮೇರುವಿನ ಮರೆಯಲ್ಲಿರ್ದು
ತಮ್ಮ ನೆಳಲನರಸುವ ಭಾವಭ್ರಮಿತರ ಮೆಚ್ಚ
ನಮ್ಮ ಕೂಡಲಸಂಗಮದೇವ"

ಎಂದು ಬಸವಣ್ಣನವರು ತ್ರಿಕಾಲ ಸಂಧ್ಯಾವಂದನೆಯನ್ನು ತಿರಸ್ಕರಿಸುತ್ತಾರೆ. ವಾರ, ದಿನ, ಹಗಲು, ಇರುಳು "ಏನೆಂದರಿಯದೆ ನಿಮ್ಮುವ ಪೂಜಿಸಿ ಎನ್ನುವ ಮರೆದೆ ಕೂಡಲಸಂಗಮದೇವಾ" ಎಂದು ಇನ್ನೊಂದು ವಚನದಲ್ಲಿ ಬಸವಣ್ಣನವರು ಹೇಳುವ ಮೂಲಕ "ಕೂಡಲಸಂಗನ ಶರಣರು ಅಚ್ಚ ಲಿಂಗೈಕ್ಯರು" ಎಂಬುದನ್ನು ಸೂಚಿಸಿದ್ದಾರೆ.

"ಭಕ್ತಿಯ ಪಿತ್ತ ತಲೆಗೇರಿ ಕೈಲಾಸ ಬೆಟ್ಟವ ಹತ್ತುವ ವ್ಯರ್ಥರ ಕಂಡು ಎನ್ನ ಮನ ನಾಚಿತ್ತು ನಾಚಿತ್ತು. ಕೈಲಾಸವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ" ಎಂದು ಬಸವಣ್ಣನವರು ಕೈಲಾಸದ ಅಸ್ತಿತ್ವವನ್ನೇ ಅಲ್ಲಗಳೆದಿದ್ದಾರೆ.

"ಕೈಲಾಸವೆಂಬುದೊಂದು ಭೂಮಿಯೊಳಗ… ಹಾಳುಬೆಟ್ಟ. ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು. ಅ… ಚಂದ್ರಶೇಖರನು ಬಹು ಎಡ್ಡ" ಎಂದು ಸಿದ್ಧರಾಮೇ… ಹೇಳುತ್ತಾರೆ.

"ಜಲ ದೈವವೆಂದಡೆ ಶೌಚವ ಮಾಡಲಿಲ್ಲ, ದೈವವೆಂದಡೆ ಕಾಲೂರಿ ನಡೆಯಲಿಲ್ಲ" ಎಂದು ಮ… ಮಡಿವಾಳ ಮಾಚಿದೇವರು ಹೇಳುವ ಮೂ… ಪಂಚಮಹಾಭೂತಗಳ ದೈವತ್ವವನ್ನು ಅಲ್ಲಗಳೆಯು…

"ಕಲ್ಲುದೇವರು ದೇವರಲ್ಲ, ಮಣ್ಣು ದೇವರು ದೇ…
ಮರ ದೇವರು ದೇವರಲ್ಲ, ಪಂಚಲೋಹದಲ್ಲಿ ಮ… ದೇವರು ದೇವರಲ್ಲ,
ಸೇತುರಾಮೇಶ್ವರ, ಗೋಕರ್ಣ, ಕಾಶಿ, ಕೇ… ಮೊದಲಾಗಿ
ಅಷ್ಟಾಷಷ್ಟಿ ಕೋಟಿ ಪುಣ್ಯಕ್ಷೇತ್ರಂಗಳಲ್ಲಿಯ ದೇ… ದೇವರಲ್ಲ,
ತನ್ನ ತಾನರಿದು ತಾನಾರೆಂದು ತಿಳದಡೆ ತಾನೇ… ನೋಡಾ
ಅಪ್ರಮಾಣಕೂಡಲಸಂಗಮದೇವಾ"


ಎಂದು ಬಾಲಸಂಗಯ್ಯನವರು ಇತ್ತೀ… ಶತಮಾನಗಳಲ್ಲಿ ಹಿಂದೂ ಧರ್ಮ ಎಂದು ಕರೆಯಿಸಿಕೊ… ವೈದಿಕ ಅಥವಾ ಮನುಧರ್ಮದ ಎಲ್ಲವ… ಅಲ್ಲಗಳೆಯುತ್ತಾರೆ.

ತಮ್ಮದು ಸ್ವತಂತ್ರ ಧರ್ಮ ಅಥವಾ ಜೀವನವಿ… ಎಂಬುದನ್ನು ಶರಣರು ಸಹಸ್ರಾರು ವಚನಗ… ಸಾಬೀತುಪಡಿಸಿದ್ದಾರೆ. ಆದರೆ ಕೆಲ ಸಂಶೋಧಕರು ಸ್ವ… ಧರ್ಮಗಳಾದ ಹಿಂದೂ, ವೀರಶೈವ ಮತ್ತು ಲಿಂಗಾ… ಧರ್ಮಗಳನ್ನು ಒಂದೆಡೆ ಕಟ್ಟಿಹಾಕಲು ಶತಪ್ರ… ಮಾಡುತ್ತಿದ್ದಾರೆ.

ವರ್ಣ, ಕುಲ, ಮತ, ಜಾತಿ ಮತ್ತು ಉಪಜಾತಿಗ… ಉಸಿರಾಡುವ ಜನರನ್ನು ಒಟ್ಟಾರೆಯಾಗಿ 'ಹಿಂದೂ' ಎ… ಕರೆಯುವ ಮೂಲಕ ಪಟ್ಟಭದ್ರ ಹಿತಾಸಕ್ತಿಗಳು … ಸ್ವಾರ್ಥಸಾಧಿಸುವಲ್ಲಿ ಶತಮಾನಗಳಿಂದ ಯಶಸ್ಸನ್ನು ಗಳಿ… ಹಬ್ಬಹರಿದಿನಗಳು ಮತ್ತು ಇತರೆ ಸಾಂಪ್ರದಾ… ಸಂಬಂಧಗಳು ಇವರು ಒಂದುಗೂಡಿಸಿರುವುದ… 'ಹಿಂದೂ' ಎಂಬ ಒಂದೇ ಒಂದು ಶಬ್ದಜಾಲ… ಇವರನ್ನೆಲ್ಲ ಹಿಡಿದಿಡುವಲ್ಲಿ ಶೋಷಕ ಶಕ್ತಿಗಳು ಸಫಲವಾ… ಬ್ರಾಹ್ಮಣರಲ್ಲಿನ ತ್ರಿಮತಸ್ಥರೇ ಒಂದಾಗಿ ಇರಲು ಸಾಧ್ಯ… ದ್ವೈತ, ಅದ್ವೈತ ಮತು ವಿಶಿಷ್ಟಾದ್ವೈತ ಮತಗಳ ಮ… ಜಿಜ್ಞಾಸೆ ಶತಮಾನಗಳಿಂದ ಮುಂದುವರಿಯುತ್ತಲೇ … ಈ ತ್ರಿಮತಗಳ ನಿಲುವು ಭಿನ್ನವಿಭಿನ್ನವಾಗಿವೆ. ಇನ್ನು ಉ… ಸಹಸ್ರಾರು ಜಾತಿ ಉಪಜಾತಿಗಳಲ್ಲಿನ ವೈರುಧ್ಯ… ಜನಜೀವನದ ಮಧ್ಯೆ ಭಾರಿ ಕಂದರಗಳನ್ನೇ ಉಂಟುಮಾ… ದಲಿತರು, ಹಿಂದುಳಿದವರು ಮತ್ತು ಇತರೆ ಹಿಂದುಳಿದ… ದಿನನಿತ್ಯ ಸಂಪ್ರದಾಯಗಳ ದೈಹಿಕ ಮತ್ತು ಮಾ… ಹಿಂಸೆಗೆ ಬಲಿಯಾಗುತ್ತಲೇ ಇರುತ್ತಾರೆ. ಇಂಥ ಅನಿ… ಕಡೆಗೆ ಗಮನ ಹರಿಸಿ ಸಮಾನತೆಯ ಬದು… ಸಾಧಿಸುವುದಕ್ಕಾಗಿ ಬದುಕನ್ನು ಸವೆಸದೆ ಅಸತ್ಯವನ್ನು… ಎಂದು ಹೇಳುವುದಕ್ಕೇ ಬದುಕನ್ನು ಮುಡುಪಾಗಿಡು… ಅಸಹ್ಯಕರವಾದುದು.

ಆದರೆ ಈ ಎಲ್ಲ ವೈರುಧ್ಯಗಳನ್ನು ತಿರಸ್ಕರಿ… 'ಲಿಂಗಾಯತ' ಎಂಬ ಸರ್ವಸಮತ್ವದಿಂದ ಕೂಡಿದ … ಜೀವನವಿಧಾನದ ಧರ್ಮವನ್ನು ಸ್ಥಾಪಿಸಲು ಬಸ… ಶರಣರು ತಮ್ಮ ಇಡೀ ಬದುಕನ್ನು ಸವೆಸಿದರು. ಮಾನವಧರ್ಮದ ನಿಜಸ್ವರೂಪವನ್ನು ಉಳಿಸಿಕೊಳ್ಳುವುದ… ಶ್ರಮಿಸುವುದು ಪ್ರತಿಯೊಬ್ಬ ಮಾನವತಾವಾದಿಯ ಕರ್ತವ್ಯವಾಗಿದೆ. ಹಿಂದೂ ಧರ್ಮದ ಹೆಸರಿನಲ್ಲಿ ತಲೆಯೆ… ರುವ ಕೋಮುವಾದಿಗಳು ಮತ್ತು ಇಸ್ಲಾಂ ಧರ್ಮ… ಹೆಸರಿನಲ್ಲಿ ತಲೆಯೆತ್ತುತ್ತಿರುವ ಮೂಲಭೂತವಾದಿ… ಹೆಚ್ಚಿದಂತೆಲ್ಲ ಶರಣ ಮತ್ತು ಸೂಫಿ ಸಿದ್ಧಾಂತ… ಗಂಡಾಂತರ ಬಂದೊದಗುವುದರಲ್ಲಿ ಸಂಶಯವಿಲ್ಲ.

ಸೂಫಿ, ಶರಣ, ದಾಸ ಮತ್ತು ಸಂತರ ಭಕ್ತಿ… ಅಂತರ್ಯದಲ್ಲಿ ಅತ್ಯಂತ ಕ್ರಾಂತಿಕಾರಿಯಾಗಿದೆ. ಭಕ್ತಿ… ಚಳವಳಿಯಿಂದಾಗಿಯೇ ಇಲ್ಲಿಯವರೆಗೆ ದ… ಕೋಮುವಾದಿಗಳು ಮತ್ತು ಮೂಲಭೂತವಾದಿಗಳ ಹಿಂ… ಸಿಗದೆ ಹೋಗಿದೆ. ಲೋಕಾಯತರು, ಬುದ್ಧ ಮತ್ತು… ಚಳವಳಿಗಳು ರಕ್ಷಿಸಿದ ಭಾರತವನ್ನು ಕೋಮುವ… ಮೂಲಭೂತವಾದಿ ಮತ್ತು ಉಗ್ರಗಾಮಿ ಶಕ್ತಿಗಳ ಹಿ… ಸಿಗದಂತೆ ನೋಡಿಕೊಳ್ಳುವು… ಪ್ರತಿಯೊಬ್ಬ ಪ್ರಜ್ಞಾವಂತರ … ಕರ್ತವ್ಯವಾಗಿದೆ. ಅದಕ್ಕಾಗಿ ಸೂಫಿ, ಶ… ದಾಸ, ಸಂತ ಮತ್ತು ತತ್ತ್ವಪದ… ಸಾಹಿತ್ಯದಿಂದ ಸ್ಫೂರ್ತಿ ಪಡೆಯುವ… ಅವಶ್ಯವಾಗಿದೆ.



■ ರಂಜಾನ್ ದರ್ಗಾ

ಯೋಗೀಶ್ ಮಾಸ್ಟರ್ : ಪುರಾಣದ ಹೂರಣ

ಮಹಾಂತರನ್ನಾಗಿಸಲು ಪವಾಡಗಳ ಪುರಾಣ

ಶಿವರೊಬ್ಬ ಮಹಾನ್ ಸಾಧಕರು: ಮೂವತ್ತೆರಡು ಸಾಧನೆ ಮಾಡಿ. ಅಮೋಘವಾದ ಸಿದ್ಧಿಯನ್ನು ದ್ದಾರಂತೆ. ಅದರಂತೆ ಅವರು ನೀರಿನ ಮೇಲೆ ಬಲ್ಲರಂತೆ. ಈ ಮಾತನ್ನು ಕೇಳಿದ ರಾಮಕೃಷ್ಣ ಹಂಸರು "ಅಂಬಿಗನಿಗೆ ಎರಡಾಣೆ ಕೊಟ್ಟು ಹುದಾದ ನದಿಯನ್ನು ಹಾಯಲು ಮೂವತ್ತೆರಡು ವ್ಯಯವೇಕೆ ಮಾಡಬೇಕಾಯ್ತೋ" ಎಂದು ಉದ್ಗಾರ ಂತೆ. ಅಂತಹ ಸಾಧನೆ ಎಂಬುದು ನಿಜವೋ ಸುಳ್ಳೋ ಚರ್ಚಿಸುವುದು ಬೇರೆ ವಿಷಯ. ಆದರೆ, ಅವುಗಳನ್ನು ದಂತಹ ಮಹಾನುಭಾವರು ಎಂದರೆ ದೊರಕುವ ತೆಯೇ ಬೇರೆ.

ಪವಾಡವನ್ನು ನೋಡಿ ಶರಣಾಗುವ ಜನರು ವುದರಿಂದಲೇ ಬಹಳಷ್ಟು ಜನ ಅತೀಂದ್ರಿಯ ಶಕ್ತಿಗಳ ್‌ಗಳನ್ನು ಮಾಡುತ್ತಾ ತಮ್ಮನ್ನು ಪ್ರಸ್ತುತ ಕೊಳ್ಳುತ್ತಲೇ ಇರುತ್ತಾರೆ.

ನ್ನ ಲ್ಯಾಪ್‌ಟಾಪ್‌ನಲ್ಲಿ ಸತ್ಯ ಸಾಯಿಬಾಬಾ ಆಸ್ಪತ್ರೆಯ ಮಹೋತ್ಸವದ ಚಿತ್ರಗಳನ್ನು ನೋಡುತ್ತಿದ್ದ ಅಭಿಷೇಕ್ ಪಿಯುಸಿ ಓದುತ್ತಿರುವ ಯುವಕ, ನಮ್ಮ ನಾಟಕ ವನ್ನು ಅಭಿನಂದಿಸುತ್ತಿರುವ ಸಾಯಿಬಾಬಾನ ಚಿತ್ರಗಳನ್ನು ಡಿದ. ಆತನಿಗೆ ಸಾಯಿಬಾಬಾನ ಮಹಾನ್ ತಗಳೆಲ್ಲದರ ಪರಿಚಯವನ್ನು ಕೇಳಿ ಮಾಡಿಕೊಂಡಿದ್ದ.



ಗಿ "ಸಾರ್, ಇವರು ರಿಯಲ್ ಸ್ವಾಮೀಜಿ ಅಲ್ವಾ?" ು ಕೇಳಿದ. ನಾನು "ಡೂಪ್ಲಿಕೇಟ್ ಸ್ವಾಮೀಜಿಗಳು ಇರ್ತಾರಾ?" ಎಂದು ಕೇಳಿದೆ. ಅದಕ್ಕವನು "ಇರ್ತಾರಲ್ಲಾ ನಂದನಂತವರು" ಎಂದ. ಆತ ಏಕೆ ಡೂಪ್ಲಿಕೇಟ್ ು ಕೇಳಿದರೆ, ಅವನು ಜೈಲಿಗೆಲ್ಲಾ ಹೋಗಿಬಂದಿದ್ದಾನೆ ು ಆತನ ಅಭಿಪ್ರಾಯ. ಸತ್ಯ ಸಾಯಿಬಾಬಾನ ೇಶನ್‌ಗಳನ್ನೇನಾದರೂ ಪರಿಗಣಿಸಿದ್ದರೆ ಲೈಫ್ ಸೆಟೆನ್ಸೇ ಬೇಕಾಗಿತ್ತು ಎಂದರೆ ಆತನಿಗೆ ನಂಬಲಾಗುವುದಿಲ್ಲ. ಆತನಾದರೂ ಏನು ಮಾಡಿಯಾನು, ಅವನಿಗೆ ನಂದನ ವಿದ್ಯಮಾನಗಳಷ್ಟೇ ಪರಿಚಿತ.

ಸಾಯಿಬಾಬಾ ಹೇಳಿದ ಪವಾಡಗಳ ಕಾರಣ

90ರ ದಶಕದಲ್ಲಿ ಸತ್ಯಸಾಯಿಬಾಬಾ ಅವರ ಗೋಡಿಯಲ್ಲಿರುವ ಜನರಲ್ ಹಾಸ್ಪಿಟಲ್‌ನ ಸಿಲ್ವರ್ ವಿಲಿ ಮಹೋತ್ಸವಕ್ಕೆ ನಾನೊಂದು ರಂಗಪ್ರಯೋಗ ಡುವಂಥ ಅವಕಾಶ ಸಿಕ್ಕಿತು. ಆಗ ನಾನು ಬಾಬಾರವರನ್ನಾಗಲಿ ಅಥವಾ ಅವರ ಪವಾಡ ಸದೃಶ ಘಟನೆಗಳನ್ನಾಗಲಿ, ಜನಪ್ರಿಯ ಮೌಢ್ಯತೆಗಳನ್ನಾಗಲಿ ಕ್ಕೆ ಅಳವಡಿಸಲಾರೆನೆಂದು ನಾನು ನನಗೇ ಡಿಸಿಕೊಂಡಿದ್ದೆ. ಅದರಂತೆಯೇ ಸೈಕೋಸೊಮ್ಯಾಟಿಕ್ ಗಳನ್ನು ಆಧರಿಸಿಕೊಂಡು ಅನಾರೋಗ್ಯಕರ ಗಳಿಂದ ಮೈ ಮತ್ತು ಮನಸ್ಸುಗಳಿಗೆ ಉಂಟಾಗುವ ರೋಗಗಳ ಬಗ್ಗೆ ಸಾಯಿಬಾಬಾ ಹೇಳಿರುವಂತಹ ಗಳನ್ನೇ ರಂಗರೂಪಾಂತರ ಮಾಡಿ ಪ್ರದರ್ಶಿಸಿದ್ದೆ. ರ್ತವಾಗಿರುವಂತಹ ರೋಗ ಮತ್ತು ಚಿಂತನೆ ಗಳನ್ನು ಪ್ರತಿಮೆಗಳನ್ನಾಗಿಸಿ ಪಾತ್ರಗಳಾಗಿ ನಾಟಕದಲ್ಲಿ ತಳೆದಿದ್ದವು. ನಾಟಕವನ್ನು ಬಹಳವಾಗಿ ಮೆಚ್ಚಿದ ಬಾಬಾ ವೇದಿಕೆಯ ಮೇಲೆ ಬಂದು ನಿರ್ದೇಶಕನಾದ ಗ ಕೇಳಿ, ನನ್ನನ್ನು ಅಪ್ಪಿಕೊಂಡು ನಾಟಕವನ್ನು ದನು. ಆ ಸಮಯದಲ್ಲಿ ನಾನು ಅವರ ಜೊತೆ ಸಂದರ್ಶನಕ್ಕಾಗಿ ಹಾತೊರೆದಿದ್ದೆ, ಸಾಮಾನ್ಯವಾಗಿ ಗಳನ್ನು ಮತ್ತು ಸಹಜತಹ ವೈಚಾರಿಕ ಸಂದರ್ಶಕರನ್ನು ನ್ನೂ ಬರಮಾಡಿಕೊಳ್ಳುತ್ತಿರಲಿಲ್ಲ, ಆದರೂ ನಾನು ಮಾಡಿದ್ದ ಯಶಸ್ವಿ ರಂಗಪ್ರಯೋಗದ ಪ್ರಭಾವದಿಂದ ನನಗೆ ಸಂಪಾದಿಸಲು ಅವಕಾಶವಾಗಿತ್ತು.

ಸಹಜವಾಗಿ ನನ್ನ ಮೊದಲನೆಯ ಪ್ರಶ್ನೆ, ಪವಾಡಗಳನ್ನು ಏಕೆ ಮಾಡುತ್ತೀರಿ? ಶೂನ್ಯದಿಂದ ವಸ್ತುಗಳನ್ನು ಸೃಷ್ಟಿಸಲು ಹೇಗೆ ಸಾಧ್ಯ?

ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ! ನಾನೆಂದಿಗೂ ಜನರ ಮೌಢ್ಯವನ್ನು ಹೆಚ್ಚಿಸುತ್ತಾ, ಜನರ ನಂಬಿಕೆಗೆ ಮಂಕುಬೂದಿ ಎರಚುತ್ತಾ, ತಮ್ಮದೊಂದು ಸ್ವರ್ಗವನ್ನು ಸೃಷ್ಟಿಸಿಕೊಂಡು ಮೆರೆಯುತ್ತಾ ಇರುವಂತಹ ಪವಾಡಪುರುಷ ಮತ್ತು ದೇವಮಾನವನಿಂದ ಇಷ್ಟು ಪ್ರಾಮಾಣಿಕ ಉತ್ತರ ನಿರೀಕ್ಷಿಸಿರಲಿಲ್ಲ. ಅವರ ಮಾತಿನ ಒಟ್ಟು ತಾತ್ಪರ್ಯ ಇದಾಗಿತ್ತು: "ವಸ್ತುವು ಸೃಷ್ಟಿಯಾಗಲಾರದು ಮತ್ತು ನಾಶವಾಗದು ಎಂಬ ಸಾಮಾನ್ಯ ವಿಜ್ಞಾನ ತತ್ತ್ವ ನಿನಗೆ ಗೊತ್ತು. ಹಾಗಿದ್ದೂ ನಾನು ಯಾವ ವಸ್ತುವನ್ನು ಸೃಷ್ಟಿಸಬಲ್ಲೆ? ಹೆಚ್‌ಎಂಟಿ ವಾಚನ್ನು ನನ್ನ ಕೈಯಲ್ಲಿ ಬರಮಾಡಿಕೊಂಡೆ ಅಂದರೆ ನಾನು ಹೆಚ್‌ಎಂಟಿ ಫ್ಯಾಕ್ಟರಿಯನ್ನು ಮೈಯಲ್ಲಿಟ್ಟುಕೊಂಡಿದ್ದೇನೆಯೇ? ಇದು ವಸ್ತುವನ್ನು ಸೃಜಿಸುವುದಲ್ಲ ಸಂಚರಿಸುವಂತೆ ಮಾಡುವುದು! ಎಲ್ಲಿಯೋ ಇರುವ ವಸ್ತುವನ್ನು ಮತ್ತಾರಿಗೋ ತಲುಪಿಸಲು ನಾನು ವಾಹಕನಾಗಿ ಕೆಲಸ ಮಾಡುವುದು. ಚಿಕ್ಕಮಕ್ಕಳಿಗೆ ಚಾಕೋಲೆಟ್ ಅಂದರೆ ಇಷ್ಟ. ಚಾಕೊಲೆಟ್ ಕೊಟ್ಟರೆ ಹತ್ತಿರ ಬರುತ್ತಾರೆ. ಇದೊಂದು ತಂತ್ರ. ನಿನಗೆ ಪಿ.ಸಿ.ಸರ್ಕಾರ್ ಗೊತ್ತಿಲ್ಲವಾ ನಾಯ್ನಾ? ಚಾಕೊಲೇಟ್ ಕೊಟ್ಟು ನನ್ನ ವಿಷಯವನ್ನು ಅವರಿಗೆ ಕೊಡುತ್ತೇನೆ. ಆದರೇನು ಮಾಡುವುದು, ಚಾಕೊಲೆಟ್‌ಗಾಗಿ ಹತ್ತಿರ ಬಂದವರು ನನ್ನ ವಿಷಯವನ್ನು ಬಿಟ್ಟು ಬರೀ ಚಾಕೋಲೆಟ್‌ಗಾಗಿಯೇ ಹಂಬಲಿಸಿಕೊಂಡಿದ್ದುಬಿಡುತ್ತಾರೆ." ಆಗ ಅನೇಕ ವಿಷಯಗಳ ವಿನಿಮಯವಾಯಿತು.

ಇರಲಿ, ಇದರಿಂದ ನಾನು ಗ್ರಹಿಸಿದ್ದೇನೆಂದರೆ, ಬಡವಿ ಈಶ್ವರಮ್ಮನ ಮಗ ಸತ್ಯನಾರಾಯಣ ರಾಜು ತನ್ನ ತತ್ಕಾಲದ ಬದುಕಿಗೆ ಸ್ಥಳೀಯವಾಗಷ್ಟೇ ಏನೋ ಮಾಡಿಕೊಂಡಿರಲು ಯತ್ನಿಸುವಾಗ, ಪವಾಡ ಮತ್ತು ಅಕಲ್ಟ್‌ಸೈನ್ಸ್‌ಗಳನ್ನು ನಂಬುವಂತಹ ಸ್ಥಳೀಯ ಆದರೆ ಸಾಮಾಜಿಕವಾಗಿ ಪ್ರಭಾವಶಾಲಿಯಾಗಿದ್ದ ವ್ಯಕ್ತಿ ಸತ್ಯನಾರಾಯಣನನ್ನು ಗೂಡಿನಿಂದ ಗಗನಕ್ಕೆ ತಳ್ಳಿದ್ದ. ಸತ್ಯನಾರಾಯಣ ರಾಜು ಎಂಬ ಅಬ್ರಾಹ್ಮಣ ಹುಡುಗ ವೈದಿಕ ಸಾಮ್ರಾಜ್ಯಕ್ಕೇ ಲಗ್ಗೆಯಿಟ್ಟು ಬದುಕಿದ್ದಾಗಲೇ ತಾನೇ ದೇವರಾದ ಕಥೆ, ಆತನ ಬಗ್ಗೆ ರಚಿತವಾದ ಭಕ್ತಿ ಮತ್ತು ಸಿದ್ಧಾಂತ ಸಾಹಿತ್ಯಗಳು, ಆತನ ಹೆಸರಿನಲ್ಲಿ ನಡೆದ ಪೂಜೆ, ಹವನ, ಹೋಮ, ಅರ್ಚನೆ, ಒಟ್ಟಾರೆ ಎಲ್ಲಾ ಬಗೆಯ ವೈದಿಕ ಆರಾಧನೆಗಳನ್ನು ಜೀವಿತಾವಧಿಯಲ್ಲಿಯೇ ಸ್ವೀಕರಿಸಿದ್ದು ಈಗ ಇತಿಹಾಸ. ಎಲ್ಲಾ ವರ್ಗದ ಜನರನ್ನು ಮೋಸಗೊಳಿಸುತ್ತಿದ್ದ ಪುರೋಹಿತಶಾಹಿವರ್ಗವನ್ನು ಸತ್ಯನಾರಾಯಣ ಮೋಸಗೊಳಿಸಿದನೆಂದು ಯಾರೂ ತಿಳಿಯಬೇಕಾಗಿಲ್ಲ. ಪುರೋಹಿತರಿಗೆ ಸಿಗಬೇಕಾಗಿರುವುದು ಸರಿಯಾಗಿ ಸಿಕ್ಕರೆ ಯಾರನ್ನಾದರೂ ಪೂಜಿಸುತ್ತಾರೆ. ಈಗ ಬೇಟೆಗಾರ ಶಿವ, ಗಿರಿಜನ ಕನ್ಯೆ ಪಾರ್ವತಿ, ಗೊಲ್ಲರ ಕೃಷ್ಣ ಅರಣ್ಯಕರ ಗಣಪತಿ ಇವರೆಲ್ಲಾ ದೇವತೆಗಳಾದ ಬಗೆಯನ್ನೂ ವಿಶ್ಲೇಷಿಸಬಹುದು. ಅದಕ್ಕೆ ಸತ್ಯಸಾಯಿಬಾಬಾ ಕೂಡ ಒಳ್ಳೆಯ ಉದಾಹರಣೆಯಾಗುತ್ತಾರೆ. ನಾವೆಲ್ಲಾ ಸಮಕಾಲೀನರಾಗಿ ನೋಡು ನೋಡುತ್ತಿದ್ದಂತೆಯೇ ಒಂದು ಬಲವಾದ ವ್ಯವಸ್ಥೆಯು ಒಬ್ಬನನ್ನು ದೇವರನ್ನಾಗಿ ಒಂದು ಅತಿದೊಡ್ಡ ಜನಸಮೂಹಕ್ಕೆ ಪ್ರಸ್ತುತಪಡಿಸಲು ಸಾಧ್ಯವಿತ್ತು, ಆಧುನಿಕ ವಿಜ್ಞಾನಯುಗದ ವಿಜ್ಞಾನಿಗಳನ್ನು ತನ್ನ ತೆಕ್ಕೆಗೆ ಎಳೆದುಕೊಳ್ಳಲು ಸಾಧ್ಯವಿತ್ತು, ನವಸಮಾಜದ ಪ್ರಜಾಪ್ರಭುತ್ವದ ಪ್ರತಿನಿಧಿಗಳನ್ನು ತನ್ನೆದುರೇ ಕಾಲಿನ ಮೇಲೆ ಕೆಡವಿಕೊಳ್ಳಲು ಸಾಧ್ಯವಾಗಿತ್ತು ಎಂಬುವುದಾದರೆ, ಇನ್ನು ಶತಶತಮಾನಗಳ ಹಿಂದೆ ನಡೆದಿರಬಹುದಾದ ಕಥೆಗಳ ಗತಿ ಏನು?

ಇದೇ ರೀತಿ ಶಿರಡಿಯ ದ್ವಾರಕಾಮಾಯಿಯಲ್ಲಿದ್ದ ಫಕೀರ ಸಾಯಿಬಾಬನೂ ಕೂಡ ಭಕ್ತರು ಸೃಷ್ಟಿಸಿದ ಪವಾಡಗಳಿಂದ ಮುಕ್ತನೇನಲ್ಲ.

ಪವಾಡಗಳ ಪ್ರಲೋಭನೆ

ಯೇಸು ತನ್ನ ಅಧ್ಯಾತ್ಮ ಸಾಧನೆಗಾಗಿ ನಲವತ್ತು ದಿನಗಳ ಉಪವಾಸ ಮತ್ತು ವನವಾಸಾದಿಗಳನ್ನು ಏಕಾಂತದಲ್ಲಿ ಮಾಡಿ ಜನರಿರುವ ಸಮಾಜಕ್ಕೆ ಮುಖ ಮಾಡುವಾಗ ಅವನಿಗೆ ಉಂಟಾದ ಮೊದಲನೆಯ ಸಮಸ್ಯೆಯೇ ಪವಾಡ ಮತ್ತು ಸತ್ಯವಾಕ್ಯಗಳ ನಡುವಿನ ಆಯ್ಕೆಯ ಕುರಿತದ್ದು. ತಾನು ಪವಾಡ ಪುರುಷನಾಗಿ ಮೆರೆದರೆ ಸಕಲ ಭೋಗ ವೈಭವಗಳು ದೊರಕುತ್ತವೆಯಾದರೂ ಕಲ್ಲುಗಳು ರೊಟ್ಟಿ ಮಾಡಲಾಗದೆಂಬ ವಾಸ್ತವದ ಅರಿವಿದ್ದು ಕೊನೆಗೆ ತಾನು ವಾಕ್ಯಗಳ ಮೂಲಕವೇ ಬದಲಾವಣೆಯನ್ನು ತರಲು ನಿಶ್ಚಯಿಸಿದ. ಅದರಲ್ಲೂ ಹಿಂದಿನಿಂದ ಆರಾಧಿಸಿಕೊಂಡು ಬಂದಿರುವ ಅವರ ಶಾಸ್ತ್ರಗ್ರಂಥಗಳನ್ನು ಖಂಡಿಸದೇ ಅವುಗಳಿಗೆ ಹೊಸ ಆಯಾಮದ ದೃಷ್ಟಿಯನ್ನು ನೀಡಲು ಪ್ರಯತ್ನಿಸಿದ. ಅದಕ್ಕಾಗಿಯೇ ಯೇಸು ಆಯ್ದುಕೊಂಡ ಮಾರ್ಗವೆಂದರೆ ಬೋಧನೆಗಳನ್ನು ಮಾಡುವುದು, ಜನರೊಂದಿಗೆ ಕಲೆಯುವುದು, ಸಂದರ್ಭಾನುಸಾರ ವಿಷಯಗಳನ್ನು ತಿಳಿಸುವುದು. ಯೇಸುವಿಗೆ ಆಗಿನ ಜನರ ಧೋರಣೆಗಳ ಬಗ್ಗೆ ಸ್ಪಷ್ಟ ಅರಿವಿತ್ತಾದರೂ ತನ್ನ ಒಳದೃಷ್ಟಿಯನ್ನು ಎಲ್ಲರಿಗೂ ಧಾರೆಯೆರೆಯುವ ಮೂಲಕ ಕ್ರಾಂತಿಗೆ ಮುನ್ನುಡಿ ಬರೆಯಬೇಕಾಗಿದ್ದ. ಸಮಾಜದಿಂದ ತಿರಸ್ಕೃತರಾದವರನ್ನು ತನ್ನ ಆತ್ಮೀಯ ತೆಕ್ಕೆಗೆ ತೆಗೆದುಕೊಂಡ. ಶಿಷ್ಯರನ್ನಾಗಿ ಮಾಡಿಕೊಂಡ. ಅವರ ಮೂಲಕ ನವಸಮಾಜದ ನಿರ್ಮಾಣದ ಕನಸು ಕಂಡ. ಆದರೆ ಶಿಷ್ಯರು ಅವನ ವಿಚಾರಗಳನ್ನು ಗ್ರಹಿಸುವಷ್ಟು ಪ್ರಜ್ಞಾವಂತರೂ ಆಗಿರಲಿಲ್ಲ, ವಿದ್ಯಾವಂತರಂತೂ ಆಗಿರಲೇ ಇಲ್ಲ. ಅವರಲ್ಲಿ ಕರ ಸಂಗ್ರಹಿಸುತ್ತಿದ್ದ ಮ್ಯಾಥ್ಯೂ ಒಬ್ಬನೇ ಇದ್ದುದರಲ್ಲಿ ಅಕ್ಷರ ಬಲ್ಲವನು ಎನಿಸುತ್ತದೆ. ಯೇಸುವಿನ ಮರಣಕ್ಕೆ ಕಾರಣಗಳನ್ನು ಹುಡುಕುತ್ತಾ ಹೋದರೆ ಪವಾಡಾಪೇಕ್ಷೆಯೂ ಒಂದು ಎಂದು ನೇರವಾಗಿ ತೋರುತ್ತದೆ. ಯೇಸುವಿನ ಶಿಷ್ಯರಲ್ಲಿ ಯೂದನು ತನ್ನ ಗುರುವು ಪವಾಡವನ್ನು ಮಾಡಲು ನಿರಾಕರಿಸುತ್ತಿದ್ದು, ಸೈನಿಕರು ಹಿಡಿದುಬಿಟ್ಟರೆ ಬಂಧನದಿಂದ ತಪ್ಪಿಸಿಕೊಳ್ಳಲು ಮಹಾನ್ ಪವಾಡವನ್ನು ಮಾಡಿ ಎಲ್ಲರನ್ನೂ ಬೆರಗುಗೊಳಿಸುತ್ತಾನೆ, ರೋಮನ್ನರ ಮಣಿಸಿಬಿಡುತ್ತಾನೆ, ತನ್ನ ಗುರುವಿನ ಮಹಿಮೆ ಪ್ರಕಟವಾಗಿಬಿಡುತ್ತದೆ ಎಂದೆಲ್ಲಾ ಯೋಚಿಸಿದ್ದನು. ಆದರೆ ಯೇಸುವಿಗೆ ಅಂಥದ್ದೆಲ್ಲಾ ಲೌಕಿಕ ಪವಾಡಗಳನ್ನು ಮಾಡಲು ಖಂಡಿತ ಬರುತ್ತಿರಲಿಲ್ಲ, ಅವನದು ಭಾವನಾತ್ಮಕವಾದ, ಆಧ್ಯಾತ್ಮಿಕವಾದ ಮತ್ತು ಪ್ರೇಮಪೂರ್ಣವಾದ ಕ್ರಾಂತಿಯಷ್ಟೇ ಗುರಿಯಾಗಿದ್ದದ್ದು. ಇದರಿಂದಾಗಿ ಯೇಸುವು ನಿಂದನೆಗೆ, ದಂಡನೆಗೆ, ಹಿಂಸೆಗೆ ಗುರಿಯಾಗಿ ಆಗಿನ ಅತ್ಯಂತ ಅಪಮಾನಕರವಾದಂತಹ ಶಿಲುಬೆಗೇರುವ ಶಿಕ್ಷೆಯಿಂದಾಗಿ ಕಳ್ಳರ ನಡುವೆ ಮರಣ ಹೊಂದಿದ.

ಕ್ರಿಸ್ತನ ಮರಣವೇ ಕ್ರೈಸ್ತ ಧರ್ಮಕ್ಕೆ ಮುನ್ನುಡಿ ಬರೆಯಿತು. ಕ್ರಿಸ್ತನ ಸಾಮಾನ್ಯ ಅನುಯಾಯಿಗಳ ದೊಡ್ಡ ವಿಪರ್ಯಾಸವೆಂದರೆ ಮತ್ತು ಹೊಸ ಒಡಂಬಡಿಕೆಯ ವ್ಯಂಗ್ಯವೆಂದರೆ ಯಾವ ಪವಾಡಗಳನ್ನು ಮಾಡಿ ಜನರನ್ನು ತನ್ನತ್ತ ಸೆಳೆದುಕೊಂಡು, ದೌಲತ್ತುಗಳಿಂದ ಮೆರೆಯುವಂತಹ ಪವಾಡದ ತಂತ್ರಗಳನ್ನು ನಿರಾಕರಿಸಿ, ಸತ್ಯವಾಕ್ಯಗಳನ್ನು ಆಡುವಂತಹ ಮಾರ್ಗ ಆಯ್ದುಕೊಂಡನೋ ಮತ್ತು ಮತ್ತದೇ ಪವಾಡಗಳನ್ನು ಮಾಡಲು ನಿರಾಕರಿಸಿ ಪ್ರಾಣವನ್ನೇ ಬಿಟ್ಟನೋ, ಆ ಯೇಸುವಿನ ಬದುಕನ್ನೇ ಪವಾಡಮಯಗೊಳಿಸಿದ್ದು. ಕನ್ಯೆ ಮೇರಿಯಿಂದ ಹುಟ್ಟಿಸಿದರು, ಪಿಶಾಚಿಗಳೊಂದಿಗೆ ಮಾತಾಡಿಸಿದರು, ಸತ್ತವನನ್ನು ಬದುಕಿಸಿದರು, ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿಸಿದರು, ಕೃಷ್ಣ ಒಂದು ಅಗುಳು ಅನ್ನದಿಂದ ದೂರ್ವಾಸನ ಎಲ್ಲಾ ಋಷಿಗಳ ತಂಡಕ್ಕೆ ಉಣಿಸಿದಂತೆ ಒಂದು ರೊಟ್ಟಿಯಿಂದ ಎಲ್ಲರಿಗೂ ಹಂಚಿದರು, ಸತ್ತ ಮೇಲೆ ಬದುಕಿಸಿ ಮೇಲಕ್ಕೂ ಏರಿಸಿಬಿಟ್ಟರು!! ಸರಳವಾಗಿ, ನೇರವಾಗಿ ಮತ್ತು ಪ್ರಾಮಾಣಿಕವಾಗಿ ಪ್ರೇಮವನ್ನು ಸಾರ್ವತ್ರಿಕಗೊಳಿಸಲು ಯತ್ನಿಸಿದ ಒಬ್ಬ ಕ್ರಾಂತಿಕಾರಿಗೆ ಪವಾಡಪುರುಷನ ಪಟ್ಟ ಕಟ್ಟಿದ್ದಲ್ಲದೇ ಆತನ ಪವಾಡವನ್ನು ವಿವರಿಸಲು ಅತಿಭೌತ ವಿಜ್ಞಾನಿಗಳು (ಅಕಲ್ಟ್ ಸೈನ್ಸಿಸ್ಟ್) ಹೊಸ ಹೊಸ ವಿಶ್ಲೇಷಣೆ ಮತ್ತು ವಿವರಣೆಗಳನ್ನು ಕೊಟ್ಟು ಹೆಚ್ಚಿನ ವಿದ್ಯಾವಂತರ ಮತ್ತು ವಿಚಾರವಂತರ ದಾರಿಗಳನ್ನೂ ತಪ್ಪಿಸಿದರು. ಇನ್ನು ಸಾಮಾನ್ಯ ಮನುಷ್ಯರ ಪಾಡೇನು?


ನಮ್ಮ ದೇಶದಲ್ಲಿ ಸಾಮಾನ್ಯ ಜನರಲ್ಲಿ ಒಂದು ನಂಬಿಕೆ ಪ್ರಚಲಿತದಲ್ಲಿದೆ. ಅದೆಂದರೆ, ನಮ್ಮ ದೇಶದಲ್ಲಿಯೇ ಇಂತಹ ಮೌಢ್ಯಗಳು ಇರುವುದು, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಎಲ್ಲರೂ ವೈಜ್ಞಾನಿಕವಾಗಿ ಮತ್ತು ವೈಚಾರಿಕವಾಗಿರುತ್ತಾರೆಂದು. ಹಾಗೇನೂ ಇಲ್ಲ, ಮೌಢ್ಯವು ಸರ್ವಾಂತರ್ಯಾಮಿ, ಸರ್ವಕಾಲಿಕ ಹಾಗೂ ಸರ್ವಶಕ್ತವೂ ಕೂಡ!! ಬೈಬಲ್ಲಿನ ಪವಾಡಗಳಿಗೆ ವೈಜ್ಞಾನಿಕ ವಿವರಣೆಗಳನ್ನು ನೀಡುವಂತಹ ಅನೇಕ ಕೃತಿಗಳು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಚಲಿತದಲ್ಲಿವೆ.

ಆದರೂ ಈ ಪವಾಡಗಳನ್ನು ಭಾವನಾತ್ಮಕವಾಗಿ ಮತ್ತು ತಾತ್ವಿಕವಾಗಿ ಗ್ರಹಿಸುವ ಒಂದು ವಿಧಾನವಂತೂ ಇದ್ದೇ ಇರುವುದು. ಪವಾಡಗಳನ್ನು ಸಂಕೇತಗಳನ್ನಾಗಿ ಪರಿಭಾವಿಸದೇ ನೇರವಾಗಿ ಗ್ರಹಿಸುವುದರಿಂದ ಸಮಸ್ಯೆಗಳು ತೋರುವವು.

ಸಾಮೂಹಿಕ ಸನ್ನಿಗೆ ಒಳಗಾಗಿ ಜನರು ಹುಚ್ಚಾಪಟ್ಟೆ ತಮ್ಮೊಲವಿನ ಮಹಾಂತರನ್ನು ಸಂತರನ್ನಾಗಿಸುವುದು, ಅವರ ಪವಾಡಗಳನ್ನು ಅತಿ ವೈಭವೀಕರಿಸುತ್ತಾ ಅವನ್ನು ಸಂತರನ್ನಾಗಿಸಲು ಕಾರಣವನ್ನಾಗಿ ಮಾಡಿಕೊಳ್ಳುವುದು ಇತ್ಯಾದಿಗಳನ್ನು ಗಮನಿಸಿಯೇ, ರೋಮನ್ ಕ್ಯಾಥೋಲಿಕ್ ಚರ್ಚು ತಾವೇ ಸತ್ತ ಮಹಾತ್ಮರನ್ನು ಸಂತ ಪದವಿಗೇರಿಸುವ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡಿರಬಹುದೆಂದು ಯೋಚಿಸುತ್ತೇನೆ. ಧಾರ್ಮಿಕ ಸಂಸ್ಥೆಯೊಂದು ಒಂದು ಮಾನದಂಡವನ್ನಿರಿಸಿಕೊಂಡು ಆಸ್ಕರ್ ಅವಾರ್ಡ್, ಭಾರತ ರತ್ನ ಅಥವಾ ಇತರ ಪ್ರಶಸ್ತಿಗಳಂತೆ ಒಬ್ಬ ಸಾತ್ವಿಕ ಮಹಾತ್ಮನಿಗೆ ಸಂತ ಪದವಿಯನ್ನು ಕೊಡುವುದು ನಾನ್ಸೆನ್ಸ್ ಅಂತ ಅನ್ನಿಸಿದರೂ ಸಾಮೂಹಿಕ ಸನ್ನಿಗೆ ತುತ್ತಾಗಿ ಮೌಢ್ಯವಾದಿಗಳಿಂದ ಕೊಡಲ್ಪಡುವ ನಾನ್ಸೆನ್ಸ್ ಸಂತಪಟ್ಟಕ್ಕಿಂತ ವಾಸಿ ಎಂಬ ಸಮಾಧಾನಮಾಡಿಕೊಳ್ಳಬಹುದೇನೋ. ಇಲ್ಲಿಯೂ ದ್ವಂದ್ವ ಬರುತ್ತದೆ. ಜನರಿಂದ ಸಾಮೂಹಿಕವಾಗಿ ಅಥವಾ ಸಾಮಾಜಿಕವಾಗಿ ದೊರಕುವ ಸಂತಪಟ್ಟವು ಶ್ರೇಷ್ಠವೋ ಅಥವಾ ಒಂದಷ್ಟು ಜನ ಮಾತ್ರ, ಕ್ಷೇತ್ರ ಧಾರ್ಮಿಕವಾದರೂ, ಒಂದು ಎತ್ತರದ ಹಂತದಲ್ಲಿ ಕುಳಿತುಕೊಂಡು ಆರೋಪಿಸುವಂತಹ ಅಥವಾ ದಯಪಾಲಿಸುವಂತಹ ಸಂತಪಟ್ಟ ಶ್ರೇಷ್ಠವೋ! ಯಾವುದು ಶ್ರೇಷ್ಠವೋ, ಕನಿಷ್ಠವೋ ಯಾವ ಕಡೆಯಿಂದಲೂ ನಮಗೆ ಸಿಗದಿರುವುದರಿಂದ ನಾವಂತೂ ಈ ರಗಳೆಯಿಂದ ಮುಕ್ತರು.


ಇರಲಿ, ಕ್ಯಾಥೋಲಿಕ್ ಚರ್ಚ್ ದಯಪಾಲಿಸುವ ಸಂತಪಟ್ಟದ ಮಾನದಂಡದಲ್ಲಿಯೂ ಪವಾಡಗಳೆರಡನ್ನು ನಿರೀಕ್ಷಿಸಲಾಗುವುದು. ಆದರೆ ಈಗ ಅದನ್ನು ಕೊಂಚ ವೈಚಾರಿಕ ಮತ್ತು ತಾತ್ವಿಕ ದೃಷ್ಟಿಕೋನಗಳಿಂದ ನೋಡಲಾಗುತ್ತಿದೆಯಾದರೂ ಪವಾಡದ ಜನಪ್ರಿಯ ಹಿಡಿತದಿಂದ ಅದೂ ಕೂಡ ಮುಕ್ತವಲ್ಲ ಎಂಬುದಂತೂ ನಿಜ.

ವಿದ್ಯಾವಂತರು ಪವಾಡಗಳನ್ನು ನಂಬುವಂತಹ ಅನೇಕ ನವಿರು-ಮೌಢ್ಯ ಸಾಹಿತ್ಯಗಳು ಬೇಕಾದಷ್ಟಿವೆ. ಅವುಗಳಲ್ಲಿ ಭಾರತದ ಪರಮಹಂಸ ಯೋಗಾನಂದರ "ಯೋಗಿಯ ಆತ್ಮಕಥೆ", ಸ್ವಾಮಿ ರಾಮರ "ಹಿಮಾಚಲದ ಮಹಾತ್ಮರ ಸನ್ನಿಧಿಯಲ್ಲಿ" ಮತ್ತು ಇತರ ಅನೇಕ ಗ್ರಂಥಗಳು. ಇವು ಸತ್ಯಸಾಯಿಬಾಬಾನ ಪವಾಡಗಳಂತೆ ಲೋಕಲ್ ಆಗಿರುವುದಿಲ್ಲ, ಕ್ಲಾಸಿಕ್ ಪವಾಡಗಳು. [illegible] ಮಸಾಲೆ ಚಲನಚಿತ್ರಗಳಿಗೂ ಮತ್ತು ಕಲಾತ್ಮಕ ಚಿತ್ರಗಳಿಗೂ ಇರುವ ವ್ಯತ್ಯಾಸ. ■



ರವಿ ಸಾವಿನ ಸುತ್ತ ರಾಜಕೀಯ

ಬೆಂಗಳೂರಿನ ಒಕ್ಕಲಿಗರ ಸಂಘದಲ್ಲಿ ಅಧಿಕಾರ ಸ್ಥಾನದಲ್ಲಿರುವ ಹಿರಿಯರೊಬ್ಬರು ಫೋನ್ ಮಾಡಿದ್ದರು. ಡಿ.ಕೆ.ರವಿ ಸಾವಿನ ವಿಚಾರವನ್ನು ಮುಂದಿಟ್ಟುಕೊಂಡು ಒಕ್ಕಲಿಗರ ಸಂಘದ ವತಿಯಿಂದ ಭಾರೀ ಪ್ರತಿಭಟನಾ ಮೆರವಣಿಗೆಯೊಂದನ್ನು ನಡೆಸುವ ಬಗ್ಗೆ ಗುಸುಗುಸು ಕೇಳಿಬರಲಾರಂಭಿಸಿತು. ಸಾವಿನ ವಿಚಾರದಲ್ಲಿ, ಅದೂ ಇಡೀ ರಾಜ್ಯವೇ ಜಾತಿ ಮತ ಮರೆತು ಮೆಚ್ಚಿಕೊಂಡಿರುವ ವ್ಯಕ್ತಿಯೊಬ್ಬನ ಸಾವಿನ ವಿಚಾರದಲ್ಲಿ, ಜಾತಿರಾಜಕಾರಣ ಮಾಡುವುದು ಸರಿಯಲ್ಲ. ಆ ಐಎಎಸ್ ಅಧಿಕಾರಿ ಇಡೀ ರಾಜ್ಯಕ್ಕೆ ಸೇರಿದಾತ. ಆತನನ್ನು ಒಂದು ಜಾತಿಗೆ ಸೀಮಿತಗೊಳಿಸುವುದು ಸರಿಯಲ್ಲ ಎಂದು ನಾನು ಹೇಳಿದೆ.



ನನ್ನ ಮಾತಿಗೆ ಆ ಕ್ಷಣಕ್ಕೆ ಸಮ್ಮತಿ ಸೂಚಿಸಿದರಾದರೂ ಮತ್ತಷ್ಟು ಸಮಯ ಕಳೆಯುತ್ತಿದ್ದಂತೆ "ನೀವು ಹೇಳುತ್ತಿರುವುದೇನೋ ಸರಿ. ಆದರೆ ಮೇಲಿನಿಂದ ಭಾರೀ ಒತ್ತಡ ಇದೆ" ಎಂದು ಹೇಳಿ ಅವರು ಮೆರವಣಿಗೆಯ ಸಿದ್ಧತೆಯಲ್ಲಿ ತೊಡಗಿಕೊಂಡರು.

ಈ 'ಮೇಲಿನ ಒತ್ತಡ' ಎಂದರೆ ಅದು ಕುಮಾರ ಸ್ವಾಮಿಯ ಒತ್ತಡ ಎಂದು ಬಿಡಿಸಿಹೇಳುವ ಅಗತ್ಯವಿಲ್ಲ. 'ಸಾವಿನಲ್ಲಿ ಹೀಗೆ ರಾಜಕಾರಣ ಮಾಡಿದ್ದು ನನಗಂತೂ ಇಷ್ಟವಾಗಲಿಲ್ಲ' ಎಂಬುದು ಅವರ ಮಾತಿನ ಸಾರಾಂಶ.

ತಮಗೆ ಸಾವಿನ ವಿಚಾರದಲ್ಲಿ ರಾಜಕಾರಣ ಮಾಡುವ ಅಗತ್ಯವಿಲ್ಲ ಎಂದು ಕುಮಾರಸ್ವಾಮಿಯವರು ಹೇಳಿಕೊಂಡಿದ್ದಾರೆ. ಆದರೆ ಮೊನ್ನೆ ಅವರು ಮಾಡಿದ್ದು ಶವದ ಮೇಲಣ ರಾಜಕಾರಣ ಮತ್ತು ಅತ್ಯಂತ ಕೊಳಕು ಜಾತಿ ರಾಜಕಾರಣವಲ್ಲವಾದರೆ ಅವರು ಮಾಡಿದ್ದು ಇನ್ನೇನು? ಸಾರ್ವಜನಿಕ ಸೌಜನ್ಯ, ಲಜ್ಜೆ ಇತ್ಯಾದಿಗಳೆಂದರೆ ಏನೆಂದೇ ಅರಿಯದ, ಜಾತ್ಯತೀತ ಎಂದರೆ ಏನು ಎಂದು ಪ್ರಶ್ನಿಸುತ್ತಲೇ ಜಾತ್ಯತೀತತೆಯ ಬೋರ್ಡು ಹಾಕಿಕೊಂಡ, ಅಧಿಕಾರಕ್ಕಾಗಿ ಯಾರೊಂದಿಗೆ ಯಾವಾಗ ಬೇಕಾದರೂ ಹೊಂದಾಣಿಕೆ ಮಾಡಿಕೊಳ್ಳುವ, ರಾಜಕಾರಣದಲ್ಲಿರಲು ಏನೇನೂ ಯೋಗ್ಯತೆ ಇರದ ಇಂಥವರು ನಮ್ಮ ಜನಪ್ರತಿನಿಧಿಗಳಾಗುವುದು, ನಮ್ಮನ್ನು ಆಳುವುದು ನಾಡಿನ ದೌರ್ಭಾಗ್ಯವೇ ಸರಿ.

ರವಿ ಸಾವಿನ ನೆಪದಲ್ಲಿ ಬಿಜೆಪಿ ಮಾಡಿದ 'ಹೋರಾಟ' ನಿಜಕ್ಕೂ ಹಾಸ್ಯಾಸ್ಪದವಾಗಿತ್ತು. ರಘುಪತಿ ಭಟ್ಟರ ಪತ್ನಿ ಮತ್ತು ಯಡಿಯೂರಪ್ಪನ ಪತ್ನಿಯ ಅಸಹಜ ಸಾವು, ಹಾಲಪ್ಪ ಜೀವರಾಜ, ರಾಮದಾಸ್ ಮೊದಲಾದವರ 'ಮಹಾನ್ ಸಾಧನೆ'ಗಳನ್ನು ಸಿಬಿಐ ಬಿಡಿ ಸಿಐಡಿ ಮೂಲಕವೂ ತನಿಖೆ ನಡೆಸದವರು, ಲಕ್ಷ್ಮಣ ಸವದಿಯ ನೇತೃತ್ವದಲ್ಲಿ ನಡೆದ ಬ್ಲೂಫಿಲಂ ವೀಕ್ಷಣೆ ಪ್ರಕರಣವನ್ನು ಸದನಸಮಿತಿಯ ಮೂಲಕ ಜಾಣತನದಿಂದ ಮುಚ್ಚಿಹಾಕಿದವರು, ಸಿಬಿಐ ಎಂದರೆ 'ಕಾಂಗ್ರೆಸ್ ಬ್ಯೂರೋ ಆಫ್ ಇನ್‌ವೆಸ್ಟಿಗೇಶನ್', 'ಚೋರ್ ಬಚಾವೋ ಇನ್‌ಸ್ಟಿಟ್ಯೂಶನ್' ಎಂದೆಲ್ಲ ಜರೆದವರು ಇಂದು ಸಿಬಿಐ.. ಸಿಬಿಐ ಎಂದು ಅರಚುತ್ತಿರುವುದು ಕೇಳಲು ತುಂಬಾ ತಮಾಷೆಯಾಗಿದೆ.

ಕನ್ನಡನಾಡಿನ ಬಹುತೇಕ ವಾರ್ತಾವಾಹಿನಿಗಳು ಮತ್ತು ಪತ್ರಿಕೆಗಳು ಈ ರಾಜಕಾರಣಿಗಳಿಗಿಂತಲೂ ತಾವು ಒಂದು ಕೈಮೇಲು ಎಂಬಂತೆ ಮತ್ತು ಕನಿಷ್ಠ ವಿವೇಚನೆಯನ್ನೂ ತೋರದೆ ಮುಖ್ಯಮಂತ್ರಿಗಳನ್ನು ಸರಕಾರವನ್ನು ಕೊಳಕು ಭಾಷೆಯಲ್ಲಿ ನಿಂದಿಸುತ್ತಾ ನಡೆದುಕೊಂಡ ರೀತಿಯಂತೂ ಪತ್ರಿಕಾ ಧರ್ಮಕ್ಕೆ ಕಳಂಕ ತರುವಂತಿತ್ತು. ಅನೇಕ ಬಾರಿ ವಾರ್ತಾವಾಹಿನಿಗಳಲ್ಲಿ ಕುಳಿತವರು ಆಂಕರ್‌ಗಳೋ, ಬಿಜೆಪಿ ಪಕ್ಷದ ವಕ್ತಾರರೋ ಎಂಬ ಬಗ್ಗೆ ಅನುಮಾನ ಮೂಡುವಂತಿತ್ತು (ಚಡ್ಡಿಗಳು ದೊಡ್ಡ ಪ್ರಮಾಣದಲ್ಲಿ ಕನ್ನಡ ಮಾಧ್ಯಮಗಳಲ್ಲಿ ತೂರಿಕೊಂಡುಬಿಟ್ಟಿದ್ದಾರೆ. ಹವ್ಯಕ ಬ್ರಾಹ್ಮಣರು ನಾಡಿನ ಆರು ಪ್ರಮುಖ ದಿನಪತ್ರಿಕೆಗಳ ಸಂಪಾದಕರ ಸಿಂಹಾಸನದಲ್ಲಿ ವಿರಾಜಮಾನರಾಗಿದ್ದಾರೆ!).

ಚರ್ಚಾ ಕಾರ್ಯಕ್ರಮವೊಂದನ್ನು ತಟಸ್ಥ ನಿಲುವಿನೊಂದಿಗೆ ನಡೆಸಿಕೊಡುವುದೆಂದರೆ ಏನು ಎಂಬ ಪ್ರಾಥಮಿಕ ಜ್ಞಾನವೂ ಇರದ ಮಂದಿ ತಮಗಿಂತ ಬುದ್ಧಿವಂತರು ಈ ಜಗತ್ತಿನಲ್ಲೇ ಇಲ್ಲ, ನಾವು ಪ್ರಶ್ನಾತೀತರು ಎಂಬಂತೆ ಭಾವಿಸಿಕೊಂಡು ವರ್ತಿಸುವುದನ್ನು ನೋಡುವಾಗ ಈ ವಾರ್ತಾವಾಹಿನಿಗಳ ಬಗ್ಗೆ ಅಯ್ಯೋ ಎನಿಸುತ್ತದೆ.

ಬೇಜವಾಬ್ದಾರಿ ರಾಜಕಾರಣಿಗಳು ಮತ್ತು ಮಾಧ್ಯಮಗಳು ಸಿಬಿಐ ತನಿಖೆ, ಸಿಬಿಐ ತನಿಖೆ ಎಂದು ಬೊಬ್ಬಿರಿಯುತ್ತಿದ್ದಂತೆ ಮುಗ್ಧ ಜನಸಮೂಹವೂ (ಸಿಬಿಐಯ ಬಗ್ಗೆ ಏನೊಂದೂ ತಿಳಿವಳಿಕೆ ಹೊಂದಿರದಿದ್ದರೂ) ಸಿಬಿಐ ತನಿಖೆ ಬೇಕೇ ಬೇಕು ಎಂದು ದನಿಗೂಡಿಸಲಾರಂಭಿಸಿದ್ದರಲ್ಲಿ ಅಚ್ಚರಿಯೇನೂ ಇಲ್ಲ.

ಈ ನಡುವೆ ಅನೇಕ ಗಂಭೀರ ವಿಚಾರಗಳು ಮರೆಗೆ ಸರಿದುಬಿಟ್ಟವು. ಸಿಐಡಿ ಎಷ್ಟು ತಟಸ್ಥ ಸಂಸ್ಥೆಯೋ ಸಿಬಿಐಯೂ ಅಷ್ಟೇ ತಟಸ್ಥ ಸಂಸ್ಥೆ (ಗುಜರಾತ್ ಗಲಭೆಯ ವಿಚಾರದಲ್ಲಿ ಸಿಬಿಐಯ ಪ್ರಹಸನ ಈಗಾಗಲೇ ಜಗಜ್ಜಾಹೀರಾಗಿದೆ). ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸಿಐಡಿ ಎಷ್ಟು ನಿಯಂತ್ರಿತವೋ ಸಿಬಿಐಯೂ ಅಷ್ಟೇ ನಿಯಂತ್ರಿತ. ಸಿಬಿಐಯಲ್ಲಿ ಇರುವುದು ನಮ್ಮ ಪೊಲೀಸ್ ಇಲಾಖೆಯಿಂದ ನಿಯೋಜಿತರಾಗಿ ಹೋದವರೇ. ಭಾರತ ಒಕ್ಕೂಟದಲ್ಲಿ ಕರ್ನಾಟಕವೂ ಒಂದು ಸ್ವಾಯತ್ತ ರಾಜ್ಯವಾಗಿರುವುದರಿಂದ ಮತ್ತು ಕಾನೂನು ಸುವ್ಯವಸ್ಥೆಯು ರಾಜ್ಯದ ವಿಚಾರವಾಗಿರುವುದರಿಂದ ಸಿಐಡಿಯ ಬಗ್ಗೆ ಅನುಮಾನ ವ್ಯಕ್ತಪಡಿಸುವುದೆಂದರೆ ಅದು ನಮ್ಮ ಪೊಲೀಸರನ್ನು, ತನಿಖಾ ಸಂಸ್ಥೆಯನ್ನು, ಒಟ್ಟಾರೆಯಾಗಿ ನಮ್ಮ ರಾಜ್ಯವನ್ನು ಏಕಕಾಲಕ್ಕೆ ಅವಮಾನಿಸುತ್ತಿರುವುದು ಎನ್ನುವುದನ್ನು ಯಾರೂ ತಿಳಿದುಕೊಳ್ಳಲೇ ಇಲ್ಲ. ಸಿಐಡಿಯ ಕೈಯಲ್ಲಿ ಇರುವ ತನಕವೂ ಕೇಸಿನ ಬಗ್ಗೆ ಗೃಹಮಂತ್ರಿ ಜಾರ್ಜರನ್ನೋ, ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನೋ ಪ್ರಶ್ನಿಸಬಹುದು, ತರಾಟೆಗೆ ತೆಗೆದುಕೊಳ್ಳಬಹುದು, ಒಂದು ರೀತಿಯಲ್ಲಿ ಅಲ್ಲಿ ಉತ್ತರದಾಯಿಗಳಿರುತ್ತಿದ್ದರು. ಸಿಬಿಐಗೆ ಹೋದ ಬಳಿಕ ಪ್ರಕರಣ ಏನಾಯಿತು ಎಂದು ಪ್ರಶ್ನಿಸುವುದಾದರೂ ಯಾರನ್ನು (ಧರ್ಮಸ್ಥಳದ ಸೌಜನ್ಯ ಪ್ರಕರಣ ಯಾವ ಹಂತದಲ್ಲಿದೆ ಎಂದು ಯಾರನ್ನು ಕೇಳುವುದು)? ನಿಷ್ಪಕ್ಷಪಾತ ತನಿಖೆಯಾಗಬೇಕು, ಸಮಯ ಮಿತಿಯೊಳಗೆ ನಡೆಯಬೇಕು ಮತ್ತು ಸತ್ಯ ಬೇಗನೇ ತಿಳಿಯಬೇಕು ಎಂದು ಸರಕಾರವನ್ನು ಆಗ್ರಹಿಸುತ್ತಿದ್ದರೆ ಅದು ಹೆಚ್ಚು ತರ್ಕ ಸಮ್ಮತವಾಗಿರುತ್ತಿತ್ತು ಅಲ್ಲವೇ?

ಇದೊಂದು ಅತ್ಯಂತ ಸರಳ ಪ್ರಕರಣವಾಗಿದ್ದು ಈಗಾಗಲೇ ಸಿಐಡಿ ಹೊರಹಾಕಿರುವ ಸತ್ಯವನ್ನೇ ನಾಳೆ ಸಿಬಿಐಯೂ ಹೊರಹಾಕಿದರೆ ಆಗ ಸಿಬಿಐ ತನಿಖೆಗಾಗಿ ಬೊಬ್ಬಿಟ್ಟವರೆಲ್ಲ ಏನು ಹೇಳುತ್ತಾರೆ? ಏನೂ ಹೇಳುವುದಿಲ್ಲ, ಯಾಕೆಂದರೆ ಇಲ್ಲಿ ನ್ಯಾಯಕ್ಕಿಂತಲೂ ರಾಜಕಾರಣ ಮುಖ್ಯ. ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕು ಆ ಮೂಲಕ ರಾಜಕೀಯ ಬೇಳೆ ಬೇಯಿಸಿಕೊಳ್ಳಬೇಕು ಎನ್ನುವುದಷ್ಟೇ ಏಕೈಕ ಗುರಿಯಾಗಿರುವಾಗ ನಾಳೆ ಪ್ರಕರಣದ ಕತೆ ಏನಾದರೆ ಇವರಿಗೇನು?

-ಶ್ರೀನಿವಾಸ ಕಾರ್ಕಳ, ಮಂಗಳೂರು

ಡಿ.ಕೆ.ರವಿಯವರ (ಆತ್ಮಹತ್ಯೆ) ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರೊಬ್ಬರ ವ್ಯಕ್ತಿ ಗೌರವಕ್ಕೆ ಚ್ಯುತಿ ಬರದಂತೆ ವರದಿ ಮಾಡಿದ್ದೀರಿ. ಸಮೂಹ ಸನ್ನಿಯಲ್ಲಿ ಸತ್ಯ ಕೊಚ್ಚಿಹೋಗಬಾರದೆಂದು ಪ್ರಯತ್ನಿಸಿದ್ದೀರಿ. ಕೋಮುವಾದಿಗಳು ಮತ್ತು ಜಾತಿವಾದಿಗಳು ಹೇಳಿದ್ದೆಲ್ಲ ಅಂತಿಮವಲ್ಲ ಎಂದು ನಿರೂಪಿಸಿದ್ದೀರಿ. ಸೂರ್ಯ, ಚಂದ್ರ ಮತ್ತು ಸತ್ಯಗಳನ್ನು ಎಂದಿಗೂ ಮರೆಮಾಚಲು ಸಾಧ್ಯವಿಲ್ಲ ಎಂದು ಬುದ್ಧ ಹೇಳಿದ್ದಾನೆ. ಪತ್ರಿಕೆಯ ನಿಲುವಿಗೇ ಜಯ ಖಚಿತ.


- ರವಿಕುಮಾರ್, ಹಾಸನ

ದಕ್ಷ ಅಧಿಕಾರಿ ಡಿ.ಕೆ.ರವಿ ಅವರ ಅಂತ್ಯ ಈ ನಾಡು ಕಂಡ ದೊಡ್ಡ ದುರಂತ. ಅವರ ಸಾವಿನ ಹಿಂದಿನ ನಿಗೂಢ ಸಾಧ್ಯತೆಗಳ ಪೈಕಿ ಹೆಚ್ಚು ಹತ್ತಿರ ಇರಬಹುದಾದ ಸತ್ಯವನ್ನು ಡಾ. ಸೋಮನಾಥ್ ತೋರಿಸಿಕೊಟ್ಟಿದ್ದಾರೆ. ಆದರೆ ಇಂತಹ ಸತ್ಯವನ್ನು ನಂಬದಂತ ವಾತಾವರಣವನ್ನು ಟಿವಿ ಮತ್ತು ಸೋಶಿಯಲ್ ಮೀಡಿಯಾಗಳಲ್ಲಿ ಸೃಷ್ಟಿ ಮಾಡಲಾಗುತ್ತಿದೆ. ಸಿಐಡಿ ಅಥವಾ ಸಿಬಿಐ ತನಿಖೆ ಆಗಿ ಅಂತಿಮ ಸತ್ಯ ಬೇಗ ಹೊರಗೆ ಬರಲಿ. ಯಾಕೆಂದರೆ ಕೆ.ಫಣಿರಾಜ್ ಹೇಳಿರುವಂತೆ ಬ್ರೂಟಸ್, ಆಂತೋನಿ, ಕಾಸಿಯಸ್‌ಗಳು ಜನರ ಭಾವನೆಗಳ ಜೊತೆ ಚೆಲ್ಲಾಟ ಆಡಲು ಈಗಾಗಲೇ ರೆಡಿ ಆಗಿದ್ದಾರೆ. ನಿಮ್ಮ ನಿಷ್ಠೂರ ವರದಿಗೆ ಥ್ಯಾಂಕ್ಸ್.

-ಗುಲಾಬ್ ನದಾಫ್, ಬಾಗಲಕೋಟೆ

ನೂರ್ ಕರೆಗೆ ಕಾಡಿನಲ್ಲಿರುವವರು ಸ್ಪಂದಿಸಲಿ

'ಕಾಡಿನ ನನ್ನ ಸಂಗಾತಿಗಳ ನೆನಪಿನಲ್ಲಿ...' ನೂರ್ ಶ್ರೀಧರ್ ಬರೆದ ಲೇಖನ ಮನಮುಟ್ಟುವಂತಿತ್ತು. ಕಾಡಿನೊಳಗಿನ ಅವರ ಸಂಗಾತಿಗಳು ತಪ್ಪದೆ ಶ್ರೀಧರ್ ಅವರ ಕರೆಗೆ ಸ್ಪಂದಿಸಬೇಕಿದೆ. ಈಗ ಕಾಲ ಪಕ್ವವಾಗಿದೆ, ಬನ್ನಿ ಸಮಾಜದ ಒರೆಕೋರೆಗಳಿಗೆ ಈ ನಾಡಿನಲ್ಲಿ ಧ್ವನಿಯಾಗಿ, ಈ ಹೋರಾಟದಲ್ಲಿ ಪಟ್ಟಭದ್ರಹಿತಾಶಕ್ತಿಗಳ ಪ್ರತಿರೋಧ




ಎದುರಾಗುವ ಪಶ್ಚೆ ಮೂಡಿ ಹಿಮ್ಮುಖರಾಗದಿರಿ, ನಾಡಿನ ಜನತೆ ನಿಮ್ಮೊಂದಿಗೆ ಇದೆ. ಪಾರ್ವತಿ, ಹಾಜಿಮಾ, ಸಾಕೇತ್, ಶಿವಲಿಂಗು, ಅಜಿತ್, ಉಮೇಶ್, ದಿನಕರ್, ಮನೋಹರ್ ಮುಂತಾದ ಅಮೂಲ್ಯ ಚೇತನಗಳು ನಿಮ್ಮ ಹೋರಾಟದಲ್ಲಿ ಕಣ್ಮರೆಯಾಗಿರುವುದು ಸಾಕು. ನಿಮ್ಮ ಓದುಬರಹ, ಚಿಂತನೆ, ಆಲೋಚನೆ, ಕಿಚ್ಚು, ಹಾದಿ, ಕನಸು ಈ ನಾಡಿನ ಜನಗಳೊಂದಿಗೆ, ಬೆಂಬಲದೊಂದಿಗೆ ರೂಪಗೊಳ್ಳಲಿ, ನಾಡಿಗೆ ಹೊಸ ಹೋರಾಟ ಕಿಚ್ಚು ಹಚ್ಚಬನ್ನಿ.

-ಡಿ.ಎಲ್.ಮಂಜು, ಮಂಗಳೂರು

ಎಚ್1ಎನ್1 ಮತ್ತು ಪೇಡ್ ಮಾಧ್ಯಮ

ಕಳೆದ ವಾರದ ಸಂಚಿಕೆಯಲ್ಲಿ ಎಚ್1ಎನ್1 ಸಂತ್ರ ನಡೆಯುತ್ತಿರುವುದೆಲ್ಲಾ ಸುಳ್ಳು ಎಂದು ಡಾ.ವಾಸು ಎಚ್.ವಿ ಬರೆದಿರುವುದು ನೂರಕ್ಕೆ ನೂರು ಸತ್ಯ. ನಮ್ಮ ದೇಶದ ಎಲ್ಲಾ ಪ್ರಮುಖ ಪತ್ರಿಕೆಗಳ ಮುಖಪುಟದಲ್ಲಿ ವಿಶ್ವ ಕಪ್ ಕ್ರಿಕೆಟಿನ ಸ್ಕೋರಿಗಿಂತ ಹೆಚ್ಚಾಗಿ ಎಚ್1ಎನ್1 (ಹಂದಿ ಜ್ವರ) ರೋಗದಿಂದಾದ ಸಾವಿನ ಸ್ಕೋರೇ ರಾರಾಜಿಸುತ್ತಿದೆ. ಜತೆಗೆ ರಾಜ್ಯ ಮತ್ತು ಕೇಂದ್ರ ಸರಕಾರವೂ ಈ ರೋಗದ ಬಗ್ಗೆಯೇ ವಿಶೇಷ ಕಾಳಜಿ ತೋರಿಸುತ್ತಿವೆ. ಆದರೆ ಇದೇ ಅವಧಿಯಲ್ಲಿ ಸಾಮಾನ್ಯ ಫ್ಲೂ, ಟೈಫಾಯಿಡ್, ಮಲೇರಿಯಾ ಹಾಗೂ ಅಪೌಷ್ಟಿಕತೆ ಇವುಗಳಿಂದ ಸತ್ತವರ ಸಂಖ್ಯೆ ಐವತ್ತು ಪಟ್ಟು ಹೆಚ್ಚಿದ್ದರೂ ಈ ರೋಗಗಳಿಂದ ಸತ್ತವರ ಬಗ್ಗೆ ದಿನ-ದಿನದ ಲೇಟೆಸ್ಟ್ ಸ್ಕೋರು ಪತ್ರಿಕೆಗಳ ಮುಖಪುಟದಲ್ಲಿ ಅಚ್ಚಾಗುವುದು ಬಿಡಿ ಒಳಗಿನ ಪುಟಗಳಲ್ಲೂ ಸ್ಥಳ ಪಡೆಯುತ್ತಿಲ್ಲ ಹಾ... ಲೋಕಸಭೆ ವಿಧಾನಸಭೆಯಲ್ಲೂ ಚರ್ಚೆ ಆಗುತ್ತಿಲ್ಲ, ನಿಜ... ಹಂದಿಜ್ವರ ಅಂತಹ ಮಾರಕ ರೋಗ ಅಲ್ಲ, ಈ ರೋ... ಟೈಫಾಯಿಡ್, ಮಲೇರಿಯಾಕ್ಕಿಂತಲೂ ಕಡಿ... ಅಪಾಯಕಾರಿ. ಆದರೂ ವಿದೇಶಿ ವಸ್ತು... ವ್ಯಾಮೋಹವಿರುವ ಭಾರತೀಯರಿಗೆ ವಿದೇಶಿ ರೋ...



ಬಗ್ಗೆಯೂ ಹೆಚ್ಚು ವ್ಯಾಮೋಹವಿರುವಂತಿದೆ! ... ರೋಗಗಳಿಂದ ಜನರು ತಮ್ಮ ಎದುರೇ ಸತ್ತರೂ ಅ... ಪ್ರಾಮುಖ್ಯತೆ ಕೊಡದ ಪತ್ರಿಕೆ-ಟಿವಿಗಳು ... ಹಂದಿಜ್ವರದಿಂದ ಎಲ್ಲಿಯೋ ದೇಶದ ಮೂಲೆಯ... ಸಾವಿನ ಸುದ್ದಿಗೆ ಪ್ರಾಮುಖ್ಯತೆ ಕೊಡುತ್ತಿರುವುದರ ಹಿ... ಟ್ಯಾಮಿಫ್ಲೂ ಮಾತ್ರ ತಯಾರಿಸುವ ಎರಡು ... ಅಂತರರಾಷ್ಟ್ರೀಯ ಔಷಧ ಕಂಪನಿಗಳಾದ ರೋಶ್ ... ಸಿಪ್ಲಾದ ಮಾರ್ಕೆಟಿಂಗ್ ತಂತ್ರ ಅಡಗಿದೆ ಎಂಬ... ಇತ್ತೀಚಿಗೆ ಮೆಡಿಕಲ್ ಪತ್ರಿಕೆಯೊಂದು ಬಹಿರಂಗಪ... ರುವುದು ನಿಜ.

ಭಾರತದಲ್ಲಿ ಪ್ರಸ್ತುತ ವರ್ಷದಲ್ಲಿ ಕೇವಲ ಎ... ಸಾವಿರಕ್ಕಿಂತಲೂ ಕಡಿಮೆ ಜನ ಎಚ್1ಎನ್1 ಹ... ಜ್ವರದಿಂದ ಸತ್ತರೆ, ಇತರ ಸಾಮಾನ್ಯ ರೋಗಗಳಿಂದ ಇ... ಅವಧಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರು ಸತ್ತಿದ್ದ... ಹಾಗಾದರೆ ಈ ಒಂದು ಲಕ್ಷ ಜನರ ಜೀವಕ್ಕೆ ಬೆಲೆ... ಇಲ್ಲವೇ? ಮುಂಬೈಯಲ್ಲಿ ಹಂದಿಜ್ವರಪೀಡಿತ ... ಗರ್ಭಿಣಿಯು ಮಗುವನ್ನು ಹೆತ್ತಿದ್ದು ಮಾಧ್ಯಮಗಳಲ್ಲಿ ದ... ಸುದ್ದಿಯಾಗುತ್ತದೆ. ಆದರೆ ಮೂರು ತಿಂಗಳಿ... ಕೋಮಾದಲ್ಲಿರುವ ಇನ್ನೊಬ್ಬ ಗರ್ಭಿಣಿ ಹೆಂಗಸಿನ ಸುಸ... ಹೆರಿಗೆ ಅಲ್ಲಿಯ ಡಾಕ್ಟರ್ ಮಾಡಿಸಿದ್ದು ವ... ಸುದ್ದಿಯಾಗುವುದಿಲ್ಲ. ಇದುವೇ ಇಂದಿನ ಧನದಾಹಿ ಪ... ಮಾಧ್ಯಮಗಳ ವೃತ್ತಿಪರತೆ!

ಅತೀ ನಾಚಿಕೆಗೇಡಿನ ವಿಷಯವೆಂದರೆ ನಮಗೆ ಸ್ವಾ... ಸಿಕ್ಕಿ 67 ವರ್ಷವಾದರೂ ಅಪೌಷ್ಟಿಕತೆಯಿಂದ ಹಳ್ಳಿಗಾ... ಬಡವರ ಮಕ್ಕಳು ಸಾಯುತ್ತಿರುವುದನ್ನು ತಪ್ಪಿಸಲು ನ... ಸರಕಾರಗಳಿಗೆ ಇನ್ನೂ ಸಾಧ್ಯ ಆಗದಿರುವು... ಹಂದಿಜ್ವರದಿಂದ ಸತ್ತವರಿಗಿಂತ ಹತ್ತು ಪಟ್ಟು ಹೆಚ್ಚು ... ಮಕ್ಕಳು ಅಪೌಷ್ಟಿಕತೆಯಿಂದ ಸತ್ತಿದ್ದಾರೆ. ಆದ... ಹೃದಯಹೀನ ಸರಕಾರ ಹಾಗೂ ಸಮಯಸಾಧಕ ಮಾ... ಈ ಸುದ್ದಿಯನ್ನು ಹತ್ತಿಕ್ಕಿ ಹಂದಿಜ್ವರಕ್ಕೆ ಸಾಧಾರಣ ಔ... ತಯಾರಿಸುವ ಕಂಪನಿಗಳ ಮಾರ್ಕೆಟಿಂಗ್ ಮ್ಯಾನೇಜರುಗ... ವರ್ತಿಸುತ್ತಿರುವುದು ಅತ್ಯಂತ ದುರದೃಷ್ಟಕರ. ಮುಂದೊ... ಯಾವುದಾದರೂ ದೊಡ್ಡ ಬಹುರಾಷ್ಟ್ರೀಯ ಕಂಪನಿ ಅ... ಇಸ್ಕಾನ್ ಅಂಗನವಾಡಿಗಳ ಮೂಲಕ ಮಕ್ಕಳಿಗೆ ಒದಗಿ... ಪೌಷ್ಟಿಕ ಆಹಾರ ತಯಾರಿಕೆಗೆ ಅನುವಾದರೆ ಆಗ ನ... ಮಾಧ್ಯಮಗಳು ಅಪೌಷ್ಟಿಕತೆಯಿಂದ ನಮ್ಮ ದೇಶ... ದಿನಾಲೂ ಎಷ್ಟು ಮಕ್ಕಳು ಸಾಯುತ್ತಿವೆ ಹಾಗೂ ... ಕಂಪನಿಯ ಹೊಸ ಪೌಷ್ಟಿಕ ಆಹಾರ ಸರಕಾರ ಖರೀ... ಅಂಗನವಾಡಿಗಳಿಗೆ ಪೂರೈಸಿದರೆ ಬದುಕಿ ಉಳಿಯಬ... ದಾದ ಬಡ ಮಕ್ಕಳ ಸಂಖ್ಯೆ ಎಷ್ಟು ಎಂಬ ಬಗ್ಗೆ ದ... ದೊಡ್ಡ ಲೇಖನ ಪ್ರಕಟಿಸಬಹುದೇನೋ.

-ಪ್ರವೀಣ್ ಎಸ್ ಶೆಟ್ಟಿ, ಮಂಗಳ...






ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿ... ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ... ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹ...

...ರಾವತ'ದಲ್ಲಿ ಅರ್ಜುನನ ಆರ್ಭಟ

...ಮ್ಮ ಸ್ಯಾಂಡಲ್‌ವುಡ್‌ನಲ್ಲಿ ಒಂದೋ ಎರಡೋ ಹಿಟ್ ಚಿತ್ರ ನೀಡಿದ ...ೀ ಕಟುರು ಅಮಲನ್ನು ನೆತ್ತಿಗೇರಿಸಿಕೊಂಡು ಸಿಕ್ಕಾಪಟ್ಟೆ ಧಿಮಾಕನ್ನು ...ಸುತ್ತಾರೆ. ಆದರೆ ಈಗ ನಿರ್ದೇಶಕನೊಬ್ಬ ಕೂಡ ಯಶಸ್ಸಿನ ...ನ್ನೇರಿಸಿಕೊಂಡು ಮೆರೆಯುತ್ತಿದ್ದಾನೆ. ಯಾರು ...ರ್ದೇಶಕ?



...ಬಾರಿ' ಮತ್ತು 'ಅದ್ದೂರಿ' ತರಹದ ಹಿಟ್ ...ನ್ನು ಮತ್ತು ಕಳೆದ ವಾರ ತೆರೆ ಕಂಡ ...ಎಂಬ ಆವಾರೇಜ್ ಚಿತ್ರವನ್ನು ನಿರ್ದೇಶಿಸಿದ ...ರ್ಜುನ್.


...ಷಯ ಏನಪ್ಪ ಅಂದ್ರೆ ಚಾಲೆಂಜಿಂಗ್ ಸ್ಟಾರ್ ... ಜೊತೆ 'ಐರಾವತ' ಸಿನಿಮಾ ಮಾಡುತ್ತಿರುವ ...ನ್ ಅವರ ಇತ್ತೀಚಿನ ವರ್ತನೆ ...ಗಿದೆಯಂತೆ. ಅರ್ಜುನ್ ದುರಹಂಕಾರಿ ಆಗಿದ್ದಾರಂತೆ. ಹೀಗಂತ ನಾವು ...ಲ್ಲ. ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರ ಅಧಿಕೃತ ಅಭಿಮಾನಿ ...'ಡಿ' ಕಂಪನಿ, ಫೇಸ್‌ಬುಕ್‌ನಲ್ಲಿ ಈ ಆರೋಪಗಳನ್ನು ಮಾಡಿದೆ.

...ಮಾನ್ಯವಾಗಿ ಶೂಟಿಂಗ್ ತಡವಾಗುವುದಕ್ಕೆ ನಿರ್ಮಾಪಕರ ಜೇಬು ...ಖಾಗಿರುವುದು; ಇಲ್ಲಾಂದ್ರೆ ಹೀರೋ ಕಾಲ್‌ಶೀಟ್ ಸಮಸ್ಯೆ ಇರುವುದು. ...ಕೋಟಿ ಕೋಟಿ ಖರ್ಚು ಮಾಡುವ ನಿರ್ಮಾಪಕರು ಇದ್ದರೂ, ಒಳ್ಳೆ ... ಇದ್ದರೂ 'ಐರಾವತ' ಚಿತ್ರೀಕರಣ ತಡವಾಗುತ್ತಿರುವುದಕ್ಕೆ 'ಡೈರೆಕ್ಟರ್ ಅವರ ಸಿಕ್ ಆಟಿಟ್ಯೂಡ್' ಕಾರಣ" ಅಂತ 'ಡಿ' ಕಂಪನಿಯವರು ಹೇಳಿದ್ದಾರೆ.

"ಒಂದು ಕೋಟಿ ಸಂಭಾವನೆ ಪಡೆದರೂ, ಚಿತ್ರವನ್ನ ಸಮಯಕ್ಕೆ ಸರಿಯಾಗಿ ಮುಗಿಸುವ ಜವಾಬ್ದಾರಿ ನಿರ್ದೇಶಕರಿಗಿಲ್ಲ"; "'ಐರಾವತ' ಚಿತ್ರಕ್ಕಾಗಿ ಇಂದಿನವರೆಗೂ ದರ್ಶನ್ ಬರೋಬ್ಬರಿ ಒಂಬತ್ತು ತಿಂಗಳ ಕಾಲ ಕಾಲ್‌ಶೀಟ್ ನೀಡಿದ್ದಾರೆ. ಆದರೆ ಈ ಒಂಬತ್ತು ತಿಂಗಳಲ್ಲಿ ನಿರ್ದೇಶಕರು ದರ್ಶನ್ ಅವರಿಗೆ ಕೆಲಸ ನೀಡಿದ್ದು ಬರೀ 90 ದಿನಗಳು ಮಾತ್ರ." "ಇತ್ತೀಚೆಗೆ ಶೂಟಿಂಗ್ ನಿಮಿತ್ತ ಮೇಕಪ್ ಧರಿಸಿ ದರ್ಶನ್ ರೆಡಿಯಾಗಿದ್ದರೂ ಒಂದೇ ಒಂದು ಶಾಟ್ ಅನ್ನೂ ಅರ್ಜುನ್ ತೆಗೆಯಲಿಲ್ಲ. 15 ವರ್ಷಗಳ ಚಿತ್ರ ಜೀವನದಲ್ಲಿ ದರ್ಶನ್ ಮೇಕಪ್ ಧರಿಸಿ ಒಂದು ಶಾಟ್ ಕೂಡ ತೆಗೆಯದೇ ಇರುವುದು ಇದೇ ಮೊದಲ ಬಾರಿ. ಇದರಿಂದ ಬೇಸರಗೊಂಡ ದರ್ಶನ್ ಮನೆಗೆ ವಾಪಸ್ಸು ತೆರಳಿದರು" ಅಂತ 'ಡಿ' ಕಂಪನಿ ಅರ್ಜುನ್ ವಿರುದ್ಧ ಚಾಟಿ ಬೀಸಿದೆ.

ನಿರ್ದೇಶಕ ಅರ್ಜುನ್ ಬಗ್ಗೆ ಇಂತಹ ಆರೋಪಗಳು ಕೇಳಿಬರುತ್ತಿರುವುದು ಇದು ಮೊದಲೇನಲ್ಲ. 'ಐರಾವತ' ಸಿನಿಮಾ ಸೆಟ್ಟೇರಿದಾಗಿನಿಂದಲೂ ಅರ್ಜುನ್‌ರ ಅಹಂ ಬಗ್ಗೆ ಗಾಂಧಿನಗರದಲ್ಲಿ ಗುಲ್ಲೆದ್ದಿದೆ. "ಅಲ್ಪನಿಗೆ ಐಶ್ವರ್ಯ ಬಂದ್ರೆ, ಅರ್ಧ ರಾತ್ರೀಲಿ ಕೊಡೆ ಹಿಡಿದರಂತೆ...." ಎಂಬ ಗಾದೆ ಮಾತನ್ನ ಇಡೀ ಗಾಂಧಿನಗರ ಅರ್ಜುನ್ ಬಗ್ಗೆ ಮಾತಾಡುತ್ತಿದೆ. ■

ಮತ್ತೆ ನಿರ್ದೇಶನದತ್ತ 'ಜೋಗಿ' ಪ್ರೇಮ್




ನಾಯಕನಟನಾಗಿ ಸಾಲು ಸಾಲು ಫ್ಲಾಪ್‌ಗಳನ್ನು ಕೊಟ್ಟ 'ಜೋಗಿ' ಪ್ರೇಮ್ ಮತ್ತೆ ನಿರ್ದೇಶನದತ್ತ ಮುಖ ಮಾಡಿದ್ದಾರೆ. ತಮ್ಮ ನಟನೆಯನ್ನು ಕನ್ನಡ ಜನತೆ ಒಪ್ಪಿಕೊಳ್ಳದ ಕಾರಣ ನಿರ್ದೇಶನವೇ ತನಗೆ ಸೂಕ್ತ ಅನ್ನಿಸಿ ಪ್ರೇಮ್ ಹೊಸ ಚಿತ್ರದ ತಯಾರಿಯಲ್ಲಿದ್ದಾರೆ. ಈ ಚಿತ್ರದಲ್ಲಿ ವಿನಯ್ ರಾಜ್‌ಕುಮಾರ್ ನಾಯಕನಾಗಿ ಅಭಿನಯಿಸಲಿದ್ದು ಪಾರ್ವತಮ್ಮ ರಾಜ್‌ಕುಮಾರ್ ಇದನ್ನು ನಿರ್ಮಿಸಲಿದ್ದಾರೆ.

'ಸಿದ್ದಾರ್ಥ' ನಂತರ ವಿನಯ್ ರಾಜ್‌ಕುಮಾರ್ ಅಭಿನಯದ ಮುಂದಿನ ಚಿತ್ರದ ಬಗ್ಗೆ ಎಲ್ಲರಲ್ಲೂ ಕುತೂಹಲವಿತ್ತು. ವಿನಯ್ ಅವರ ಹೊಸ ಚಿತ್ರವನ್ನು ಯಾರು ನಿರ್ದೇಶಿಸಲಿದ್ದಾರೆ ಎಂಬ ಪ್ರಶ್ನೆಗೆ ಈಗ ತೆರೆ ಬಿದ್ದಿದೆ. ಏಪ್ರಿಲ್ 24 ರಂದು ಡಾ.ರಾಜ್‌ಕುಮಾರ್ ಅವರ ಹುಟ್ಟುಹಬ್ಬದಂದು ಚಿತ್ರದ ಹೆಸರನ್ನು ಪ್ರಕಟಿಸಲು ರಾಘವೇಂದ್ರ ರಾಜ್‌ಕುಮಾರ್ ಆಲೋಚಿಸುತ್ತಿದ್ದಾರಂತೆ. ಒಟ್ಟಿನಲ್ಲಿ ನಾಯಕನಾಗಿ ಸೋತ ಪ್ರೇಮ್, ನಿರ್ದೇಶಕನಾಗಿ ಮತ್ತೆ ಗೆಲ್ಲುತ್ತಾರೋ ಕಾದು ನೋಡಬೇಕು. ■

...ೋಲ್ಡನ್ ಸ್ಟಾರ್‌ನ ಫೇಕ್ ಫೇಸ್‌ಬುಕ್ ಅಕೌಂಟ್

...ತ್ತೀಚೆಗೆ ನಮ್ಮ ನಟನಟಿಯರು ಫೇಸ್‌ಬುಕ್ ಮತ್ತು ಟ್ವಿಟರ್‌ಗಳಲ್ಲಿ ...ರಾಗಿದ್ದಾರೆ. ಇದನ್ನು ಅರಿತ ಕೆಲವು ಕಿಡಿಗೇಡಿಗಳು ನಾಯಕ ನಟ ...ರ ಹೆಸರಿನಲ್ಲಿ ಫೇಕ್ ಅಕೌಂಟ್ ಸೃಷ್ಟಿಸಿ ಅಭಿಮಾನಿಗಳಿಗೆ ಮೋಸ ...ತ್ತಿದ್ದಾರೆ. ಇದಕ್ಕೆ ಲೇಟೆಸ್ಟ್ ಉದಾಹರಣೆ ಇಲ್ಲಿದೆ.



...ತ್ತೀಚೆಗೆ ಯಾರೋ ಕಿಡಿಗೇಡಿಗಳು ಗಣೇಶ್ ಹೆಸರಲ್ಲಿ ಫೇಸ್‌ಬುಕ್‌ನಲ್ಲಿ ...ತೆರೆದು ಒಂದು ಬೇಡಿಕೆ ಇಟ್ಟಿದ್ದಾರೆ. ಆ ಬೇಡಿಕೆ ಹೀಗಿದೆ: "ಈ ... ಹಾಕುವುದಕ್ಕೆ ನಾನು ಮೊದಲು ಅಂಜಿಕೆ ವ್ಯಕ್ತಪಡಿಸಿದ್ದೆ. ಆದರೆ ...ಸೆಲೆಬ್ರಿಟಿ ಆದ ಕಾರಣದಿಂದ, ನನ್ನ ಮಾತಿಗೆ ಜನ ಓಗೊಟ್ಟು ಸಹಾಯ ...ವುದಕ್ಕೆ ಮುಂದೆ ಬರುತ್ತಾರೆ ಅಂತ ನನ್ನ ಸ್ನೇಹಿತ ವಕೀಲ ಕಿರಣ್ ... ಸಲಹೆಯ ಮೇರೆಗೆ ಈ ಕೋರಿಕೆಯನ್ನ ನಿಮ್ಮ ಮುಂದೆ ಇಡುತ್ತಿದ್ದೇನೆ. ... ಸಹಾಯ ಅಗತ್ಯವಿರುವ ಬಡಪಾಯಿ ಒಬ್ಬರಿಗೆ ನಿಮ್ಮೆಲ್ಲರ ಸಹಾಯ ... ದಯಮಾಡಿ, ಪ್ರತಿಯೊಬ್ಬರು 1,000 ರೂಪಾಯಿಯನ್ನ ದೇಣಿಗೆ ನೀಡಿ..."


ಚಂದ್ರಶೇಖರ್.ಜಿ.ಆರ್ ಎಂಬ ಹೆಸರು, ಬ್ಯಾಂಕ್ ಅಕೌಂಟ್ ನಂಬರ್ ಸೇರಿದಂತೆ ಇತರೆ ವಿವರಗಳನ್ನ ನೀಡಿ, ಹಲವಾರು ಬಾರಿ ಗಣೇಶ್ ಹೆಸರಲ್ಲಿ ಪೋಸ್ಟ್ ಮಾಡ್ತಿದ್ದಾರೆ.

ಇದು ಗೊತ್ತಾಗಿದ್ದೇ ತಡ ಗಣೇಶ್ ಎಚ್ಚೆತ್ತುಕೊಂಡಿದ್ದಾರೆ. "ಇದು ನಾನಲ್ಲ, ಚಂದ್ರಶೇಖರ್ ಯಾರು ಅಂತ ನನಗೆ ಗೊತ್ತೇ ಇಲ್ಲ, ಕಿರಣ್ ಅಂತ ಯಾರೂ ನನಗೆ ಸ್ನೇಹಿತರಿಲ್ಲ, ಇದು ಫೇಕ್ ಅಕೌಂಟ್. ಗಣೇಶ್ ಗಣೇಶ್ ಅನ್ನುವ ಅಕೌಂಟ್ ನನ್ನದಲ್ಲ" ಎಂದು ಗಣೇಶ್ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಜೊತೆಗೆ ಸೈಬರ್ ಕ್ರೈಂ ಬ್ರಾಂಚ್‌ಗೂ ದೂರು ನೀಡಿದ್ದಾರೆ.

ದೂರು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಸೆಲೆಬ್ರಿಟಿಗಳ ಹೆಸರಲ್ಲಿ ಬೇನಾಮಿಗಳು ಇತರರಿಗೆ ಪಂಗನಾಮ ಹಾಕೋದು ಇದೇ ಮೊದಲಲ್ಲ, ಇಂತಹ ಹಲವಾರು ಪ್ರಕರಣಗಳು ಆಗಾಗ ಸದ್ದು ಮಾಡುತ್ತಲೇ ಇರುತ್ತವೆ. ಇದನ್ನ ತಿಳಿದು ಅಭಿಮಾನಿಗಳು ಹುಷಾರಾದರೆ ಒಳಿತು. ಇಲ್ಲಾಂದ್ರೆ, ಎರಡು ವೈಟ್, ಒಂದು ರೆಡ್ ಗ್ಯಾರಂಟಿ..! ■

...ಲಿತ ಕೂಲಿಗಳ ಶಿರಚ್ಛೇದ: ದಿಕ್ಕು ತಪ್ಪಿಸುವ ಯತ್ನ?

...ಡಿ.ಕೆ.ರವಿ ಸಾವಿನ ಪ್ರಕರಣದ ನಡುವೆಯೇ ಗಡಿ ...ಚಾಮರಾಜನಗರದಲ್ಲಿ ಬರ್ಬರ ಕೃತ್ಯವೊಂದು ನಡೆದು ...ದೆ. ಕಳೆದ ಗುರುವಾರ ಮಾರ್ಚ್ 19, ಚಾಮ ...ಗರ ತಾಲ್ಲೂಕಿನ ಸಂತೆಮರಹಳ್ಳಿಯಲ್ಲಿ ತೋಟ ...ಕ್ಕೆ ಕೂಲಿಗೆಂದು ಹೋಗಿದ್ದ ದಲಿತ ಸಮುದಾಯಕ್ಕೆ ... ಇಬ್ಬರು ಕೂಲಿಗಳನ್ನು ಆ ತೋಟದ ಮಾಲೀಕನೇ ...ದಗೈದಿದ್ದಾನೆ. ನಿಜಕ್ಕೂ ಈ ಘಟನೆ ಹೈಟೆಕ್ ...ವಲ್ಲೂ ದಲಿತರ ಸ್ಥಿತಿ ಯಾವ ಪರಿ ದಾರುಣವಾಗಿದೆ ...ದನ್ನು ಜಗಜ್ಜಾಹೀರುಗೊಳಿಸಿದೆ; ಹಾಗೆಯೇ ಕೊಂದ ...ವರ್ಣೀಯನ ಕ್ರೌರ್ಯವನ್ನೂ ಕೂಡ.



...ಟನೆಯ ಭೀಭತ್ಸತೆಯನ್ನೇ ದಾಖಲಿಸುವುದಾದರೆ ...ಾದ ಸಂತೆಮರಹಳ್ಳಿ ಸಮೀಪದ ಕಾವುದವಾಡಿ ...ನ ನಂಜಯ್ಯ (50) ಬಿನ್ ಮರಸಯ್ಯ, ದೇಶವಳ್ಳಿ ...ನ ಕೃಷ್ಣಯ್ಯ (60) ಬಿನ್ ನಂಜಯ್ಯ ಅಂದು ಅದೇ ...ಮರಹಳ್ಳಿ ಸಮೀಪದ ದೇಶವಳ್ಳಿ ಗ್ರಾಮದ ಆರೋಪಿ ...ದೇವ (38) ಬಿನ್ ಶಿವಪ್ಪನವರ ಬಾಳೆತೋಟಕ್ಕೆ ...ೆಂದು ಆಗಮಿಸಿದ್ದಾರೆ. ಕೂಲಿಗೆಂದು ಇವರನ್ನು ...ಸಿದ್ದು ಆರೋಪಿಯ ಅಣ್ಣ ನಾಗಪ್ಪ. ನಾಗಪ್ಪ ...ಕೂಲಿಗಳಿಗೆಂದು ಟೀ ತರಲು ಹೋಗಿದ್ದಾಗ ...ದೇವ ಜಮೀನಿಗೆ ಆಗಮಿಸಿದ್ದಾನೆ. ಹಾಗೆಯೇ ದಲಿತ ...ಗಳಿಗೆ ಆತ ಇಂತಿಂಥ ಕೆಲಸ ಮಾಡಿ ಎಂದು ... ಮಾಡಿದ್ದಾನೆ. ಪರಿಣಾಮ ಮಾತಿಗೆ ಮಾತು ...ಆರೋಪಿ ಮಹದೇವ ತನ್ನ ಕೈಯಲ್ಲಿದ್ದ ಮಚ್ಚಿನಿಂದ ...ಕೂಲಿಯವರಿಗೆ ಬಲವಾಗಿ ಹೊಡೆದಿದ್ದಾನೆ. ಆತನನ್ನು ...ಡು ಬಂದ ಮತ್ತೊಬ್ಬನ ಮೇಲೂ ಮಚ್ಚು ಬೀಸಿದ್ದಾನೆ. ...ನ ಪ್ರಹಾರ ಮಚ್ಚು ಹರಿತವಿದ್ದರಿಂದ ಒಮ್ಮೆಯೇ ...ಬ್ಬರು ದಲಿತ ಕೂಲಿಗಳ ಶಿರಚ್ಛೇದನವಾಗಿದೆ.

...ರಂತವೆಂದರೆ ಈ ಕಗ್ಗೊಲೆಯನ್ನು ದಿಕ್ಕುತಪ್ಪಿಸುವ ... ನಡೆದಿರುವುದು. ಹೇಗೆಂದರೆ ಸವರ್ಣೀಯ ...ಮಾಲೀಕ, ಸೀರಿಯ ಕೊಲೆಗಾರ ಮಹದೇವನನ್ನು ...ರ ಅಸ್ವಸ್ಥನೆಂದು ಬಿಂಬಿಸಲಾಗುತ್ತಿದೆ! ಆ ಮೂಲಕ ... ರಕ್ಷಿಸುವ, ಆತನಿಗೆ ವಿಧಿಸಬಹುದಾದ ಶಿಕ್ಷೆಯನ್ನು ... ಕುತಂತ್ರ ಎಗ್ಗಿಲ್ಲದೆ ನಡೆದಿದೆ. ಯಾವ ಪರಿ ...ಮಾರನೇ ದಿನದ ಸ್ಥಳೀಯ ಪತ್ರಿಕೆಗಳಲ್ಲಿ 'ಆರೋಪಿ ... ಅಸ್ವಸ್ಥ?' ಎಂಬ ವರದಿಗಳು ಪ್ರಕಟವಾಗಿವೆ. ... ಸಮೂಹ ಮಾಧ್ಯಮಗಳಲ್ಲಿ ಆರೋಪಿ ಮಹದೇವನಿಗೆ 'ಸ್ಪ್ಲಿಟ್ ಪರ್ಸನಾಲಿಟಿ' ಇತ್ತು, 'ಬೈಪೋಲಾರ್ ಡಿಸೀಸ್' ಇತ್ತು, 'ಅನ್ನಿಯನ್' ಚಿತ್ರದ ನಾಯಕನಿಗೆ ಇದ್ದಂತಹ ಕಾಯಿಲೆ ಇತ್ತು ಎಂಬ ವ್ಯವಸ್ಥಿತ ಪ್ರಚಾರ ನಡೆದಿದೆ! ಆದರೆ ವಾಸ್ತವ? ಆತ ಮಾಡಿದ್ದ ದಲಿತರ ಕಗ್ಗೊಲೆ? ದಲಿತ ಕಾರ್ಮಿಕರ ಆ ರುಂಡಗಳನ್ನು ಕತ್ತರಿಸಿ ಅವುಗಳನ್ನು ಪ್ಲಾಸ್ಟಿಕ್ ಚೀಲವೊಂದರಲ್ಲಿಟ್ಟು ರುಂಡವೊಂದೆಡೆ ಮುಂಡವೊಂದೆಡೆ ಎಂಬಂತೆ ಅವುಗಳನ್ನು ಅಡಗಿಸಿಟ್ಟ ಆತನ ಕ್ರೂರತನ? ಅದಕ್ಕೆ ಬಲಿಯಾದ ದಲಿತ ಕೂಲಿಗಳ ದುರಂತ ಅಂತ್ಯ? ಆ ಕುಟುಂಬಗಳ ಆಕ್ರಂದನ?

ಸದರಿ ದಲಿತ ಕೂಲಿಗಳ ಈ ಹತ್ಯೆ ಕುರಿತ ನಿರ್ಲಕ್ಷ್ಯವನ್ನು, ಐಎಎಸ್ ಅಧಿಕಾರಿ ಡಿ.ಕೆ.ರವಿಯವರ ಮರಣಕ್ಕೆ ಸಿಕ್ಕ ಪ್ರಚಾರವನ್ನು ಹೋಲಿಸಿ ನೋಡುವುದು ಅಗತ್ಯ. ಡಿ.ಕೆ.ರವಿ ಮೇಲ್ವರ್ಗದವರಾಗಿದ್ದರಿಂದ ಅವರ ಸಾವಿಗೆ ಇಡೀ ವ್ಯವಸ್ಥೆಯೇ ದನಿ ಎತ್ತರಿಸುತ್ತದೆ. ಆದರೆ ದಲಿತರ ಸಾವು? ದಲಿತ ಕೂಲಿಗಳಿಬ್ಬರ ದಾರುಣ ಹತ್ಯೆ? ವ್ಯವಸ್ಥೆ ಅವರ ಪರ ದನಿ ಇರಲಿ, ಕಾನೂನು ಮತ್ತು ನ್ಯಾಯವೇ ಅವರ ಪರ ಇರದಂತೆ ನೋಡಿಕೊಳ್ಳಲೆತ್ನಿಸುತ್ತದೆ!

ಇದನ್ನು ತಮಾಷೆಗೆ ಹೇಳುತ್ತಿಲ್ಲ. ಹದಿನೈದು ವರ್ಷಗಳ ಹಿಂದೆ (2000) ಇದೇ ಮಾರ್ಚ್ ತಿಂಗಳ ಸಮಯದಲ್ಲಿ ಕೋಲಾರ ಜಿಲ್ಲೆಯ ಕಂಬಾಲಪಲ್ಲಿ ಎಂಬ ಗ್ರಾಮದಲ್ಲಿ ಸಾರ್ವಜನಿಕರ ಸಮ್ಮುಖದಲ್ಲೇ ಹಾಡುಹಗಲು ಏಳು ಜನ ದಲಿತರನ್ನು ಮನೆಯೊಂದರಲ್ಲಿ ಕೂಡಿಹಾಕಿ ಭಸ್ಮ ಮಾಡಲಾಯಿತು. ದುರಂತವೆಂದರೆ ಕಳೆದ ವರ್ಷ ಸದರಿ ಕಂಬಾಲಪಲ್ಲಿಯ ಆರೋಪಿಗಳು ಹೈಕೋರ್ಟ್ ತೀರ್ಪೊಂದರಲ್ಲಿ ಸಾಕ್ಷ್ಯಾಧಾರಗಳ ಕೊರತೆಯಿಂದ ಆರೋಪಮುಕ್ತರಾಗಿ ಹೊರಬಂದಿದ್ದಾರೆ.

ಇನ್ನು ಬಿಹಾರದ ಲಕ್ಷ್ಮಣ್ ಪುರ್‌ಬಾಥೆ ಘಟನೆ ಇಲ್ಲಿ ದಾಖಲಿಸುವುದಾದರೆ 1997ರ ಡಿಸೆಂಬರ್ 1ರ ಮಧ್ಯರಾತ್ರಿ 11 ಗಂಟೆಯಲ್ಲಿ ರಣವೀರ ಸೇನೆ ಎಂಬ ಮೇಲ್ಜಾತಿ ಭೂಮಿಹಾರ್ ಸಮುದಾಯದ ದೌರ್ಜನ್ಯಕೋರ ಗುಂಪು 27 ಮಹಿಳೆಯರು, 16 ಮಕ್ಕಳನ್ನೂ ಒಳಗೊಂಡಂತೆ ಲಕ್ಷ್ಮಣ್‌ಪುರ್‌ಬಾಥೆ ಗ್ರಾಮದ 58 ದಲಿತರನ್ನು ಸಾಮೂಹಿಕವಾಗಿ ಕೊಂದಿತ್ತು. ಅಂದಹಾಗೆ ಅಂತಹ ಗುಂಪುಕೊಲೆಯಲ್ಲಿ ಒಂದು ವರ್ಷದ ಹಾಲುಗಲ್ಲದ ಕಂದನೂ ಇತ್ತೆಂದರೆ ಹಂತಕರಿಗೆ ನೀಡಬಹುದಾದ ಶಿಕ್ಷೆಯ ಪ್ರಮಾಣವನ್ನು ಎಂಥವರಾದರೂ ಊಹಿಸಬಹುದು. ದುರಂತವೆಂದರೆ 2013 ಅಕ್ಟೋಬರ್ 9ರಂದು ಪಾಟ್ನಾ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನಲ್ಲಿ ಲಕ್ಷ್ಮಣ್‌ಪುರ್ ಬಾಥೆ ಹತ್ಯಾಕಾಂಡದ ಎಲ್ಲಾ ಆರೋಪಿಗಳನ್ನು ದೋಷಮುಕ್ತಗೊಳಿಸಿತು! ಇಲ್ಲಿಯೂ ಅಷ್ಟೆ, ನ್ಯಾಯಾಲಯ ಹೇಳಿದ್ದು ಸಾಕ್ಷ್ಯಾಧಾರಗಳ ಕೊರತೆ ಎಂದು.

ಇನ್ನು ಸ್ವತಂತ್ರ ಭಾರತದಲ್ಲೇ ಅತಿ ಭಯಂಕರ ಎನಿಸುವ ಮಹಾರಾಷ್ಟ್ರದ ಖೈರ್ಲಾಂಜಿ ಘಟನೆಯೂ ಇಲ್ಲಿ ಉಲ್ಲೇಖನೀಯ. 2006 ಸೆಪ್ಟೆಂಬರ್ 29 ರಂದು ಖೈರ್ಲಾಂಜಿಯಲ್ಲಿ ದಲಿತ ಕುಟುಂಬದ ನಾಲ್ವರನ್ನು ಊರ ತುಂಬಾ ಅಟ್ಟಾಡಿಸಿದ ಸವರ್ಣೀಯರ ಗುಂಪು ಆ ನಾಲ್ವರನ್ನು ಬಹಿರಂಗವಾಗಿ ಕೊಲೆಗೈದಿತ್ತು. ಹಾಗೇ ಕೊಲೆಗೂ ಮುನ್ನ ಹತ ಆ ಕುಟುಂಬದ ಪ್ರಿಯಾಂಕ ಭೂತ್‌ಮಾಂಗೆ ಎಂಬ ಹೆಣ್ಣುಮಗಳ ಮೇಲೆ ಸಾಮೂಹಿಕ ಅತ್ಯಾಚಾರ ಕೂಡ ನಡೆದಿತ್ತು. ದುರಂತವೆಂದರೆ ಇಲ್ಲಿಯೂ ಇಷ್ಟೆ. ಕೆಳ ಹಂತದ ನ್ಯಾಯಾಲಯವೊಂದು ಆರೋಪಿಗಳಿಗೆ ಮರಣದಂಡನೆ ವಿಧಿಸಿದ್ದರೆ ನಾಗಪುರದ ಹೈಕೋರ್ಟ್ ಪೀಠ 2010 ಜುಲೈ 12ರಂದು ತೀರ್ಪು ನೀಡಿ ಖೈರ್ಲಾಂಜಿ ಆರೋಪಿಗಳ ಮರಣದಂಡನೆಯನ್ನು ರದ್ದುಗೊಳಿಸಿ ಶಿಕ್ಷೆಯನ್ನು ಜೀವಾವಧಿಗೊಳಿಸಿತು. ಒಟ್ಟಾರೆ ಹೇಳುವುದಾದರೆ ದಲಿತರ ಹತ್ಯಾಕಾಂಡದ ಬಹುತೇಕ ಪ್ರಕರಣಗಳಲ್ಲಿ ದಲಿತರಿಗೆ ನ್ಯಾಯ ದೊರಕಿಲ್ಲ.


ಸಂತೇಮರಹಳ್ಳಿಯ ದಲಿತರ ಶಿರಚ್ಛೇದನ ಪ್ರಕರಣದಲ್ಲಿ ಆರೋಪಿಗೆ ಮಾನಸಿಕ ಅಸ್ವಸ್ಥ ಪಟ್ಟಕಟ್ಟುವ ಹುನ್ನಾರ ನಡೆದಿದ್ದು ಇದೂ ಕೂಡ ಕಂಬಾಲಪಲ್ಲಿಯ ಹಾಗೆ ಹಳ್ಳ ಹಿಡಿಯುವ ಸಾಧ್ಯತೆಯಿದೆ. ಅಂದಹಾಗೆ ಘಟನೆ ನಡೆದ ಒಂದೆರಡು ದಿನಗಳ ನಂತರ ಕೇಳಿಬರುತ್ತಿರುವ ಮಾತೆಂದರೆ ಇದೊಂದು ನರಬಲಿ ಆಗಿರುವ ಸಾಧ್ಯತೆ ಇದೆ ಎಂದು! ಯಾಕೆಂದರೆ ಘಟನಾ ಸ್ಥಳದ ಪಕ್ಕದಲ್ಲೇ ಹೊಸದೊಂದು ಕಲ್ಯಾಣಮಂಟಪ ನಿರ್ಮಾಣವಾಗಿದೆ; ಅದಕ್ಕಾಗಿ ಈ ಬಲಿ ನಡೆದಿದೆ ಎಂದು. ಹಾಗೆಯೇ ಹತರಾದ ಇಬ್ಬರನ್ನು ಓರ್ವನೇ ಕೊಂದಿದ್ದಾನೆ ಎಂಬುದನ್ನೂ ನಂಬುವುದು ಕಷ್ಟ ಮತ್ತು ಆರೋಪಿ ಮತ್ತು ಹತರಾದ ಕೂಲಿಗಳ ನಡುವೆ ಹಳೆಯ ದ್ವೇಷವಾಗಲೀ ಮತ್ತೊಂದಾಗಲೀ ಇರಲಿಲ್ಲ!

ಖಂಡಿತ ಇದೆಲ್ಲದರ ಹಿಂದೆ ಒಂದು ತಂಡ ಮತ್ತು ಒಂದು ಸಂಚು ಇದ್ದೇ ಇರುವಂತೆ ಕಾಣುತ್ತದೆ. ಆ ಕಾರಣಕ್ಕೆ ಸರ್ಕಾರ ಸಂತೇಮರಹಳ್ಳಿಯಲ್ಲಿ ನಡೆದಿರುವ ದಲಿತ ಕೂಲಿಗಳಿಬ್ಬರ ಅಮಾನುಷ ಹತ್ಯೆ ತನಿಖೆಯನ್ನು ಸಿಐಡಿಗೆ ವಹಿಸಿ ಘಟನೆಯ ಹಿನ್ನೆಲೆಯನ್ನು ಪತ್ತೆ ಹಚ್ಚಿ ಎಲ್ಲಾ ಸಂಚುಕೋರರನ್ನು ಬಂಧಿಸಲಿ. ತನ್ಮೂಲಕ ಅಮಾನುಷ ಹತ್ಯೆಗೆ ಬಲಿಯಾದ ದಲಿತರಿಗೆ ನ್ಯಾಯ ದೊರಕಿಸಿಕೊಡಲಿ.

■ ರಘೋತ್ತಮ ಹೊ.ಬ

Registered No.RNP/KA/BGS/2036/2014-16 Posted at : PSO, Mysore Road, Friday R B P LANKESH, Kannada Weekly Price Rs. 15/- 08-04-2015 RNI No. KARKAN2005/1464

ನಟ ಶಶಿ ಕಪೂರ್‌ಗೆ ಫಾಲ್ಕೆ ಪ್ರಶಸ್ತಿ



ಬಾಲಿವುಡ್‌ನ ಹಿರಿಯಾ ನಟ ಶಶಿ ಕಪೂರ್ ಅವರಿಗೆ ಕೇಂದ್ರ ಸರ್ಕಾರ 2014ನೇ ಸಾಲಿನ ಭಾರತೀಯ ಚಿತ್ರರಂಗದ ಅತ್ಯುನ್ನತ ಗೌರವ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಿಸಿದೆ. ಕಳೆದ ನಾಲ್ಕು ದಶಕಗಳಿಂದ ಪ್ರೇಕ್ಷಕರನ್ನು ರಂಜಿಸುತ್ತಾ ಬಂದಿರುವ ಶಶಿ ಕಪೂರ್ ಭಾರತೀಯ ಚಿತ್ರರಂಗದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ್ದಾರೆ.

ಕಪೂರ್ ಕುಟುಂಬದಲ್ಲಿ ಈ ಪ್ರಶಸ್ತಿಗೆ ಪಾತ್ರರಾದವರಲ್ಲಿ ಶಶಿ ಕಪೂರ್ ಮೂರನೆಯವರು. ತಂದೆ ಪೃಥ್ವಿರಾಜ್ ಕಪೂರ್ ಮತ್ತು ಸೋದರ ರಾಜ್ ಕಪೂರ್ ಅವರಿಗೂ ಈ ಗೌರವ ಸಂದಿದೆ.

ಶಶಿ ಕಪೂರ್ ಅವರು ತಂದೆಯಂತೆಯೇ ರಂಗಭೂಮಿ ಕಲಾವಿದರಾಗಿ ಬೆಳೆದು ಚಿತ್ರರಂಗದಲ್ಲಿ ಸ್ಟಾರ್ ಆಗಿ ಬೆಳೆದರು. ಹಿಂದಿ ಚಿತ್ರರಂಗದ ಶೋ ಮ್ಯಾನ್ ರಾಜ್ ಕಪೂರ್ ಅವರ 'ಆವಾರ' ಚಿತ್ರದಲ್ಲಿ ಬಾಲನಟನಾಗಿ ಬೆಳ್ಳಿತೆರೆ ಪ್ರವೇಶಿಸಿದ ಶಶಿ ಕಪೂರ್, 1960ರಲ್ಲಿ 'ಧರ್ಮ್‌ಪುತ್ರ' ಚಿತ್ರದ ಮೂಲಕ ನಾಯಕನಾಗಿ ಅಭಿನಯಿಸತೊಡಗಿದರು.

ಸುಮಾರು 116 ಹಿಂದಿ ಚಿತ್ರಗಳಲ್ಲಿ ನಟಿಸಿದ್ದು, ಅವುಗಳ ಪೈಕಿ 61 ಚಿತ್ರಗಳಲ್ಲಿ ಹೀರೋ ಆಗಿದ್ದಾರೆ. 21 ಚಿತ್ರಗಳಲ್ಲಿ ಪೋಷಕ ಪಾತ್ರದಲ್ಲಿ, 7 ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಶಶಿ ಅಭಿನಯಿಸಿದ್ದಾರೆ. "ಜಬ್ ಜಬ್ ಫೂಲ್ ಖಿಲೆ", "ದೀವಾರ್", "ಕಭೀ ಕಭೀ", "ತ್ರಿಶೂಲ್" ಮತ್ತಿತರ ಸಿನಿಮಾಗಳ ಮೂಲಕ ಪ್ರೇಕ್ಷಕರನ್ನು ರಂಜಿಸುತ್ತಾ ಬಂದಿರುವ ಶಶಿ ಇತ್ತೀಚೆಗಷ್ಟೇ 77ನೇ ಜನ್ಮದಿನವನ್ನು ಆಚರಿಸಿಕೊಂಡಿದ್ದಾರೆ. ಜನ್ಮದಿನದ ಖುಷಿಗೆ ಪ್ರಶಸ್ತಿ ಸಂಭ್ರಮವೂ ಈ ವರ್ಷ ಜತೆಯಾಗಿದೆ. 2011ರಲ್ಲಿ ಪದ್ಮಭೂಷಣ ಪ್ರಶಸ್ತಿ ಪಡೆದಿದ್ದ ಶಶಿ ಕಪೂರ್ ಅವರು ಮೂರು ಬಾರಿ ರಾಷ್ಟ್ರ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ತಾಯಿಗೆ ತಕ್ಕ ಮಗನಾಗಲಿರುವ ಅಜಯ್ ರಾವ್

ಇದೇನಪ್ಪ ಇದು ಅಜಯ್ ರಾವ್ ಈಗ ತಮ್ಮ ತಾಯಿಗೆ ತಕ್ಕ ಮಗ ಆದ್ರಾ ಅಂತ ಅಂದುಕೊಂಡ್ರಾ? ವಿಷಯ ಅದಲ್ಲ, ಕಳೆದ ವಾರ ತೆರೆಕಂಡ 'ಕೃಷ್ಣಲೀಲಾ' ಚಿತ್ರದ ಜನರ ರೆಸ್ಪಾನ್ಸ್ ನೋಡಿ ನಿರ್ದೇಶಕ ಶಶಾಂಕ್ ಮತ್ತು ನಾಯಕ ನಟ ಅಜಯ್ ರಾವ್ ಫುಲ್ ಖುಷ್ ಆಗಿದ್ದಾರಂತೆ. ಇದೇ ಖುಷಿಯಲ್ಲಿ ಶಶಾಂಕ್ ಮತ್ತು ಅಜಯ್ ತಮ್ಮ ಹೊಸ ಚಿತ್ರವನ್ನ ಅನೌನ್ಸ್ ಮಾಡಿದ್ದಾರೆ.

1978ರಲ್ಲಿ ಡಾ.ರಾಜ್‌ಕುಮಾರ್, ಪದ್ಮಪ್ರಿಯಾ, ಸಾಹುಕಾರ್ ಜಾನಕಿ ಅಭಿನಯದಲ್ಲಿ ತೆರೆಕಂಡು ಅಭೂತಪೂರ್ವ ಯಶಸ್ವಿ ದಾಖಲಿಸಿದ್ದ ಚಿತ್ರ 'ತಾಯಿಗೆ ತಕ್ಕ ಮಗ'. ಈಗ ಇದೇ ಹೆಸರನ್ನಿಟ್ಟುಕೊಂಡು ಶಶಾಂಕ್ ಹೊಸ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ.



"ಹೆಸರು ಒಂದೇ ಆಗಿದ್ದರೂ, ಅಣ್ಣಾವ್ರ ಸಿನಿಮಾಗೂ, ಈ ಚಿತ್ರಕ್ಕೂ ಸಂಬಂಧವಿಲ್ಲ, ಇದು ತಾಯಿ ಮಗನ ಸೆಂಟಿಮೆಂಟ್ ಚಿತ್ರ ಅನ್ನುತ್ತಾರೆ ಶಶಾಂಕ್. ವಿಶೇಷ ಅಂದ್ರೆ ತಾಯಿಗೆ ತಕ್ಕ ಮಗ' ಅಂತ ಅನಿಸಿಕೊಳ್ಳುವುದಕ್ಕೆ ಹೊರಟಿರುವ ಅಜಯ್ ರಾವ್ ನಿಜಜೀವನದಲ್ಲೂ ತಾಯಿ ಹಾಕಿದ ಗೆರೆಯನ್ನ ಎಂದೂ ದಾಟಿಲ್ಲವಂತೆ.

ಅದಾಗ್ಲೇ ವಾಣಿಜ್ಯ ಮಂಡಳಿಯಲ್ಲಿ ಟೈಟಲ್ ರಿಜಿಸ್ಟರ್ ಕೂಡ ಮಾಡಿಸಿದ್ದಾರೆ. ಸದ್ಯಕ್ಕೆ ಇನ್ನೂ ಪ್ಲಾನಿಂಗ್ ಹಂತದಲ್ಲಿರುವ ಈ ಚಿತ್ರ ಶಶಾಂಕ್ ಅವರ 'ಮುಂಗಾರು ಮಳೆ-2' ಚಿತ್ರದ ನಂತರ ಸೆಟ್ಟೇರುವ ಸಾಧ್ಯತೆ ಇದೆ.

ಖಿನ್ನತೆಗೆ ಒಳಗಾಗಿದ್ದ ದೀಪಿಕಾ ಪಡುಕೋಣೆ



ಹಲವು ನಾಯಕ ನಟಿಯರು ಖಿನ್ನತೆಗೆ ಒಳಗಾಗುವುದು ಸಹಜ. ಅದು ಅವರ ಚಿತ್ರಗಳು ಸಾಲು ಸಾಲು ಸೋಲು ಕಂಡಾಗ, ಚಿತ್ರಗಳಲ್ಲಿ ಅವಕಾಶಗಳಿಲ್ಲದೆ ಇರುವಾಗ, ತಮ್ಮ ವೈಯಕ್ತಿಕ ಬದುಕಿನಲ್ಲಿ ಸೋತಾಗ ಅವರು ಹೀಗೆ ಖಿನ್ನತೆಗೆ ಒಳಗಾಗುತ್ತಾರೆ. ಆದರೆ ಇಲ್ಲೊಬ್ಬ ನಟಿ ಎಲ್ಲವೂ ಸರಿಯಿರುವಾಗಲೆ ಖಿನ್ನತೆಗೆ ಒಳಗಾಗಿದ್ದಾರಂತೆ. ಯಾರು ಈ ನಟಿ? ಅಂತ ಅಂದುಕೊಂಡ್ರ?

ಆಕೆ ಬಾಲಿವುಡ್‌ನ ಗುಳಿ ಕೆನ್ನೆ ಸುಂದರಿ ಕನ್ನಡತಿ ದೀಪಿಕಾ ಪಡುಕೋಣೆ.

ಇತ್ತೀಚೆಗೆ ಖಾಸಗಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಈ ವಿಷಯವನ್ನು ಸ್ವತಃ ಅವರೇ ಬಹಿರಂಗಪಡಿಸಿದ್ದಾರೆ. 2014ರ ಆರಂಭದಲ್ಲಿ ಬಾಲಿವುಡ್ ಕ್ವೀನ್ ಎಂಬ ಬಿರುದು ಪಡೆಯುತ್ತಿರುವಾಗಲೇ ತೀವ್ರತ[...] ಖಿನ್ನತೆ ಆಕೆಯನ್ನು ಆವರಿಸಿತ್ತು.

"ಬೆಳಗ್ಗೆ ನಿದ್ದೆಯಿಂದ ಏಳಲೂ ಸಾಧ್ಯವಾಗುತ್ತಿರಲಿಲ್ಲ, ಎಲ್ಲವೂ ಶೂನ್ಯ[...] ಭಾವನೆ, ದಿಕ್ಕೇ ತೋಚದಂತಹ ಸ್ಥಿತಿ ಏಳುವದೇ ಬೇಡ, ಮಲಗಿಕೊ[...] ಇರೋಣ ಎಂದೆನಿಸುತಿತ್ತು, ಕೆಲವೊಮ್ಮೆ ಜೋರಾಗಿ ಅಳುತ್ತಿದ್ದೆ. ಹೊರಬ[...] ಅದನ್ನು ತೋರಿಸಿಕೊಳ್ಳುತ್ತಿರಲಿಲ್ಲ, ಒಮ್ಮೊಮ್ಮೆ ಎಲ್ಲರೊಂದಿಗೆ ಬೆರೆತು ನ[...] ಮರೆಯುತ್ತಿದ್ದೆ. ಇನ್ನೊಮ್ಮೆ ಎಲ್ಲರ ಜೊತೆಯಲ್ಲಿ ಇರುವಾಗಲೆ ನ[...] ಹೆಚ್ಚಾಗುತಿತ್ತು, ನನ್ನ ಕುಟುಂಬದ ಸದಸ್ಯರು ನನ್ನ ಬೆಂಬಲಕ್ಕೆ ನಿಂತುಕೊಳ್ಳ[...] ನಾನು ಏನಾಗುತ್ತಿದ್ದೆನೊ. ನೆನೆಸಿಕೊಂಡರೆ ಭಯವಾಗುತ್ತದೆ. ಒಟ್ಟಿನಲ್ಲಿ[...] ಕುಟುಂಬದ ಸದಸ್ಯರ ಬೆಂಬಲದಿಂದ ದೊಡ್ಡ ಕಷ್ಟದಿಂದ ಪಾರಾದೆ" [...] ದೀಪಿಕಾ ಹೇಳಿದ್ದಾರೆ.

ಒಟ್ಟಿನಲ್ಲಿ ಖಿನ್ನತೆಗೆ ಒಳಗಾದವರಿಗೆ ಕುಟುಂಬ ಸದಸ್ಯರ ಮತ್ತು ಸ್ನೇ[...] ಬೆಂಬಲ ಬೇಕೇಬೇಕಂತೆ.

ವಜ್ರ ಕಾಯಕ್ಕೆ ಮಾಡೆಲ್ ಶುಭ್ರಾ ಎಂಟ್ರಿ

ಬೆಂಗಳೂರು ಮೂಲದ ಸೂಪರ್ ಮಾಡೆಲ್ ಶುಭ್ರಾ ಅಯ್ಯಪ್ಪ ಸ್ಯಾಂಡಲ್‌ವುಡ್‌ಗೆ ಪದಾರ್ಪಣೆ ಮಾಡಿದ್ದಾರೆ. ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಮುಖ್ಯ ಭೂಮಿಕೆಯಲ್ಲಿರುವ, ಎ.ಹರ್ಷ ಆಕ್ಷನ್ ಕಟ್ ಹೇಳುತ್ತಿರುವ 'ವಜ್ರಕಾಯ' ಚಿತ್ರದಲ್ಲಿ ಅವರು ವಿಶೇಷ ಪಾತ್ರವನ್ನು



ಪೋಷಿಸುತ್ತಿದ್ದಾರೆ. ತಮಿಳು ನಟ ಧನುಷ್ ಹಾಡಿರುವ ಈ ಹಾಡಿಗೆ ಶುಭ್ರಾ ಸೊಂಟ ಬಳುಕಿಸಿರುವುದು ವಿಶೇಷ.

ಚಿತ್ರದ ಆರಂಭಿಕ 15 ನಿಮಿಷಗಳ ಕಾಲ ಶುಭ್ರಾ ಕಾಣಿಸಲಿದ್ದಾರೆ. ಈ ಬಗ್ಗೆ ಮಾತನಾಡಿರುವ ಶುಭ್ರಾ "ಇದುವರೆಗಿನ ಶೂಟಿಂಗನ್ನು ಸಖತ್ ಎಂಜಾಯ್ ಮಾಡಿದ್ದೇನೆ. ಇದೇ ತಿಂಗಳಲ್ಲಿ ವೆನಿಸ್‌ನಲ್ಲಿ ಹಾಡಿನ ಚಿತ್ರೀಕರಣ ನಡೆಯಲಿದ್ದು ನಾವೆಲ್ಲಾ ಹೊರಡಲು ಸಿದ್ಧವಾಗಿದ್ದೇವೆ" ಎಂದಿದ್ದಾರೆ. ತಾನು ಇದುವರೆಗೂ ನೋಡಿರುವ ತಾರೆಗಳ ಪೈಕಿ ಶುಭ್ರಾ ಅವರು ಬಹಳ ಗೌರವಾನ್ವಿತ ತಾರೆ ಎಂದು ಹರ್ಷ ಈಗಾಗಲೆ ಸರ್ಟಿಫಿಕೇಟ್ ನೀಡಿದ್ದಾರೆ. "'ಭಜರಂಗಿ' ಚಿತ್ರವನ್ನು ಬಹಳ ಪ್ರೀತಿಯಿಂದ ಮಾಡಿದ್ದೆ. ಜನರೂ ಅದಕ್ಕೆ ಉತ್ತಮ ಬೆಂಬಲ ನೀಡಿ, ಸ್ವೀಕರಿಸಿದರು. ಆದರೆ 'ಭಜರಂಗಿ' ಚಿತ್ರಕ್ಕೆ 'ಎ' ಸರ್ಟಿಫಿಕೇಟ್ ಸಿಕ್ಕಿತ್ತು ಎನ್ನುವ ನೋವು ನನ್ನನ್ನು ಕಾಡುತ್ತಿತ್ತು. 'ವಜ್ರಕಾಯ' ಚಿತ್ರಕ್ಕೆ ಖಂಡಿತ ಯು ಸರ್ಟಿಫಿಕೇಟ್ ಸಿಗುವ ಭರವಸೆ ಇದೆ" ಎನ್ನುತ್ತಾರೆ ಹರ್ಷ.

ಪವರ್ ಸ್ಟಾರ್ ಮುಂದಿನ ಚಿತ್ರಕ್ಕೆ ಬಾಂಬೆ ಬೆಡಗಿ

ಅಪ್ಪು ಮುಂದಿನ ತಿಂಗಳು ತಮ್ಮ ಹೊಸ ಸಿನಿಮಾಗೆ ಮುಹೂರ್ತ ಫಿಕ್ಸ್ ಮಾಡಿದ್ದಾರೆ. ಅಪ್ಪುಗೆ ನಾಯಕಿಯಾಗುವುದಕ್ಕೆ ಪಂಜಾಬ್ ಕುವರಿ ಅಸ್ತು ಅಂದಿದ್ದಾರೆ. ಕಿಂಗ್ ಖಾನ್‌ಗೆ ಹೀರೋಯಿನ್ ಆಗಬೇಕಿದ್ದ ಈ ಬೆಡಗಿ, ಇದೀಗ ಸ್ಯಾಂಡಲ್‌ವುಡ್‌ಗೆ ಅಡಿಯಿಡುತ್ತಿದ್ದಾರೆ. ಯಾರು ಈ ಬೆಡಗಿ? ವೃತ್ತಿಯಲ್ಲಿ ಏರ್ ಹಾಸ್ಟೆಸ್ ಆಗಿರುವ ಈ ಚೆಲುವೆಯ ಹೆಸರು ಸೋನಂ ಬಾಜ್ವಾ. ಕಳೆದ ವರ್ಷ 'ಕಪ್ಪಲ್' ಅನ್ನುವ ತಮಿಳು ಚಿತ್ರವೊಂದರಲ್ಲಿ ಅಮೋಘ ಅಭಿನಯ ನೀಡಿದ ಈಕೆಗೆ ಕಾಲಿವುಡ್‌ನಲ್ಲಿ ಬಹುಬೇಡಿಕೆ ಶುರುವಾಗಿತ್ತು. ಇದೀಗ ಪುನೀತ್ ಅಭಿನಯದ ಚಿತ್ರದಲ್ಲಿ ನಟಿಸುತ್ತಿದ್ದಾಳೆ. 'ಎಂಗೆಯುಂ ಎಪ್ಪೋದುಮ್'ನಂತಹ ಬ್ಲಾಕ್‌ಬಸ್ಟರ್ ಸಿನಿಮಾ ಕೊಟ್ಟಿದ್ದ ಶರವಣನ್ ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com